ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 16 । ಸಂಚಿಕೆ 5 । ಜನವರಿ 24–30, 2022 । ಪುಟ 16 । ರೂ. 10/-

http://janashakthi.wordpress.com e-mail : js_weekly@yahoo.com



ಸಿಪಿಐ(ಎಂ) 23ನೇ ಮಹಾಧಿವೇಶನಕ್ಕೆ ಸಿದ್ಧತೆ ಆರಂಭ



ನಾರಾಯಣ ಗುರು ಸ್ತಬ್ಧಚಿತ್ರ ನಿರಾಕರಣೆ: ದಲಿತ-ಹಿಂದುಳಿದವರ ಅವಮಾನ

ಒಕ್ಕೂಟ ತತ್ವ-ಸ್ವಾತಂತ್ರ್ಯ ಸಂಗ್ರಾಮದ ಮೌಲ್ಯಗಳ ಬಗ್ಗೆ ತಾತ್ಸಾರ

ತಲೆಯ ಮೇಲೊಂದು ಸೂರು – ಇನ್ನೂ ಕನಸು







ವೊಡಾ ಫೋನ್ –ಐಡಿಯಾದಲ್ಲೇಕೆ ಸರ್ಕಾರದ ಶೇರುದಾರಿಕೆ?

ಕೋವಿಡ್ 3ನೇ ಅಲೆ ಎದುರಿಸಲು ಸಜ್ಜಾಗದ ಸರ್ಕಾರ

ಜನವರಿ 24 – ಮನೆ ಮನೆಗಳಿಂದ ಪ್ರತಿಭಟನೆಗೆ ಎಡ ಪಕ್ಷಗಳ ಕರೆ

ಜನವರಿ 31 ರಂದು ‘ವಿಶ್ವಾಸಘಾತ ದಿನ’; ಲಖಿಮ್‌ಪುರ್ ಖೇರಿಯಿಂದ ಚಳುವಳಿ ಮತ್ತು ‘ಮಿಷನ್ ಉತ್ತರಪ್ರದೇಶ’ ಮುಂದುವರಿಕೆ-ಸಂಯುಕ್ತ ಕಿಸಾನ್ ಮೋರ್ಚಾ

ಪುಟ 10 ನೋಡಿ ಗಡಿಗಳಲ್ಲಿನ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿದ ಒಂದು ತಿಂಗಳ ನಂತರ ಸಿಂಘು ಗಡಿಯಲ್ಲಿ ಜನವರಿ 15 ರಂದು ನಡೆದ ಸಭೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ)ದ ಮುಖಂಡರು ಮುಂದಿನ ಕಾರ್ಯಕ್ರಮಗಳ ಬಗ್ಗೆ ಮೂರು ಮಹತ್ವದ ನಿರ್ಣಯಗಳನ್ನು ಕೈಗೊಂಡರು.

ಮೊದಲನೆಯದಾಗಿ, ನವಂಬರ್ 29ರಂದು ಸಂಸತ್ತಿನಲ್ಲಿ ಮೂರು ಕೃಷಿ ಕಾಯ್ದೆಗಳನ್ನು ಹಿಂಗೆದುಕೊಂಡ ನಂತರ ಯಾವ ಲಿಖಿತ ಆಶ್ವಾಸನೆಗಳ ಮೇಲೆ ಚಳುವಳಿಯಲ್ಲಿ ಸ್ಥಗಿತಗೊಳಿಸಲಾಗಿದೆಯೋ ಅವುಗಳಲ್ಲಿ ಯಾವುದನ್ನೂ ಕೇಂದ್ರ ಸರಕಾರ ಈಡೇರಿಸಿಲ್ಲ ಎಂಬ ಬಗ್ಗೆ ಬೇಸರ ಮತ್ತು ಕ್ರೋಧವನ್ನು ಎಸ್‌ಕೆಎಂ ವ್ಯಕ್ತಪಡಿಸಿದೆ.

ರೈತರ ವಿರುದ್ಧ ದಾಖಲಾದ ಪ್ರಕರಣಗಳನ್ನು ಹಿಂಪಡೆಯಲು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುವುದಾಗಿ ಕೇಂದ್ರ ಸರಕಾರ ಹೇಳಿತ್ತು. ಆದರೆ ಇದುವರೆಗೂ ಬಿಜೆಪಿಯೇ ನಡೆಸುತ್ತಿರುವ ಉತ್ತರಪ್ರದೇಶ, ಉತ್ತರಾಖಂಡ, ಮಧ್ಯಪ್ರದೇಶ ಮತ್ತು ಹಿಮಾಚಲಪ್ರದೇಶದ ರಾಜ್ಯ ಸರಕಾರಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಬಿಜೆಪಿ ನೇತೃತ್ವದ ಹರ್ಯಾಣ ಸರಕಾರ ಕಾಗದದ ಮೇಲಷ್ಟೇ ಕೆಲವು ಕ್ರಮಗಳನ್ನು ಕೈಗೊಂಡಿದೆ. ಉಳಿದ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರ ಈ ಕುರಿತು ಪತ್ರಗಳನ್ನೂ ಕಳಿಸಿಲ್ಲ.

ಒಂದು ವರ್ಷದ ಆಂದೋಲನದ ನಂತರ, ಪ್ರತಿಭಟನಾ ಸ್ಥಳಗಳಲ್ಲಿ ನಿಧನರಾದ ರೈತರ ಕುಟುಂಬದವರಿಗೆ ಪರಿಹಾರ ಒದಗಿಸುವುದಾಗಿ ನೀಡಿದ ಆಶ್ವಾಸನೆಯ ಮೇಲೂ ಬಿಜೆಪಿಯೇತರ ಸರಕಾರವಿರುವ ಪಂಜಾಬಿನಲ್ಲಿ ಬಿಟ್ಟು ಬೇರೆಲ್ಲೂ ಯಾವುದೇ ಕ್ರಮ ಆರಂಭಿಸಿಲ್ಲ.

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತಂತೆ ರಚಿಸುವುದಾಗಿ ಹೇಳಿದ ಸಮಿತಿಯ ಬಗ್ಗೆ, ಅದರ ಸ್ವರೂಪ ಮತ್ತು ಅದರ ಕಾರ್ಯವ್ಯಾಪ್ತಿಯ ಬಗ್ಗೆ ಯಾವ ಮಾಹಿತಿಯನ್ನೂ ಪ್ರಕಟಿಸಿಲ್ಲ.

ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿಲ್ಲ ಎಂಬುದನ್ನು ಬಿಟ್ಟರೆ, ಎಸ್‌ಕೆಎಂ ನೊಂದಿಗೆ ಈ ಕುರಿತು ಮಾತುಕತೆ ನಡೆಸಲಾಗುವುದು ಎಂಬ ಆಶ್ವಾಸನೆ ಕೂಡ ಹಾಗೆಯೇ ಉಳಿದಿದೆ.


ಜನವರಿ 15 ರಂದು ಎಸ್‌ಕೆಎಂ ಮುಖಂಡರ ಪತ್ರಿಕಾಗೋಷ್ಠಿ

ರೈತರಿಗೆ ಮಾಡಿರುವ ಈ ವಿಶ್ವಾಸಘಾತದ ವಿರುದ್ಧ ಜನವರಿ 31ರಂದು ದೇಶಾದ್ಯಂತ ‘ವಿಶ್ವಾಸಘಾತ ದಿನ’ವನ್ನು ಜಿಲ್ಲಾ ಮತ್ತು ತಾಲೂಕು ಮಟ್ಟಗಳಲ್ಲಿ ಭಾರೀ ಮತಪ್ರದರ್ಶನಗಳ ಮೂಲಕ ಆಚರಿಸಲು ಎಸ್‌ಕೆಎಂ ನಿರ್ಧರಿಸಿದೆ.

ಎರಡನೆಯದಾಗಿ, ಲಖಿಮ್‌ಪುರ್ ಖೇರಿ ಹತ್ಯಾಕಾಂಡದ ಹಿಂದೆ ಪಿತೂರಿ ಇರುವುದನ್ನು ಎಸ್‌ಐಟಿ ವರದಿ ಒಪ್ಪಿಕೊಂಡಿದ್ದರೂ ಮೋದಿ ಮತ್ತು ಯೋಗಿ ಸರಕಾರಗಳು ಭಂಡ ನಿಲುವನ್ನು ತಳೆದಿರುವುದು ನೋಡಿದರೆ, ಇವರಿಗೆ ಸಾರ್ವಜನಿಕ ಜೀವನದಲ್ಲಿ ಘನತೆಯ ಬಗ್ಗೆ ಯಾವ ಪರಿವೆಯೂ ಇಲ್ಲ ಎಂದು ಸ್ಪಷ್ಟವಾಗುತ್ತದೆ ಎಂದಿರುವ ಎಸ್‌ಕೆಎಂ ಈ ಹತ್ಯಾಕಾಂಡದ ಪ್ರಧಾನ ಪಿತೂರಿಗಾರ ಅಜಯ್ ಮಿಶ್ರಾ ಟೇನಿ ಇನ್ನೂ ಕೇಂದ್ರ ಸಂಪುಟದಲ್ಲಿ ಮುಂದುವರೆಯುತ್ತಿರುವುದು, ಅದೇ ವೇಳೆಗೆ ಎಫ್‌ಐಆರ್‌ಗಳಲ್ಲಿ ಹೆಸರಿಸಿದ ರೈತರನ್ನು ಬಂಧಿಸುವಲ್ಲಿ ಉತ್ತರಪ್ರದೇಶ ಸರಕಾರ ಭಾರೀ ಮುತುವರ್ಜಿ ವಹಿಸಿರುವುದು ರೈತರ ಗಾಯಗಳಿಗೆ ಉಪ್ಪು ಸವರುತ್ತಿದೆ ಎಂದು ಖೇದ ವ್ಯಕ್ತಪಡಿಸಿದೆ.

ಇದನ್ನು ವಿರೋಧಿಸಲು, ಎಸ್‌ಕೆಎಂ ಒಂದು ಖಾಯಂ ಮೋರ್ಚಾವನ್ನು ಲಖಿಮ್‌ಪುರ್ ಖೇರಿಯಲ್ಲಿ ಆರಂಭಿಸಲು ನಿರ್ಧರಿಸಿದೆ. ಇದನ್ನು ಯೋಜಿಸಲು ಜನವರಿ 21ರಿಂದ ರಾಕೇಶ್ ಟಿಕಾಯ್ತ್ ನೇತೃತ್ವದಲ್ಲಿ ಎಸ್‌ಕೆಎಂ ನಿಯೋಗ ಅಲ್ಲಿಗೆ ಭೇಟಿ ನೀಡುತ್ತಿದೆ. ಬಿಜೆಪಿ ವಿರುದ್ಧ ಎಸ್‌ಕೆಎಂನ “ಮಿಷನ್ ಉತ್ತರಪ್ರದೇಶ” ಮುಂದುವರೆಯಲಿದ್ದು, ಆಮೂಲಕ ರೈತ-ವಿರೋಧಿ ರಾಜಕೀಯಕ್ಕೆ ಸರಿಯಾದ ಪಾಟ ಕಲಿಸಲಾಗುವುದು ಎಂದು ಎಸ್‌ಕೆಎಂ ಸ್ಪಷ್ಟಪಡಿಸಿದೆ.

ಮೂರನೆಯದಾಗಿ, ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವಂತೆ ಮತ್ತು ಎಂಎಸ್‌ಪಿಗೆ ಕಾನೂನಾತ್ಮಕ ಖಾತರಿ ಆಗ್ರಹಿಸಿ, ದೇಶವನ್ನು ಮಾರ ಹೊರಟಿರುವ ಖಾಸಗೀಕರಣದ ಧಾವಂತದ ವಿರುದ್ಧ ಮತ್ತು ಏರುತ್ತಿರುವ ನಿರುದ್ಯೋಗ ಮತ್ತು ಬೆಲೆಗಳ ವಿರುದ್ಧ **ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿರುವ ಫೆಬ್ರುವರಿ 23-24ರ ಸಾರ್ವತ್ರಿಕ ಮುಷ್ಕರಕ್ಕೆ ಒಂದು ರಾಷ್ಟ್ರವ್ಯಾಪಿ ಗ್ರಾಮೀಣ ಮುಷ್ಕರದ ಮೂಲಕ ಬೆಂಬಲ ನೀಡಲು** ಎಸ್‌ಕೆಎಂ. ನಿರ್ಧರಿಸಿದೆ. ಕಾರ್ಮಿಕ-ರೈತ ಐಕ್ಯತೆ ಕಳೆದ ಒಂದು ವರ್ಷದ ರೈತರ ಮತ್ತು ಕಾರ್ಮಿಕರ ಹೋರಾಟಗಳ ಮುಖ್ಯ ಸಾಧನೆಗಳಲ್ಲಿ ಒಂದು. ಇದನ್ನು ಫೆಬ್ರುವರಿ 23-24ರ ಸಾರ್ವತ್ರಿಕ ಮುಷ್ಕರದ ಮೂಲಕ ಮುಂದೊಯ್ಯಲಾಗುವುದು ಎಂದು ಎಸ್‌ಕೆಎಂ ಹೇಳಿದೆ.






23 ನೇ ಸಿಪಿಐ(ಎಂ) ಮಹಾಧಿವೇಶನಕ್ಕೆ ಸಿದ್ಧತೆ ಆರಂಭ

ಸಿಪಿಐ(ಎಂ)ನ 23 ನೇ ಮಹಾಧಿವೇಶನಕ್ಕೆ ಕೇರಳದ ಕಣ್ಣೂರಿನಲ್ಲಿ ಸಿದ್ಧತೆ ಆರಂಭವಾಗಿದೆ. ಜನವರಿ 17 ರಂದು ನಡೆದ ಸಭೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಪಿಣರಾಯಿ ವಿಜಯನ್ ಸಮಿತಿಯ ಅಧ್ಯಕ್ಷರು, ಕೊಡಿಯೇರಿ ಬಾಲಕೃಷ್ಣನ್ ಪ್ರಧಾನ ಸಂಚಾಲಕರು ಮತ್ತು ಎಂ ವಿ ಜಯರಾಜನ್ ಖಜಾಂಚಿಯಾಗಿರುತ್ತಾರೆ. ಕಾರ್ಯಕಾರಿ ಸಮಿತಿಯಲ್ಲಿ 251 ಸದಸ್ಯರಿರುತ್ತಾರೆ ಸಂಗಟನಾ ಸಮಿತಿಯಲ್ಲಿ 1001 ಸದಸ್ಯರಿರುತ್ತಾರೆ ಎಂದು ತಿಳಿಸಲಾಗಿದೆ.

ಜನವರಿ 19 ರಂದು ಕೇಂದ್ರ ಸಮಿತಿ ಸದಸ್ಯರಾದ ಇ ಪಿ ಜಯರಾಜನ್ 23ನೇ ಮಹಾಧಿವೇಶನದ ಲಾಂಛನವನ್ನು ಬಿಡುಗಡೆ ಮಾಡಿದರು. ಮಲಪ್ಪುರಂನ ಮನು ಕಲ್ಲಿಕ್ಕಾಡ್ ಇದನ್ನು ರಚಿಸಿದ್ದಾರೆ. ಈ ಮೊದಲೇ ಸಿಪಿಐ(ಎಂ) ಕೇಂದ್ರ ಸಮಿತಿ ಮಹಾಧಿವೇಶನದ ದಿನಾಂಕಗಳನ್ನು ನಿರ್ಧರಿಸಿದ ಕೂಡಲೇ ಗೋಡೆ ಬರಹಗಳ ಪ್ರಕ್ರಿಯೆ ಆರಂಭವಾಗಿತ್ತು.









ಕೋವಿಡ್ ಮೂರನೇ ಅಲೆ ಎದುರಿಸಲು ಸಜ್ಜಾಗದ ಸರ್ಕಾರ

ಸಂಪಾದಕೀಯ

ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆ ವೇಗವಾಗಿ ವ್ಯಾಪಿಸುತ್ತಿದೆ. ಕೊರೊನಾ ರೂಪಾಂತರಿ ತಳಿ ಒಮೈಕ್ರಾನ್ ಸೋಂಕಿನ ಲಕ್ಷಣಗಳು ಹೆಚ್ಚಾಗಿ ಕಂಡು ಬರದಿದ್ದರೂ ಕೋವಿಡ್ ಸಾಂಕ್ರಾಮಿಕದ ಲಕ್ಷಣಗಳಾದ ಕೆಮ್ಮು, ಜ್ವರ, ನೆಗಡಿ ಪೀಡಿತರ ಸಂಖ್ಯೆ ಸಾಮಾನ್ಯವಾಗತೊಡಗಿದೆ. ಸೋಂಕಿನ ತೀವ್ರತೆ ಕಡಿಮೆ ಇದ್ದುದರಿಂದ ನೆಗಡಿ, ಕೆಮ್ಮು, ಜ್ವರದಿಂದ ಬಳಲುತ್ತಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗೆ ಹೋಗದೆ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಕೊರೊನಾ ಸೋಕಿತರೆಷ್ಟು? ಬೇರೆ ಕಾಯಿಲೆ ಪೀಡಿತರೆಷ್ಟು ಎಂಬ ಸ್ಪಷ್ಟ ಮಾಹಿತಿ ಸರ್ಕಾರದಲ್ಲಿ ಇಲ್ಲ. ಆರೋಗ್ಯ ಕ್ಷೇತ್ರದ ತಜ್ಞರ ಪ್ರಕಾರ ಫೆಬ್ರುವರಿ ತಿಂಗಳಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಆತಂಕದ ಮಟ್ಟ ತಲಪಲಿದೆ. ಬೊಮ್ಮಾಯಿ ಸರ್ಕಾರ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗದಿರುವುದು ದೇಶಕಂಡ ಬಹುದೊಡ್ಡ ದುರಂತವಾಗಲಿದೆ.

ಕೋವಿಡ್ ಮೊದಲ ಅಲೆಯಲ್ಲಿ 9 ಲಕ್ಷಕ್ಕೂ ಹೆಚ್ಚು ಮಂದಿ ಕೋವಿಡ್ ಪೀಡಿತರಾಗಿದ್ದರು. 12 ಸಾವಿರಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 20 ಲಕ್ಷಕ್ಕೂ ಹೆಚ್ಚು ಮಂದಿ ಸೋಂಕಿತರಾಗಿ 25 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದರು. ಎರಡನೇ ಅಲೆಯಲ್ಲಿ ದಿಢೀರ್ ಸೋಂಕಿತರ ಸಂಖ್ಯೆ ಹೆಚ್ಚಾದ ಕಾರಣದಿಂದಾಗಿ ಎರಡನೇ ಅಲೆ ಮುಗಿಯುವ ಹೊತ್ತಿಗೆ ರಾಜ್ಯದಲ್ಲಿ 37 ಸಾವಿರಕ್ಕೂ ಹೆಚ್ಚು ಜನ ಅಸುನೀಗಿದ್ದರು.

ಬೊಮ್ಮಾಯಿ ಸರ್ಕಾರ ಮುಂದೆ ಬರಬಹುದಾದ ಅನಿರೀಕ್ಷಿತ ಗಂಡಾಂತರವನ್ನು ಎದುರಿಸಲು ಸಜ್ಜಾಗುತ್ತಿಲ್ಲ. ಸರ್ಕಾರದ ಸಿದ್ಧತೆ ಕೇವಲ ಲಾಕ್‌ಡೌನ್ ಘೋಷಣೆಗೆ ಸೀಮಿತವಾಗಿದೆ. ಮುಂಬರುವ ದಿನಗಳಲ್ಲಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಬಹುದು. ಆಗ ಹಾಸಿಗೆಗಳ ಕೊರತೆ ಉಂಟಾಗಬಹುದು. ಹಾಸಿಗೆಗಳಿಗಾಗಿ ಸೋಂಕಿತರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಬೇಕಾಗಬಹುದು. ತೀವ್ರ ಆರೋಗ್ಯ ಸಮಸ್ಯೆ ಇರುವವರಿಗೆ ತುರ್ತು ಚಿಕಿತ್ಸೆ ಒದಗಿಸಲು ತೀವ್ರ ನಿಗಾ ಘಟಕ (ಐಸಿಯು)ಗಳು ಅಗತ್ಯಕ್ಕೆ ತಕ್ಕಂತೆ ಪೂರೈಸಲು ವ್ಯವಸ್ಥೆ ಇರಬೇಕು. ಸೋಂಕಿತರಿಗೆ ಆಮ್ಲಜನಕವನ್ನು ಒದಗಿಸಲು ಅಗತ್ಯ ಪ್ರಮಾಣದಲ್ಲಿ ವೆಂಟಿಲೇಟರ್‌ಗಳನ್ನು ಕೊರತೆಯಾಗದಂತೆ ಒದಗಿಸುವ ವ್ಯವಸ್ಥೆ ಇರಬೇಕು.

ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಹಾಸಿಗೆಗಳಲ್ಲದೆ ಅಗತ್ಯ ಔಷಧ, ಆಮ್ಲಜನಕ ಸೇರಿದಂತೆ ರೋಗ ಸಂಬಂಧಿಸಿದ ಯಾವುದೇ ಔಷದೋಪಚಾರಗಳ ಯಾವುದೇ ಕೊರತೆಯಾಗದಂತೆ ಸರ್ಕಾರ ಪೂರ್ವಸಿದ್ಧತೆ ಮಾಡಿಕೊಂಡಿರಬೇಕು. ಆದರೆ ಬೊಮ್ಮಾಯಿ ಸರ್ಕಾರವಾಗಲಿ, ಆರೋಗ್ಯ ಇಲಾಖೆಯಾಗಲಿ ಇಂತಹ ವಿಷಯಗಳಿಗೆ ಕಾಳಜಿ ತೋರುವುದು ಕಾಣುತ್ತಿಲ್ಲ. ಸರ್ಕಾರದ ಈ ಬೇಜವಾಬ್ದಾರಿತನ ಅಕ್ಷಮ್ಯವಾಗಿದೆ. ಕೊರೋನಾ ಸೋಂಕು ಶೀಘ್ರಗತಿಯಲ್ಲಿ ಹಳ್ಳಿಗಳಿಗೆ ಹರಡುತ್ತಿದೆ. ಮೂರನೇ ಅಲೆ ಮಕ್ಕಳಲ್ಲಿ ಹೆಚ್ಚು ಪರಿಣಾಮ ಉಂಟುಮಾಡುತ್ತಿದೆ. ಶಾಲೆ, ಕಾಲೇಜು, ವಿದ್ಯಾರ್ಥಿ ನಿಲಯಗಳಲ್ಲಿ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿವೆ. ಇಂತಹ ಕಳವಳಕಾರಿ ಸಮಯದಲ್ಲಿ ಸರ್ಕಾರ ಮಲಗಿಕೊಳ್ಳಬಾರದು. ಎಚ್ಚರವಾಗಿದ್ದು ಸಜ್ಜಾಗಿರಬೇಕು.

ಸಧ್ಯಕ್ಕೆ ಸೋಂಕಿತರು ಹೆಚ್ಚಿನ ಸಂಖ್ಯೆಯಲ್ಲಿ ಆಸ್ಪತ್ರೆಗಳಲ್ಲಿ ದಾಖಲಾಗುತ್ತಿಲ್ಲ. ಆದರೆ ಪರಿಸ್ಥಿತಿ ಬದಲಾಗಬಹುದು. ಹೀಗಾಗಿ ರೋಗಿಗಳನ್ನು ಆಸ್ಪತ್ರೆಗೆ ಕೊಂಡೊಯ್ಯಲು ಅಂಬುಲೆನ್ಸ್ ಸೇವೆ ಅಷ್ಟೇನು ಬೇಕಾಗಿಲ್ಲ. ಮೂರನೇ ಅಲೆ ಉಲ್ಬಣಗೊಂಡರೆ ಗಣನೀಯ ಸಂಖ್ಯೆಯಲ್ಲಿ ಅಂಬುಲೆನ್ಸ್ ಸೇವೆ ಬೇಕಾಗುವುದು. ಸರ್ಕಾರ ಮೊದಲೇ ಸಜ್ಜಾಗಿರದಿದ್ದರೆ ರೋಗಿಗಳನ್ನು ಸಕಾಲದಲ್ಲಿ ಆಸ್ಪತ್ರೆಗಳಿಗೆ ತಲುಪಿಸಲಾಗದೆ ಅವರು ಪ್ರಾಣ ಕಳೆದುಕೊಳ್ಳುವಂತಾಗಬಹುದು. ಹಿಂದಿನ ಸಂದರ್ಭದಲ್ಲಿ ಹೀಗಾಗಿತ್ತು. ಅಂಬುಲೆನ್ಸ್ ಸೇವೆಯ ಕೊರತೆಯಿಂದ ಸಾವಿರಾರು ಜನ ಸಾಯುವಂತಾಯಿತು.

ಕೋವಿಡ್ ಚಿಕಿತ್ಸೆಗೆ ನಿಗದಿತ 2 ಲಕ್ಷ ಹಾಸಿಗೆಗಳಲ್ಲಿ 50 ಸಾವಿರ ಹಾಸಿಗೆಗಳು ಮಾತ್ರ ಸರ್ಕಾರಿ ಉಳಿದೆಲ್ಲವೂ ಖಾಸಗಿ ಆಸ್ಪತ್ರೆಗಳಿಗೆ ಸೇರಿವೆ. ಈ ಆಸ್ಪತ್ರೆ ವ್ಯವಸ್ಥೆಯನ್ನು ಜನ ಸಾಮಾನ್ಯರ ಹಿತಕ್ಕಾಗಿ ಮಾಡಲಾಗಿದೆಯಾ ಖಾಸಗಿ ಆಸ್ಪತ್ರೆಗಳು ಲಾಭಗಳಿಸಲು ನೀಡಲಾಗುತ್ತಿದೆಯಾ ಎಂಬ ಪ್ರಶ್ನೆ ಬಲವಾಗಿ ಎದ್ದು ಬರುತ್ತದೆ. ಆರೋಗ್ಯ ಸೇವೆ ಇಂದು ಲಾಭದಾಯಕ ದಂಧೆಗಳಲ್ಲಿ ಒಂದಾಗಿದೆ. ಇಲ್ಲಿ ರೋಗಿ ಮತ್ತು ಆತನ ಆರೋಗ್ಯ ಮುಖ್ಯವಲ್ಲ. ಇಲ್ಲಿ ವೈದ್ಯ ಮತ್ತು ಆತ ಗಳಿಸುವ ಲಾಭವೇ ಮುಖ್ಯ. ಇಂತಹ ಲಾಭಕೋರ ಖದೀಮರ ಪರವಾಗಿರುವ ಸರ್ಕಾರಗಳು ಅಧಿಕಾರ ವಹಿಸಿಕೊಳ್ಳುತ್ತವೆ. ಕೊರೋನಾದಂತಹ ಸಾಂಕ್ರಾಮಿಕ ಹಬ್ಬಿ ಹರಡುವುದನ್ನು ಅವರು ಸ್ವಾಗತಿಸುತ್ತಾರೆ. ಇಂತಹ ಪ್ರವೃತ್ತಿಯನ್ನು ಎಲ್ಲರೂ ಸೇರಿ ಖಂಡಿಸಬೇಕಾಗಿದೆ. ಆರೋಗ್ಯ ಎಲ್ಲರ ಹಕ್ಕಾಗುವಂತೆ ಹೋರಾಡಬೇಕಾಗಿದೆ.

ಕೋವಿಡ್ 3ನೇ ಅಲೆ ಎದುರಿಸಲು ವಹಿಸಬೇಕಾದ ಕ್ರಮಗಳ ಕುರಿತು ಏಳು ಪಕ್ಷಗಳ ಜಂಟಿ ಮನವಿ

ರಾಷ್ಟ್ರ ಹಾಗೂ ರಾಜ್ಯವು ವಿಶಿಷ್ಟ ಹಾಗೂ ವಿಭಿನ್ನ ಪರಿಸ್ಥಿತಿಯನ್ನು ಕೋವಿಡ್–19 ಸಾಂಕ್ರಾಮಿಕದಿಂದ ಎದುರಿಸುತ್ತಿದೆ. ಕೋವಿಡ್ ಮೊದಲನೇ ಅಲೆಯ ವೇಳೆಯಲ್ಲಿ ಮತ್ತು ಎರಡನೇ ಅಲೆಯ ವೇಳೆಯಲ್ಲಿ ಏಳು ಪಕ್ಷಗಳು ಅಂದಿನ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಕೋವಿಡ್–19 ರಿಂದ ಉಂಟಾಗಿರುವ ಆರ್ಥಿಕ ಸಂಕಷ್ಟದ ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಒತ್ತಾಯಗಳನ್ನು ಮಾಡಲಾಗಿತ್ತು. ಆದರೆ ಅಂದಿನ ಸರ್ಕಾರ ನಮ್ಮ ಮನವಿಯನ್ನು ಪುರಸ್ಕರಿಸಿ ಕ್ರಮವಹಿಸಲಿಲ್ಲ. ಪರಿಣಾಮವಾಗಿ ರಾಜ್ಯದ ಜನತೆ ಹಾಗೂ ಆರ್ಥಿಕತೆ ತೀವ್ರ ಸಂಕಷ್ಟಕ್ಕೆ ಒಳಪಟ್ಟಿದೆ.

ಪ್ರಸ್ತುತ ಮೂರನೇ ಅಲೆಯ ಪರಿಣಾಮವಾಗಿ ರಾಜ್ಯದಲ್ಲಿ ಕೋವಿಡ್ ಪಾಸಿಟೀವಿಟಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ರಾಷ್ಟ್ರದಲ್ಲಿ ಶೇಕಡ 10 ರಿಂದ 20 ರಷ್ಟು ಕೋವಿಡ್ ದೃಢದರ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ರಾಜ್ಯವು ಸೇರಿದೆ ಎಂಬುದು ಆತಂಕಕಾರಿ ಅಂಶವಾಗಿದೆ. 20–01–2022 ರ ವರದಿಯಂತೆ ರಾಜ್ಯದಲ್ಲಿ ಒಟ್ಟು 33,76,953 ಸೋಂಕಿತರಿದ್ದು 38,515 ಸಾವುಗಳು ಸಂಭವಿಸಿವೆ. ಪ್ರಸಕ್ತ 2,93,231 ಸಕ್ರಿಯ ಪ್ರಕರಣಗಳಿದ್ದು ಜನವರಿ 20 ರಂದು 47,754 ಹೊಸ ಪ್ರಕರಣಗಳು ದೃಢಪಟ್ಟಿವೆ ಎಂಬ ಅಂಶವು ಮತ್ತಷ್ಟು ಆತಂಕಕಾರಿಯಾಗಿದೆ. ಕೋವಿಡ್ ಸೋಂಕಿತರಲ್ಲಿ 96 ಶೇಕಡ ಮನೆಯಲ್ಲೇ ಪ್ರತ್ಯೇಕ ವಾಸದ ಆರೈಕೆಯಲ್ಲಿದ್ದು ರಾಜ್ಯ ಸರ್ಕಾರದಿಂದ ಅವರಿಗೆ ಸಿಗುತ್ತಿರುವ ನೆರವು ಅತ್ಯಲ್ಪವಾಗಿದೆ. ಇತ್ತೀಚೆಗೆ ಜನವರಿ 18 ರಂದು ಹೊರಡಿಸಿರುವ ಆದೇಶದಂತೆ ಮಾಸ್ಕ್ ಮತ್ತು ಸ್ಯಾನಿಟೈಸರ್‌ಅನ್ನು ವಿತರಿಸಬೇಕೆಂದು ಆದೇಶಿಸಲಾಗಿದೆ. ರಾಜ್ಯದ ಕೋವಿಡ್ ಸೋಂಕಿತರಲ್ಲಿ ಸುಮಾರು 69 ಶೇಕಡ (2,01,714) ಬೆಂಗಳೂರು ನಗರ ಜಿಲ್ಲೆಯಲ್ಲಿ ಇದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ಕೋವಿಡ್ ಮೊದಲನೇ ಮತ್ತು ಎರಡನೇ ಅಲೆಯ ಕಾರಣದಿಂದಾಗಿ ರಾಜ್ಯದ ಆರ್ಥಿಕತೆಯ ಮೇಲೆ ಉಂಟಾಗಿರುವ ಪರಿಣಾಮಗಳನ್ನು ಆಧರಿಸಿ ಏಳು ಪಕ್ಷಗಳು ಜಂಟಿಯಾಗಿ ಈ ಕೆಳಗಿನ ಸಲಹೆಗಳನ್ನು ಬೇಡಿಕೆಗಳ ರೂಪದಲ್ಲಿ ಸಲ್ಲಿಸುತ್ತಿವೆ. ಅವುಗಳನ್ನು ಆಧರಿಸಿ ಕ್ರಮವಹಿಸಬೇಕೆಂದು ಮನವಿ ಮಾಡಿದೆ.

ರಾಜ್ಯದ ಆರ್ಥಿಕತೆ ಮೇಲೆ ಪರಿಣಾಮ:

3.1 ಕಳೆದೆರಡು ಅಲೆಗಳಿಂದ ಮತ್ತು ಸಂಬಂಧಿತ ಲಾಕ್ಡೌನ್ ಪರಿಣಾಮವಾಗಿ ಹಾಗೂ ಕೇಂದ್ರರಾಜ್ಯ ಸರ್ಕಾರಗಳ ನವ ಉದಾರವಾದಿ ನೀತಿಗಳಿಂದಾಗಿ 2011–12 ರ ಸ್ಥಿರ ಬೆಲೆಗಳ ಆಧಾರದಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು ಪ್ರಥಮ ಬಾರಿಗೆ 2020–21ರಲ್ಲಿ ಶೇಕಡ –2.6 ರಷ್ಟು ಋಣಾತ್ಮಕ ಬೆಳವಣಿಗೆಯನ್ನು ಕಂಡಿದೆ. 2021–22 ರಲ್ಲಿ ಮತ್ತು 2022–23 ರಲ್ಲಿಇದು ಮತ್ತಷ್ಟು ಋಣಾತ್ಮಕವಾಗಿರುವ ಸಾಧ್ಯತೆಗಳಿವೆ. ಸಂಘಟಿತ ವಲಯದ ಅತಿ ಹೆಚ್ಚು ಉದ್ಯೋಗ ಒದಗಿಸುವ ಕೈಗಾರಿಕಾ ವಲಯವು ಶೇಕಡ –5.1 ರಷ್ಟು ಮತ್ತು ಸೇವಾ ವಲಯವು ಶೇಕಡ –3.1 ರಷ್ಟು ನಕಾರಾತ್ಮಕ ಬೆಳವಣಿಗೆಯನ್ನು ಕಂಡಿವೆ. ರಾಜ್ಯದ ಅತಿ ಸಣ್ಣ ಕೈಗಾರಿಕೆಗಳಲ್ಲಿ 13,348 ಮತ್ತು ಸಣ್ಣ ಕೈಗಾರಿಕೆಗಳಲ್ಲಿ 1,793 ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದು ಒಟ್ಟು 1,71,639 ಉದ್ಯೋಗಗಳು ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳು 2020–21 ರ ಸಾಲಿನಲ್ಲಿ ನಷ್ಟವಾಗಿವೆ. ರಾಜ್ಯದ ಒಖಒಇ ಗಳಲ್ಲಿ 2017–18ರಲ್ಲಿ ಪ್ರತಿ ಉದ್ಯಮಕ್ಕೆ 9.08 ಇದ್ದ ಉದ್ಯೋಗಿಗಳ ಸಂಖ್ಯೆಯು 2020–21 ರಲ್ಲಿ 6.6 ಕ್ಕೆ ಕುಸಿದಿದೆ.

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (CMIE) ನಡೆಸಿದ ಸರ್ವೇ ಪ್ರಕಾರ 2020 ಏಪ್ರಿಲ್‌ನಲ್ಲಿ ರಾಜ್ಯದಲ್ಲಿನ ನಿರುದ್ಯೋಗ ದರವು ಶೇಕಡ 26.3 ರಷ್ಟು ಏರಿಕೆಯಾಗಿದ್ದು ಶೇಕಡ 29.8 ಕ್ಕೆ ತಲುಪಿರುವುದು ಆತಂಕಕಾರಿ ವಿಷಯ. ರಾಷ್ಟ್ರೀಯ ನಿರುದ್ಯೋಗ ಸರಾಸರಿಯು ಶೇಕಡ 23.5 ರಷ್ಟು ಇರುವಾಗ ರಾಜ್ಯದ ನಿರುದ್ಯೋಗ ದರವು ಶೇಕಡ 29.8 ರಷ್ಟು ಇರುವುದು ಮತ್ತಷ್ಟು ಆತಂಕಕಾರಿ ವಿಷಯವಾಗಿದೆ.

ಪ್ರತಿ ಹಣಕಾಸು ವರ್ಷದಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಕೃಷಿ ವಲಯವು ನೀಡುತ್ತಿದ್ದ ಕೊಡುಗೆಯ ಪಾಲು ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಾ ಬಂದಿತ್ತು. ಆದರೆ 2019–20 ಮತ್ತು 2020–21ರಲ್ಲಿ ಕೋವಿಡ್–19 ಮತ್ತು ಲಾಕ್ಡೌನ್‌ನಿಂದಾಗಿ ಕೈಗಾರಿಕೆ ಮತ್ತು ಸೇವಾ ವಲಯದ ಕೊಡುಗೆಯು ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಸಾಪೇಕ್ಷವಾಗಿ ಕೃಷಿ ವಲಯದ ಕೊಡುಗೆಯು ಏರಿಕೆ ಕಾಣುತ್ತಿದೆ. ಆದರೂ ಸಹಾ 2019–20ರಲ್ಲಿ ಶೇಕಡ 12.3 ರಷ್ಟಿದ್ದ ಕೃಷಿ ವಲಯದ ಕೊಡುಗೆಯು 2020–21ರಲ್ಲಿ 6.4 ಕ್ಕೆ ಕುಸಿದಿದೆ. ಆದರೆ 2019ರ ರಾಷ್ಟ್ರೀಯ ಸ್ಯಾಂಪಲ್ ಸರ್ವೇ ವರದಿಯಂತೆ ಗ್ರಾಮೀಣ ಭಾರತದಲ್ಲಿನ ಕೃಷಿ ಕುಟುಂಬಗಳು ಮತ್ತು ಭೂಮಿ ಹಾಗೂ ಜಾನುವಾರು ಹಿಡುವಳಿ ಕುರಿತ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿನ ಒಟ್ಟು 77.50 ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ ಕೃಷಿಯೇತ್ತರ ಕುಟುಂಬಗಳು 35.08 ಲಕ್ಷಗಳಾಗಿವೆ. ಅಂದರೆ ಶೇಕಡ 45.2 ರಷ್ಟು ಕುಟುಂಬಗಳು ಕೃಷಿಯೇತ್ತರ ಆದಾಯ ಮೂಲಗಳನ್ನು ಹೊಂದಿರುವ ಕುಟುಂಬಗಳಾಗಿವೆ. ಕೋವಿಡ್ ಲಾಕ್ಡೌನ್ ಪರಿಣಾಮವಾಗಿ ನಗರದಿಂದ ಗ್ರಾಮೀಣ ಪ್ರದೇಶಗಳಿಗೆ ದೊಡ್ಡ ಪ್ರಮಾಣದ ಅಸಂಘಟಿತ ಕಾರ್ಮಿಕರು ಮರುವಲಸೆ ಹೋಗಿದ್ದಾರೆ. ಅವರು ಪೂರ್ಣ ಪ್ರಮಾಣದಲ್ಲಿ ನಗರಗಳಿಗೆ ಹಿಂತಿರುಗಿಲ್ಲ. ಇವರ ಒತ್ತಡವು ಗ್ರಾಮೀಣ ಪ್ರದೇಶದ ಆರ್ಥಿಕತೆಯ ಮೇಲೆ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯದಲ್ಲಿನ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜಾರಿಯು ಸಹಾ ಅತ್ಯಂತ ನಿರಾಶಾದಾಯಕವಾಗಿದೆ. 2019–20 ರಲ್ಲಿ ಪ್ರತಿ ಕುಟುಂಬಕ್ಕೆ 42 ಸರಾಸರಿ ಮಾನವ ದಿನಗಳ ಕೆಲಸ ಒದಗಿಸಿದ್ದರೆ. 2020–21ರ ಡಿಸೆಂಬರ್ ವೇಳೆಗೆ 42.33 ಸರಾಸರಿ ಮಾನವ ದಿನಗಳ ಕೆಲಸ ಒದಗಿಸಲಾಗಿದೆ. ಯೋಜನೆಯಂತೆ ಪ್ರತಿ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಖಾತ್ರಿಯಾಗಿ ಒದಗಿಸಬೇಕಿದೆ. 2019–20 ರಲ್ಲಿ 21,241 ಕುಟುಂಬಗಳಿಗೆ ಮತ್ತು 2020–21 ರಲ್ಲಿ 30,028 ಕುಟುಂಬಗಳಿಗೆ ಮಾತ್ರ 100 ದಿನಗಳ ಉದ್ಯೋಗಗಳನ್ನು ಪೂರೈಸಲಾಗಿದೆ. ಆದರೆ ಈ ಒಂದು ವರ್ಷದ ಕಾಲಾವಧಿಯಲ್ಲಿ 7.44 ಲಕ್ಷ ಕುಟುಂಬಗಳು ಹೆಚ್ಚುವರಿಯಾಗಿ ಉದ್ಯೋಗ ಚೀಟಿಯನ್ನು ಉದ್ಯೋಗ ಬಯಸಿ ಪಡೆದಿವೆ ಎಂಬುದು ಪರಿಸ್ಥಿತಿಯ ತೀವ್ರತೆಯನ್ನು ತೋರುತ್ತದೆ.

ಕೋವಿಡ್ ಮೊದಲನೇ ಅಲೆ ಸಂದರ್ಭದಲ್ಲಿ ರಾಜ್ಯ ಸರ್ಕಾರವು ರೂಪಿಸಿ ಅಂಗೀಕರಿಸಿರುವ ಭೂ ಸ್ವಾಧಾರಣಾ ತಿದ್ದುಪಡಿ ಕಾಯ್ದೆ, ಭೂ ಕಂದಾಯ ತಿದ್ದುಪಡಿ ಕಾಯ್ದೆ, ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆಗಳು ರಾಜ್ಯದ ಗ್ರಾಮೀಣ ಆರ್ಥಿಕತೆಯ ಮೇಲಿನ ಪರಿಸ್ಥಿತಿಯನ್ನು ಮತ್ತಷ್ಟು ದುಸ್ಥಿತಿಗೆ ದೂಡಲಿವೆ. ಈಗಾಗಲೇ APMC ಮಾರುಕಟ್ಟೆಗಳು ಇದರ ಪರಿಣಾಮಗಳನ್ನು ಎದುರಿಸುತ್ತಿವೆ. ಮಾತ್ರವಲ್ಲದೆ ಪುಟ 5 ಕ್ಕೆ

ಕೋವಿಡ್ 3 ನೇ ಅಲೆ ನಿಯಂತ್ರಣಕ್ಕೆ ಕ್ರಮ ವಹಿಸಲು ಹಾಗು ಪರಿಹಾರಕ್ಕೆ ಒತ್ತಾಯಿಸಿ ಜನವರಿ 24 ರಂದು ಮನೆ ಮನೆಯಿಂದ 7 ಪಕ್ಷಗಳ ಜಂಟಿ ಪ್ರತಿಭಟನೆ

ಸಿಪಿಐ, ಸಿಪಿಐ(ಎಂ), ಎಸ್‌ಯುಸಿಐ(ಸಿ), ಸಿಪಿಐ(ಎಂಎಲ್) (ಲಿಬರೇಷನ್), ಎಐಎಫ್‌ಬಿ, ಆರ್‌ಪಿಐ (ಅಂಬೇಡ್ಕರ್‌ವಾದ), ಸ್ವರಾಜ್ ಇಂಡಿಯಾ ಸೇರಿ 7 ಪಕ್ಷಗಳು ಇಂದು ಆನ್ ಲೈನ್ ನಲ್ಲಿ ಹಮ್ಮಿಕೊಂಡಿದ್ದ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿರುವ ಬಹಿರಂಗ ಪತ್ರವನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದರು.

ಜನವರಿ 24 ರಂದು ರಾಜ್ಯಾದ್ಯಂತ ಮನೆ ಮನೆಯಿಂದಲೆ ಪ್ರತಿಭಟನೆ ನಡೆಸಿ ಆನ್‌ಲೈನ್‌ನಲ್ಲಿ ಸದರಿ ಮನವಿ ಸಲ್ಲಿಸುವುದಾಗಿ ಪ್ರಕಟಿಸಿದೆ.

ಜೀವ ರಕ್ಷಿಸಿ – ಜೀವನ ಉಳಿಸಿ – ಜೀವಿಸಲು ಬಿಡಿ ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಿ 15 ಅಂಶಗಳ ಬೇಡಿಕೆಗಳಿಗೆ ಒತ್ತಾಯಿಸುವುದಾಗಿ ಪ್ರಕಟಿಸಿದೆ.

ಚಂಪಾ ಕೊನೆಯವರೆಗೂ ಕ್ರಿಯಾಶೀಲರಾಗಿದ್ದರು ನುಡಿನಮನದಲ್ಲಿ ಪ್ರೊ. ಪಟ್ಟಾಭಿರಾಮ ಸೋಮಯಾಜಿ

ವರದಿ: ವಾಸುದೇವ ಉಚ್ಚಿಲ್

ಎಲ್ಲೆಲ್ಲಿ ಮೈ ಮರೆವು ಉಂಟಾಗುತ್ತದೋ, ಅಲ್ಲಿ ಜನರನ್ನು ಎಚ್ಚರಿಸುವ ವಿವೇಕ ಕನ್ನಡ ಸಂಸ್ಕೃತಿಯಲ್ಲಿದೆ. ಇದೀಗ ಕ್ರಮೇಣವಾಗಿ ಕಡಿಮೆಯಾಗುತ್ತಿದೆ. ಚಂಪಾ ಎಂದು ಗುರುತಿಸಲ್ಪಟ್ಟ ಪ್ರೊ. ಚಂದ್ರಶೇಖರ ಪಾಟೀಲರು ಅಂಥ ವಿವೇಕದ ಧ್ವನಿಯಾಗಿದ್ದರು. ಅಂಥ ಧ್ವನಿಗಳ ಕೊರತೆ ಇವತ್ತು ಕರ್ನಾಟಕವನ್ನು ಬಾಧಿಸುತ್ತಿದೆ ಎಂಬುದಾಗಿ ಸಾಹಿತಿ ಚಿಂತಕ ಪ್ರೊ.ಪಟ್ಟಾಭಿರಾಮ ಸೋಮಯಾಜಿ ನೀಡಿದರು.
ಹೋರಾಟಗಾರ ಕವಿ ಪ್ರೊ. ಚಂದ್ರಶೇಖರ ಪಾಟೀಲರಿಗೆ ನುಡಿನಮನವನ್ನು ಮಂಗಳೂರು ಸಾಹಿತ್ಯ ಸಮುದಾಯವು ಏರ್ಪಡಿಸಿದ ಸಂದರ್ಭದಲ್ಲಿ ದಿನಾಂಕ 14 ರಂದು ಮಂಗಳೂರು ಸರ್ಕಾರಿ ನೌಕರರ ಸಭಾಂಗಣದಲ್ಲಿ ಅವರು ಮಾತನಾಡುತ್ತಿದ್ದರು.

ಚಂದ್ರಶೇಖರ ಪಾಟೀಲರ ಸಾಹಿತ್ಯ, ಮಾತು, ಭಾಷೆಗಳಲ್ಲಿ ಹೋರಾಟದ ಕೆಚ್ಚಿನ ಜೊತೆ ತೀವ್ರವಾದ ವಿಡಂನೆಯೂ ಇರುತ್ತಿತ್ತು. ತೋರಿಕೆಗೆ ಅದು ವ್ಯಕ್ತಿ ಕೇಂದ್ರಿತವಾಗಿದೆ ಎಂದು ಕಂಡು ಬಂದರೂ, ಒಬ್ಬ ವ್ಯಕ್ತಿಯ ಸ್ಥಾನದಲ್ಲಿ ಅದೇ ಪಂಥದ ಬೇರೊಬ್ಬ ವ್ಯಕ್ತಿಯನ್ನು ಕಾಣಿಸಿದರೂ, ಅದು ಒಪ್ಪಿಕೊಳ್ಳುವಂತಿರುತ್ತಿತ್ತು. ಆದುದರಿಂದ ಅವರ ವಿಡಂಬನೆ ಜಡ ಪಂಥದ ಅಥವಾ ಜಡರೀತಿಯ ವಿರುದ್ಧವಿತ್ತೇ ಹೊರತು ನಿರ್ದಿಷ್ಟ ವ್ಯಕ್ತಿಯ ಬಗೆಗಿರಲಿಲ್ಲ. ವೈಯುಕ್ತಿಕವಾಗಿ ಆ ವ್ಯಕ್ತಿಗಳನ್ನು ಎದುರಾದಾಗ ಅವರ ಮಾತುಕತೆಗಳಲ್ಲಿ ಪ್ರೀತಿ ವ್ಯಕ್ತವಾಗುತ್ತಿತ್ತೆಂದು ಎಲ್ಲರಿಗೂ ಅರಿವಿಗೆ ಬಂದಿತ್ತು. ವಿ.ಕೆ.ಗೋಕಾಕ್, ಗೋಪಾಲಕೃಷ್ಣ ಅಡಿಗ, ಕೆ.ಎಸ್.ನರಸಿಂಹ ಸ್ವಾಮಿ, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಮತ್ತು ಅವರ ಆಪ್ತರು ಎನಿಸಿಕೊಂಡಿದ್ದ ಪಿ.ಲಂಕೇಶ್ ಅವರೆಲ್ಲರ ಬಗೆಗೆ ಪಾಟೀಲರು ಹರಿತವಾದ ವ್ಯಂಗ್ಯ ವಿಡಂಬನೆಗಳನ್ನು ಬಳಸಿದ್ದರೂ, ಕನ್ನಡ ಸಾಹಿತ್ಯದಲ್ಲಿ ಅವರೆಲ್ಲರ ಪ್ರತಿಭೆ ಮತ್ತು ಮಹತ್ವವನ್ನು ಗೌಣಗೊಳಿಸಲಿಲ್ಲ. ಚಂಪಾ ಸೇರಿ ಅವರೆಲ್ಲರೂ ಕನ್ನಡ ಸಂಸ್ಕೃತಿಯ ದೈತ್ಯರೇ ಸರಿ. ಅವರ್‍ಯಾರೂ ಒಬ್ಬರಿಗೊಬ್ಬರು ತೊಡಕಾಗದೇ ತಮ್ಮದೇ ಅನನ್ಯತೆಯನ್ನೇ ಸಾಧಿಸುತ್ತಾ, ಕನ್ನಡದಲ್ಲಿ ಒಂದು ಪ್ರಜಾಸತ್ತಾತ್ಮಕ ಚಿಂತನಾ ವಿನ್ಯಾಸಕ್ಕೆ ಕಾರಣರಾಗಿದ್ದರು. ಆ ಪರಂಪರೆಯನ್ನು ಇಂದೂ ನೆನೆಯುವ ಪರಿಸ್ಥಿತಿ ಇದೆ ಎಂದವರು ನಿರೂಪಿಸಿದರು.

ಚಂಪಾ ಅವರು ಜಡವಾಗುತ್ತಿರುವ ನವೋದಯ ಪಂಥಕ್ಕೆ ಸವಾಲೆಸೆದರು. ತಾವು ನವ್ಯ ಪಂಥದ ಮೂಲಕವೇ ಪ್ರವರ್ಧಮಾನಕ್ಕೆ ಬಂದಿದ್ದರೂ ನವ್ಯದ ರೂಪಕೇಂದ್ರಿತ ವ್ಯಕ್ತಿವಾದಕ್ಕೆ ಸವಾಲೆಸೆದರು. ಸರ್ವಾಧಿಕಾರಿಯಾಗಿರುವ ರಾಜಕೀಯ ವ್ಯವಸ್ಥೆಗೆ ಸಡ್ಡು ಹೊಡೆದು, ತುರ್ತು ಪರಿಸ್ಥಿತಿಯಲ್ಲಿ 26 ದಿನ ಜೈಲುವಾಸವನ್ನೂ ಅನುಭವಿಸಿದರು. ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ಪ್ರಾಧಾನ್ಯ ನೀಡದ ವರದಿ ಮಂಡಿಸಿದ ತಮ್ಮ ಗುರುಗಳನ್ನೇ 'ಗೋಕಾಕ್ ಗೋ ಬ್ಯಾಕ್' ಎಂದು ಉದ್ದೇಶಿಸಿ ಗೋಕಾಕ್ ಚಳವಳಿಗೆ ನಾಯಕತ್ವ ನೀಡಿದರು. ಸಾಹಿತ್ಯ ಪರಿಷತ್ತು, ನವೋದಯ ಹಾಗೂ ನವ್ಯ ಪಂಥವನ್ನು ವಿರೋಧಿಸಿ ಬಂಡಾಯ ಸಾಹಿತ್ಯ ಸಂಘಟನೆಯನ್ನು ಸ್ಥಾಪಿಸಿ ಮುನ್ನಡೆಯುವಲ್ಲಿ ಪ್ರಮುಖ ಸಹಭಾಗಿಯಾದರು.

ಒಂದೊಮ್ಮೆ ವ್ಯವಸ್ಥೆಯ ಭಾಗವಾದಿರೋ ಎಂಬ ಅನಿಸಿಕೆ ಬರುವಂತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದರು. ಅಲ್ಲಿಯೂ ಕೂಡಾ ಪ್ರಜಾಸತ್ತಾತ್ಮಕ ವ್ಯಕ್ತಿತ್ವ ತಂತ್ರ್ಯಕ್ಕೆ ಬೆಲೆ ಸಿಕ್ಕುವಂತೆ ವರ್ತಿಸಿದರು. ಹಿಂದುತ್ವವಾದಿಗಳ ಪ್ರಬಲ ವಿರೋಧದ ನಡುವೆಯೂ ಗೌರಿ ಲಂಕೇಶ್, ಕಲ್ಕುಳಿ ವಿಠಲ ಹೆಗ್ಡೆ ಪರಿಷತ್ತಿನ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುವಂತೆ ಮಾಡಿದರು. ಕಳೆದೆರಡು ದಶಕಗಳಿಂದಲೂ ಕೋಮುವಾದಿ ವಿರೋಧಿ ಹೋರಾಟ, ಸಿಎಎ ವಿರುದ್ಧ ಪ್ರತಿಭಟನೆ, ಸೌಹಾರ್ದ ಕರ್ನಾಟಕದ ಚಳುವಳಿಗಳಲ್ಲಿ ಯಾರೂ ಕರೆಯುವ ಮುನ್ನವೇ ಭಾಗವಹಿಸುತ್ತಿದ್ದರು. ಈ ಮಧ್ಯೆ 50 ವರ್ಷ ಮೀರಿ 'ಸಂಕ್ರಮಣ' ಪತ್ರಿಕೆಯನ್ನು ಪ್ರಕಟಿಸಿದರು.

ಇತ್ತೀಚಿನವರೆಗೂ ಚಂದ್ರಶೇಖರ ಪಾಟೀಲರು ತಮ್ಮ ಕ್ರಿಯಾಶೀಲತೆಯನ್ನು ಡೈನಮಿಸಂ ಅನ್ನು ಉಳಿಸಿಕೊಂಡಿದ್ದರು ಎಂದು ಪ್ರೊ.ಪಟ್ಟಾಭಿರಾಮ ಸೋಮಯಾಜಿ ವಿವರಿಸಿದರು.

ಸಮುದಾಯ ಕರ್ನಾಟಕದ ರಾಜ್ಯ ಉಪಾಧ್ಯಕ್ಷ ವಾಸುದೇವ ಉಚ್ಚಿಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬಂಡಾಯ, ಸಮುದಾಯ, ಸೌಹಾರ್ದ ಚಳುವಳಿಗಳನ್ನು ತೊಡಗಿರುವಂಥ ತನ್ನಂತಹ ಸಾವಿರಾರು ಕನ್ನಡಿಗರ ಚಂಪಾ ಗುರುಸ್ಥಾನದಲ್ಲಿದ್ದರು ಎಂಬುದನ್ನು ಅವರು ನೆನಪಿಸಿದರು. ಜೀವನದುದಕ್ಕೂ ಒಬ್ಬ ವ್ಯವಸ್ತಾ ವಿರೋಧಿ ಎಂಬಂತೆ ಅವರು ಕಂಡಬಂದರೂ ಕಾವ್ಯ ರಚನೆಯ ಮೂಲಕ ಜೀವನ ಪ್ರೀತಿಯನ್ನು ಚಂಪಾ ಪ್ರಕಟಿಸಿದರು ಎಂದವರು ಹೇಳಿದರು.

ಚಂಪಾ ಅವರ ಎರಡು ನಾಟಕಗಳ ಭಾಗಗಳನ್ನು ಮೂರು ಕವಿತೆಗಳನ್ನು ಸಮುದಾಯ ರಂಗ ಕಲಾವಿದರು ಓದಿನ ಮೂಲಕ ಪ್ರದರ್ಶಿಸಿದರು. ಮಂಗಳೂರು ಸಮುದಾಯದ ಕಾರ್ಯದರ್ಶಿ ಮನೋಜ್ ವಾಮಂಜೂರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ದೇಶ ಕಂಡ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿದ ಜ್ಯೋತಿ ಬಸು ನಾಯಕತ್ವ ಇಡೀ ದೇಶಕ್ಕೆ ಮಾದರಿ– ಸುಕುಮಾರ್

ಬಂಗಾಳದ ಅಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದ ಜ್ಯೋತಿಬಸು ತನ್ನ ಜೀವಿತದ ಕೊನೆಯ ಉಸಿರು ಇರುವವರೆಗೂ ಸಮಾಜದ ಶೋಷಿತ ಸಮುದಾಯಗಳ ಏಳಿಗೆಗಾಗಿ ಶ್ರಮಿಸಿದವರು. ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಿದ ಜ್ಯೋತಿ ಬಸು ವಾಪಾಸ್ ತಾಯ್ನಾಡಿಗೆ ಕಮ್ಯುನಿಸ್ಟ್‌ರಾಗಿ ಬಂದು ಬಂಗಾಳದ ರೈತ ಕಾರ್ಮಿಕರ ಆಶಾಕಿರಣವಾಗಿ ಹೊರಹೊಮ್ಮಿದರು. ತನ್ನ ಯೌವನದಲ್ಲೇ ಚುನಾವಣೆಗೆ ಸ್ಪರ್ಧಿಸಿ ಗೆಲ್ಲುವ ಮೂಲಕ ಬಂಗಾಳದ ವಿಧಾನಸಭೆಯಲ್ಲಿ ದುಡಿಯುವ ವರ್ಗದ ಧ್ವನಿಯಾಗಿ ಮೂಡಿದರು. ತಾನು ಸ್ಪರ್ಧಿಸಿದ ಎಲ್ಲಾ ಚುನಾವಣೆಗಳಲ್ಲೂ ಜಯ ಗಳಿಸುವ ಮೂಲಕ ಸೋಲಿಲ್ಲದ ಸರದಾರನೆಂಬ ಖ್ಯಾತಿ ಗಳಿಸಿದ್ದರು. 24 ವರ್ಷಗಳ ಕಾಲ ಬಂಗಾಳದ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ನಡೆಸಿದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು, ತೀವ್ರಗೊಂಡಿದ್ದ ನಕ್ಸಲ್ ಹಾವಳಿಯನ್ನು, ಗೂರ್ಖಾ ಲ್ಯಾಂಡ್‌ನ ಪ್ರತ್ಯೇಕತಾವಾದಿ ಚಳುವಳಿಯನ್ನು ಸಮರ್ಥವಾಗಿ ಎದುರಿಸಿ ಶಮನ ಮಾಡುವಲ್ಲಿ ಜ್ಯೋತಿಬಸು ಪಾತ್ರ ಸ್ಮರಣೀಯವಾದದ್ದು. ಇಂದಿರಾಗಾಂಧಿ ಹತ್ಯೆಗೆ ಪ್ರತಿಯಾಗಿ ಸಿಖ್ಖರ ಮೇಲಿನ ಧಾಳಿ ಹಾಗೂ ಬಾಬ್ರಿ ಮಸೀದಿ ಧ್ವಂಸದಿಂದಾಗಿ ದೇಶದೆಲ್ಲೆಡೆ ಭುಗಿಲೆದ್ದ ಹಿಂಸಾಚಾರಗಳು ಪಶ್ಚಿಮ ಬಂಗಾಳದಲ್ಲಿ ಒಂದೇ ಒಂದು ಗಲಭೆ ನಡೆಯದಂತೆ ಮುತುವರ್ಜಿ ವಹಿಸಿದ ಜ್ಯೋತಿಬಸುರವರ ಪಾತ್ರ ನಿಜಕ್ಕೂ ಶ್ಲಾಘನೀಯ. ಹೀಗೆ ದೇಶ ಕಂಡ ಪ್ರತಿಯೊಂದು ಸಂಕಷ್ಟಗಳನ್ನು ಸಮರ್ಥವಾಗಿ ನಿಭಾಯಿಸಿದ ಜ್ಯೋತಿಬಸುರವರ ದೂರದೃಷ್ಟಿಕೋನದ ನಾಯಕತ್ವ ನಿಜಕ್ಕೂ ದೇಶಕ್ಕೆ ಮಾದರಿ ಎಂದು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುಕುಮಾರ್ ರವರು ಅಭಿಪ್ರಾಯ ಪಟ್ಟರು.



ಅವರು ಮಂಗಳೂರಿನ ವಿಕಾಸ ಕಚೇರಿಯಲ್ಲಿ ಜರುಗಿದ ಜ್ಯೋತಿಬಸುರವರ 12ನೇ ಸಂಸ್ಮರಣಾ ದಿನಾಚರಣೆಯ ಅಂಗವಾಗಿ ಬಂಗಾಳದ ಕೆಂಪು ಸೂರ್ಯ ಒಂದು ನೆನಪು ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಯವರು ಮಾತನಾಡಿ, ಮುಖ್ಯಮಂತ್ರಿಯಾದ ಪ್ರಾರಂಭದಲ್ಲೇ ಭೂಹೀನರಿಗೆ ಭೂಮಿ ಹಂಚಿಕೆ, ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಗಳನ್ನು ಸಮರ್ಪಕ ಜಾರಿಗೊಳಿಸಿದ ಕೀರ್ತಿ ಜ್ಯೋತಿಬಸುರವರಿಗೆ ಸಲ್ಲುತ್ತದೆ. ಶಿಕ್ಷಣ, ಆರೋಗ್ಯ, ಕೃಷಿರಂಗಗಳಿಗೆ ಪ್ರಮುಖ ಆದ್ಯತೆ ನೀಡಿ ಇಡೀ ದೇಶದಲ್ಲಿ ಮಾದರಿ ಆಡಳಿತ ನಡೆಸಿದ ಜ್ಯೋತಿಬಸುರವರು ಕೋಮುವಾದದ ವಿರುದ್ದ ಧೃಢವಾಗಿ ನಿಂತು ಪಶ್ಚಿಮ ಬಂಗಾಳದಲ್ಲಿ ಸೌಹಾರ್ದತೆಯನ್ನು ಸಾಕಾರಗೊಳಿಸಿದ್ದರು ಹಾಗೂ ಪ್ರಧಾನಿ ಪಟ್ಟವೇ ತನ್ನ ಬಳಿ ಬಂದಿದ್ದರೂ ಅದನ್ನು ನಯವಾಗಿ ತಿರಸ್ಕರಿಸಿದ್ದರು ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕ್ ನೌಕರರ ಸಂಘಟನೆಯ ಮುಖಂಡರಾದ ಬಿ.ಎಂ. ಮಾಧವರವರು ವಹಿಸಿದ್ದರು. ಪ್ರಾರಂಭದಲ್ಲಿ ಸುನಿಲ್ ಕುಮಾರ್ ಬಜಾಲ್ ರವರು ಸ್ವಾಗತಿಸಿದರೆ, ಕೊನೆಯಲ್ಲಿ ಸಂತೋಷ್ ಬಜಾಲ್ ರವರು ವಂದಿಸಿದರು.

ಪ್ರಪ್ರಥಮ ರಾಷ್ಟ್ರೀಯ ಸಾರ್ವತ್ರಿಕ ಮುಷ್ಕರದ ನೆನಪಿನಲ್ಲಿ ಅಲ್ಲಲ್ಲಿ ಸಮಾವೇಶಗಳು



ರೈತ ಕಾರ್ಮಿಕರ ಸಖ್ಯತೆಯಲ್ಲಿ ದೇಶದ ಪ್ರಪ್ರಥಮ ಸಾರ್ವತ್ರಿಕ ಮುಷ್ಕರಕ್ಕೆ 40 ವರ್ಷಗಳು ಹಾಗೂ ಈ ಮುಷ್ಕರದಲ್ಲಿ ಹುತಾತ್ಮರಾದ 10 ಕೃಷಿಕೂಲಿಕಾರರ ನೆನಪಿನಲ್ಲಿ ದೇಶಾದ್ಯಂತ ರೈತ–ಕಾರ್ಮಿಕ–ಕೃಷಿಕೂಲಿಕಾರ ಸಖ್ಯತಾ ದಿನವಾಗಿ ಆಚರಿಸುವಂತೆ ಸಿಐಟಿಯು ಕರೆ ನೀಡಿದ ಮೇರೆಗೆ ಜನವರಿ 19 ರಂದು ಕರಾವಳಿ ಜಿಲ್ಲೆಗಳ ಪಟ್ಟಣಗಳಲ್ಲಿ ಸಖ್ಯತಾ ದಿನವನ್ನು ಆಚರಿಸಲಾಯಿತು. ಫೆಬ್ರವರಿ 23–24 ಎರಡು ದಿನಗಳ ಕಾರ್ಮಿಕರ 22ನೇ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಲಾಯಿತು.

ಉಡುಪಿಯ ಬಸ್ ನಿಲ್ದಾಣದ ಬಳಿಯ ಸಿಐಟಿಯು ಕಚೇರಿಯ ಮುಂದೆ ಸಖ್ಯತಾ ದಿನವನ್ನು ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ಪ್ರತಿಭಟನಾ ದಿನವಾಗಿ ಆಚರಿಸಲಾಯಿತು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಖಜಾಂಚಿ ಶಶಿಧರ ಗೊಲ್ಲ, ಸಿಐಟಿಯು ಉಡುಪಿ ತಾಲೂಕು ಮುಖಂಡರಾದ ಕವಿರಾಜ್, ಉಮೇಶ್ ಕುಂದರ್ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಕುಂದಾಪುರ ಹಂಚು ಕಾರ್ಮಿಕರ ಭವನದ ಮುಂಭಾಗದಲ್ಲಿ ನಡೆದ ಧರಣಿಯಲ್ಲಿ ಸಿಐಟಿಯು ಉಡುಪಿ ಜಿಲ್ಲಾದ್ಯಕ್ಷ ಕೆ.ಶಂಕರ್, ಕುಂದಾಪುರ ತಾಲೂಕು ಸಂಚಾಲಕ ಎಚ್.ನರಸಿಂಹ, ಮುಖಂಡರಾದ ಮಹಾಬಲ ವಡೇರಹೋಬಳಿ, ಸುರೇಶ್ ಕಲ್ಲಾಗರ, ಚಂದ್ರಶೇಖರ, ಸಂತೋಷ್ ಹೆಮ್ಮಾಡಿ, ಜಿ.ಡಿ.ಪಂಜು, ಬಲ್ಕೀಸ್, ರಾಜು ದೇವಾಡಿಗ, ಪ್ರಕಾಶ್ ಕೋಣಿ ಉಪಸ್ಥಿತರಿದ್ದರು.

ಮಂಗಳೂರು ಸಿಐಟಿಯು ನಗರ ಸಮಿತಿ ವತಿಯಿಂದ ಸಿಐಟಿಯು ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಐಟಿಯು ನಗರ ಮುಖಂಡರಾದ ರವಿಚಂದ್ರ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು ಭಾಗವಹಿಸಿದ್ದರು.

ತೊಕ್ಕೊಟ್ಟು ಸಿಐಟಿಯು ಉಳ್ಳಾಲ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಿಐಟಿಯು ದ.ಕ.ಜಿಲ್ಲಾ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಉಳ್ಳಾಲ ವಲಯ ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಸುಂದರ ಕುಂಪಲ ಸಿಪಿಐ(ಎಂ) ಮುಖಂಡ ಸುಕುಮಾರ್ ಭಾಗವಹಿಸಿದ್ದರು.

ಕರಾವಳಿಯ ಬೇರೆ ಊರುಗಳಲ್ಲಿಯೂ ಇದೇ ದಿನ ರೈತ–ಕಾರ್ಮಿಕ ಸಖ್ಯತಾ ದಿನವನ್ನು ಆಚರಿಸಿದ ವರದಿಗಳಿವೆ.

ಸಮಾನ ಮನಸ್ಕರು ಮಂಗಳೂರು ಏರ್ಪಡಿಸಿದ ಸರಣಿ ಉಪನ್ಯಾಸಗಳು

ಸ್ವಾಮೀ ವಿವೇಕಾನಂದ ಜನ್ಮದಿನದ ಉಪನ್ಯಾಸವನ್ನು ಮಂಗಳೂರಿನ 'ವಿಕಾಸ' ಕಚೇರಿಯಲ್ಲಿ ಜನವರಿ 13 ರಂದು ಏರ್ಪಡಿಸಲಾಗಿತ್ತು. ನಿವೃತ್ತ ಪ್ರಾಧ್ಯಾಪಕ ಪ್ರೊ.ಪಟ್ಟಾಭಿರಾಮ ಸೋಮಯಾಜಿಯವರ ಉಪನ್ಯಾಸಕ್ಕೆ ಡಾ.ಕೃಷ್ಣಪ್ಪ ಕೊಂಚಾಡಿ, ಮುನೀರ್ ಕಾಟಿಪಳ್ಳ ಪ್ರತಿಕ್ರಿಯೆ ನೀಡಿದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಮನೋಜ್ ವಾಮಂಜೂರು ವಂದಿಸಿದರು.

ಜ್ಯೋತಿ ಬಸು ಅವರ 12ನೇ ಸಂಸ್ಮರಣ ದಿನವನ್ನು ಜನವರಿ 17 ರಂದು 'ವಿಕಾಸ' ಕಚೇರಿಯಲ್ಲಿ ಏರ್ಪಡಿಸಲಾಗಿತ್ತು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಸುಕುಮಾರ್ ತೊಕ್ಕೊಟ್ಟು ಅವರು ಜ್ಯೋತಿ ಬಸು ಅವರ ವ್ಯಕ್ತಿತ್ವ, ಸಾಧನೆಗಳನ್ನು ನಿರೂಪಿಸಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಇನ್ನಷ್ಟು ಮಾಹಿತಿಗಳನ್ನು ನಿರೂಪಿಸಿದರು. ಬ್ಯಾಂಕ್ ನೌಕರರ ಸಂಘಟನೆ ಬಿ.ಎಂ.ಮಾಧವ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಸಂತೋಷ್ ಬಜಾಲ್ ವಂದಿಸಿದರು.

ಲೆನಿನ್ ಅವರ 98ನೇ ಸಂಸ್ಮರಣ ದಿನವನ್ನು ಜನವರಿ 21 ರಂದು ವಿಕಾಸ ಕಚೇರಿಯಲ್ಲಿ ಏರ್ಪಡಿಸಲಾಗಿತ್ತು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಮನೋಜ್ ವಾಮಂಜೂರು ವಿಷಯ ಮಂಡನೆ ಮಾಡಿದರು. ಪ್ರಗತಿಪರ ಚಿಂತಕರಾದ ಸಂಜೀವ ಬಳ್ಕೂರ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸುನಿಲ್ ಕುಮಾರ್ ಬಜಾಲ್, ಡಾ.ಕೃಷ್ಣಪ್ಪ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಚಾಣಕ್ಯ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ಸೆಸ್ ಸಂಸ್ಥೆಗೆ ನೀಡಲಾದ ಜಾಗ ವಾಪಸ್ಸು ಪಡೆಯಲು ಆಗ್ರಹ

ಕೋವಿಡ್ ಎರಡನೆಯ ಅಲೆಯ ಎಪ್ರಿಲ್ – ಮೇ ತಿಂಗಳ ಲಾಕ್‌ಡೌನ್ ಸಂದರ್ಭದಲ್ಲಿ ಇಡೀ ರಾಜ್ಯವೇ ಅತ್ಯಂತ ಸಂಕಷ್ಟದಲ್ಲಿ ಹಾಗೂ ಆತಂಕದಲ್ಲಿರುವಾಗ, ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರವರ ಸರಕಾರ ಒಳ ಸಂಚಿನ ರೀತಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಹರನೂರು ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್ ಹಂತ – 2 ರ ಕೈಗಾರಿಕಾ ಪ್ರದೇಶದಲ್ಲಿ ಚಾಣಕ್ಯ ವಿಶ್ವವಿದ್ಯಾನಿಲಯಕ್ಕಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಾಯಕರಾಗಿದ್ದ ಎಂ.ಕೆ. ಶ್ರೀಧರ್ ರವರ ಸೆಂಟರ್ ಫಾರ್ ಸೋಷಿಯಲ್ ಸ್ಟಡೀಸ್ ಸಂಸ್ಥೆಗೆ ಅತ್ಯಂತ ದೊಡ್ಡ ಬೆಲೆ ಬಾಳುವ 116.16 ಎಕರೆ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ನೀಡಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ರಾಷ್ಟ್ರೀಯ ಹೆದ್ದಾರಿ 207 ರಿಂದ ನೇರ ಪ್ರತ್ಯೇಕ ರಸ್ತೆ ಹೊಂದಿರುವ ಸದರಿ ಭೂಮಿಗೆ ಸಂಬಂಧಿಸಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ತಲಾ ಎಕರೆ ಬೆಲೆಯು 1.16 ಕೋಟಿ ರೂಪಾಯಿಗಳೆಂದು ಸೂಚಿಸಿದ್ದರೂ ಅದನ್ನು ಧಿಕ್ಕರಿಸಿ ಆರ್‌ಎಸ್‌ಎಸ್ ಒಲೈಸುವ ದುರುದ್ದೇಶದಿಂದ ಕೇವಲ 50 ಕೋಟಿಗೆ ಮಾರಾಟ ಮಾಡಲು ಕ್ರಮವಹಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಅಪಾರ ನಷ್ಟ ಉಂಟು ಮಾಡಲಾಗಿದೆ. ಆದ್ದರಿಂದ ಸಾರ್ವಜನಿಕ ಸಂಸ್ಥೆಗುಂಟಾದ ಅಪಾರ ನಷ್ಟವನ್ನು ತಡೆಯಲು ಈ ಕೂಡಲೆ ಸೆಸ್ ಸಂಸ್ಥೆಗೆ ನೀಡಲಾಗುವ ಭೂಮಿಯನ್ನು ವಾಪಾಸು ಪಡೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಸದರಿ ಇಲಾಖೆಯು ಈ ಸಂಸ್ಥೆಗೆ ಇಷ್ಟೊಂದು ಪ್ರಮಾಣದಲ್ಲಿ ಭೂಮಿ ಒದಗಿಸುವ ಅವಶ್ಯಕತೆ ಇದೆಯೇ ಮತ್ತು ಕಡಿಮೆ ಬೆಲೆಗೆ ನೀಡಿದಲ್ಲಿ ಇಲಾಖೆಗೆ ನಷ್ಟವಾಗುವುದಿಲ್ಲವೇ? ಎಂದು ಮರು ಪರಿಶೀಲಿಸುವಂತೆ ಆರ್ಥಿಕ ಇಲಾಖೆ ಕೇಳಿದ್ದಾಗಲೂ ಈ ರೀತಿಯಲ್ಲಿ ಅಗ್ಗದ ದರಕ್ಕೆ ಮಾರಾಟ ಮಾಡುವ ಮೂಲಕ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಂತೆ ಸುಮಾರು 135 ಕೋಟಿ ನಷ್ಟ ಉಂಟು ಮಾಡಲಾಗಿದೆ.

ಆದರೇ, ವಾಸ್ತವಿಕವಾಗಿ ಅಭಿವೃದ್ಧಿಪಡಿಸಲ್ಪಟ್ಟ ಜಮೀನಿನ 2021 ರ ಮಾರುಕಟ್ಟೆ ದರಕ್ಕೆ ಹೋಲಿಸಿದರೆ ನಷ್ಟವು ಹಲವು ಹತ್ತು ಪಟ್ಟು ಹೆಚ್ಚಾಗಲಿದೆ.

ರೈತರಿಂದ ಖರೀದಿಸುವಾಗ ಕೆಐಎಡಿಬಿಯು ತಲಾ ಎಕರೆಗೆ 1.5 ಕೋಟಿ ಪಾವತಿಸಿದೆ ಎನ್ನಲಾಗಿದೆ. ಖರೀದಿ ನಷ್ಟವೇ ಸಂಸ್ಥೆಗೆ 125 ಕೋಟಿ ರೂ.ಗಳಿಗೂ ಅಧಿಕವಾಗುತ್ತದೆ.

ಕರ್ನಾಟಕದಲ್ಲಿ ಮುಖ್ಯವಾಗಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಗಳ ಮೇಲೆ ಧಾಳಿ ನಡೆಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಅಪರಾಧದಲ್ಲಿ ತೊಡಗಿರುವ ರಾಜ್ಯ ಸರಕಾರ, ಈ ರೀತಿ ಕನ್ನಡ ಭಾಷೆ ಹಾಗೂ ಜನಗಳ ಮೇಲೆ ಧಾಳಿ ಮಾಡಲು, ಕನ್ನಡದ ನೆಲವನ್ನು ಬೇಕಾಬಿಟ್ಟಿ ದರಕ್ಕೆ ಮಾರಲಾಗುತ್ತಿರುವುದು ಮತ್ತೊಂದು ಅಪರಾಧವಾಗಿದೆ.

ಆದ್ದರಿಂದ, ರೈತರಿಂದ ಸ್ವಾಧೀನಪಡಿಸಿಕೊಂಡು, ಕೈಗಾರಿಕಾಭಿವೃದ್ಧಿಗಾಗಿ ಮೀಸಲಿಟ್ಟ ಈ ಜಮೀನುಗಳನ್ನು ಕನ್ನಡ ಹಾಗೂ ಕನ್ನಡಿಗರ ವಿರೋಧಿ ಕಾರ್ಯಕ್ಕಾಗಿ ಒದಗಿಸಿರುವುನ್ನು ರದ್ದುಪಡಿಸಿ ವಾಪಾಸ್ಸು ಪಡೆಯಲು ಮತ್ತು ಇಂತಹ ಅಗ್ಗದರದ ಮಾರಾಟಕ್ಕೆ ಮುಂದಾದ ಕಾರ್ಯವನ್ನು ತನಿಖೆಗೊಳಪಡಿಸಲು ಅಪರಾಧಿಗಳನ್ನು ಶಿಕ್ಷಿಸಲು ಅಗತ್ಯ ಕ್ರಮಕ್ಕಾಗಿ ಈ ಮೂಲಕ ಸಿಪಿಐ(ಎಂ) ಒತ್ತಾಯಿಸಿದೆ.

ಕೋವಿಡ್ 3ನೇ ಅಲೆ ಎದುರಿಸಲು ವಹಿಸಬೇಕಾದ ಕ್ರಮಗಳ ಕುರಿತು.....

ಪುಟ 3 ರಿಂದ

ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಭೂಮಿ ಮಾರಾಟ ನೋಂದಾವಣಿಯು ರಾಜ್ಯದ ಉಪನೋಂದಾವಣಿ ಕಚೇರಿಗಳಲ್ಲಿ ಶೇಕಡ 71 ಹೆಚ್ಚಳಗೊಂಡಿರುವ ವರದಿಗಳಿವೆ. ಕೇಂದ್ರ ಸರ್ಕಾರವು ರೂಪಿಸಿದ್ದ ಕೃಷಿ ಕಾಯ್ದೆಗಳನ್ನು ಈಗಾಗಲೇ ಹಿಂಪಡೆದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅವುಗಳಿಗೆ ಪೂರಕವಾಗಿ ರೂಪಿಸಿದ್ದ ಮೇಲಿನ ತಿದ್ದುಪಡಿ ಕಾಯ್ದೆಗಳು ಕೇಂದ್ರದ ಕೃಷಿ ಕಾಯ್ದೆಗಳು ಉಂಟು ಮಾಡುತ್ತಿದ್ದ ದುಷ್ಪರಿಣಾಮವನ್ನೇ ಸದರಿ ರಾಜ್ಯದ ಶಾಸನಗಳು ಉಂಟು ಮಾಡಲಿವೆ ಎಂಬುದನ್ನು ರಾಜ್ಯ ಸರ್ಕಾರವು ಗಂಭೀರವಾಗಿ ಮನಗಾಣಬೇಕೆಂದು ಕೋರಿದೆ.

ರಾಜ್ಯದ ಕೈಗಾರಿಕೆಗಳಲ್ಲಿನ 2017–18ರ ಸಾಲಿನ ನಿವ್ವಳ ಮೌಲ್ಯವರ್ಧನೆಯಲ್ಲಿನ ಮಾಲೀಕರ ನಿವ್ವಳ ಲಾಭದ ಪಾಲು ಶೇಕಡ 45.70 ಆದರೆ ಕಾರ್ಮಿಕರ ವೇತನದ ಪಾಲು ಶೇಕಡ 18.04 ರಷ್ಟಾಗಿದೆ. ರಾಜ್ಯದಲ್ಲಿ 20ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ವಿದ್ಯುತ್ ಚಾಲಿತ ಕಾರ್ಖಾನೆಗಳ ಪ್ರಮಾಣ ಶೇಕಡ 41.36 ರಷ್ಟಾಗಿದ್ದರೆ ವಿದ್ಯುತ್ ರಹಿತ 40 ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳ ಪಾಲು ಶೇಕಡ 64.20 ರಷ್ಟಾಗಿದೆ. 300 ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳ ಪ್ರಮಾಣವು ಶೇಕಡ 90.76 ರಷ್ಟಾಗಿದೆ. ರಾಜ್ಯ ಸರ್ಕಾರವು ಈ ಹಿಂದೆ ಕೋವಿಡ್ ಕಾಲಾವಧಿಯಲ್ಲಿ ಕೈಗಾರಿಕಾ ಉದ್ಯೋಗಗಳ ಸ್ಥಾಯಿ ಆದೇಶಗಳ ಕಾಯ್ದೆಗೆ ತಂದಿರುವ ತಿದ್ದುಪಡಿಯಿಂದಾಗಿ ನಿಶ್ಚಿತ ಅವಧಿಯ ಕಾರ್ಮಿಕರನ್ನು ನೇಮಿಸಿಕೊಳ್ಳಲು ಮಾಲೀಕರಿಗೆ ಮುಕ್ತ ಅವಕಾಶವನ್ನು ನೀಡಲಾಗಿದೆ. ಪರಿಣಾಮವಾಗಿ ಹಲವು ಕಾರ್ಖಾನೆಗಳಲ್ಲಿ ಖಾಯಂ ಕಾರ್ಮಿಕರನ್ನು ಬಲವಂತದ ಸ್ವಯಂ ನಿವೃತ್ತಿಯ ಮೇಲೆ ಹೊರದೂಡಿ ನಿಶ್ಚಿತಾವಧಿ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪ್ರವೃತ್ತಿಯು ಹೆಚ್ಚುತ್ತಿದೆ. ಕೇಂದ್ರ ಸರ್ಕಾರವು ರೂಪಿಸಿರುವ ಪಾಪರಿಕೆ ಮತ್ತು ದಿವಾಳಿ ಸಂಹಿತೆ (I&B Code) ಬಳಸಿ ಹಲವು ಕಾರ್ಖಾನೆಗಳು ಯಾವುದೇ ಪರಿಹಾರ ನೀಡದೆ ಕಾರ್ಮಿಕರನ್ನು ಬೀದಿಗೆ ತಳ್ಳುವ ಅಥವಾ ಕಡಿಮೆ ವೇತನಕ್ಕೆ ಮತ್ತೆ ಹೊಸದಾಗಿ ನೇಮಿಸಿಕೊಳ್ಳುವ ಪ್ರವೃತ್ತಿಯಲ್ಲಿ ತೊಡಗಿವೆ. ಕೇಂದ್ರದ ನೂತನ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರವು ನಿಯಮಾವಳಿಗಳನ್ನು ರೂಪಿಸುವಲ್ಲಿ ತೊಡಗಿದೆ. ನೂತನ ಕಾರ್ಮಿಕ ಸಂಹಿತೆಗಳು ಜಾರಿಯಾದಲ್ಲಿ ರಾಜ್ಯದ ಸಂಘಟಿತ ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಹಕ್ಕುಗಳು ಇಲ್ಲದಾಗಲಿವೆ. ಮಾತ್ರವಲ್ಲದೆ ರಾಜ್ಯದ ಆರ್ಥಿಕತೆಯೂ ಇದರಿಂದಾಗಿ ಬಾಧಿತವಾಗುವ ಸಾಧ್ಯತೆಗಳು ನಿಚ್ಚಳವಾಗಿದೆ. 2020 ಮತ್ತು 2021 ರಲ್ಲಿ ರಾಜ್ಯ ಸರ್ಕಾರವು ಪ್ರಕಟಿಸಿರುವ ಕೋವಿಡ್–19 ಲಾಕ್ಡೌನ್ ಪರಿಹಾರ ಹಣವು ಇದುವರೆಗೆ ಪೂರ್ಣ ಪ್ರಮಾಣದಲ್ಲಿ ಎಲ್ಲರಿಗೂ ತಲುಪಿಲ್ಲ.

ಕೋವಿಡ್ ಅಲೆಗಳಿಂದಾಗಿ ರಾಜ್ಯದ ಶೈಕ್ಷಣಿಕ ಪರಿಸ್ಥಿತಿಯು ಅತ್ಯಂತ ದುಸ್ಥಿತಿಗೆ ತಲುಪಿದೆ. ಪೋಷಕರ ಆದಾಯಗಳಲ್ಲಿನ ಇಳಿಕೆಯಿಂದಾಗಿ ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಹರಿದು ಬರುತ್ತಿರುವುದನ್ನು ಗಮನಿಸಬಹುದಾಗಿದೆ. 6 ರಿಂದ 14 ವರ್ಷದ ವಯೋಮಾನದ ಮಕ್ಕಳಲ್ಲಿ 2020 ರಲ್ಲಿ ಶೇಕಡ 68.6 ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ದಾಖಲಾಗಿದ್ದರೆ 2020 ರಲ್ಲಿ ಶೇಕಡ 77.7 ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ದಾಖಲಾಗಿದ್ದಾರೆ. ಮನೆಗಳಲ್ಲಿ ಸ್ಮಾರ್ಟ್ ಫೋನ್ ಹೊಂದಿದ್ದು ಶಾಲೆಗಳಿಗೆ ದಾಖಲಾಗಿರುವ ಮಕ್ಕಳ ಪ್ರಮಾಣ 2018 ರಲ್ಲಿ ಶೇಕಡ 43.1 ರಷ್ಟಿದ್ದದ್ದು, 2021 ರಲ್ಲಿ ಶೇಕಡ 71.6 ಕ್ಕೆ ಹೆಚ್ಚಳವಾಗಿದೆ. ಅದರಲ್ಲಿ ಎಲ್ಲಾ ಸಮಯದಲ್ಲೂ ಸ್ಮಾರ್ಟ್ ಫೋನ್ ಲಭ್ಯತೆ ಹೊಂದಿದ್ದ ಮಕ್ಕಳ ಪ್ರಮಾಣ ಶೇಕಡ 35.6 ರಷ್ಟಾಗಿದೆ. ಕೆಲವೊಮ್ಮೆ ಲಭ್ಯತೆ ಹೊಂದಿದವರ ಪ್ರಮಾಣ ಶೇಕಡ 52.7 ರಷ್ಟಾಗಿದೆ. ರಾಜ್ಯದ ಶೇಕಡ 34.1 ಮಕ್ಕಳು ಮಾತ್ರ ಆನ್‌ಲೈನ್ ಶಿಕ್ಷಣ ಮತ್ತು ಶೇಕಡ 43.9 ಮಕ್ಕಳು ದೂರ ಶಿಕ್ಷಣ ಮೂಲಕ ಕಲಿಕೆಯ ಚಟುವಟಿಕೆಗಳನ್ನು ಮನೆಯಿಂದ ನಡೆಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಶಾಲೆಗಳನ್ನು ಮುಚ್ಚಿರುವ ಮತ್ತು ಆನ್‌ಲೈನ್ ಮೂಲಕ ಅಥವಾ ದೂರ ಶಿಕ್ಷಣ ಮೂಲಕ ಶಿಕ್ಷಣ ನೀಡುವ ಸರ್ಕಾರದ ಕ್ರಮಗಳು ಪರಿಣಾಮಕಾರಿಯಾಗಿ ತಲುಪುತ್ತಿಲ್ಲ ಎಂಬುದನ್ನು ರಾಜ್ಯ ಸರ್ಕಾರವು ಮನಗಾಣಬೇಕಿದೆ.

ಕೋವಿಡ್ ಸೋಂಕಿತರ ಸಂಖ್ಯೆಯು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮನೆ ಆರೈಕೆಯಲ್ಲೇ ಶೇಕಡ 96 ರಷ್ಟು ಸೋಂಕಿತರು ಪ್ರತ್ಯೇಕ ವಾಸದಲ್ಲಿದ್ದರೂ ಅವರಿಗೆ ಅಗತ್ಯ ನೆರವು ಲಭಿಸುತ್ತಿಲ್ಲ. ಪರಿಣಾಮವಾಗಿ ಪ್ರತ್ಯೇಕವಾಸದಲ್ಲಿರುವ ಸೋಂಕಿತರ ಪರಿಸ್ಥಿತಿಯು ಮತ್ತಷ್ಟು ದುಸ್ಥಿತಿಗೆ ದೂಡಲ್ಪಡುತ್ತಿದೆ. ಸೋಂಕಿತರ ಸಂಖ್ಯೆ ಪ್ರತಿದಿನ ಹೆಚ್ಚುತ್ತಿದ್ದರೂ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಇಂದಿಗೂ ಸಹಾ ಅಂತರಕಾಯ್ದುಕೊಂಡು ಪ್ರಯಾಣಿಕರಿಗೆ ಸೇವೆ ಒದಗಿಸುವ, ಟ್ರಿಪ್‌ಗಳ ಸಂಖ್ಯೆ ಹೆಚ್ಚಿಸುವ, ಪ್ರತಿಟ್ರಿಪ್‌ನ ನಂತರ ಸ್ಯಾನಿಟೈಸ್ ಮಾಡುವ ವ್ಯವಸ್ಥೆ ಇಲ್ಲದಾಗಿದೆ. ದೊಡ್ಡ ಸಂಖ್ಯೆಯಲ್ಲಿರುವ ಅಸಂಘಟಿತ ವಲಯದ ಶ್ರಮಿಕರಿಗೆ ಉಚಿತ ಮಾಸ್ಕ್ ಮತ್ತು ಸ್ಯಾನಿಟೈಸರ್‌ಗಳು ಲಭ್ಯವಿಲ್ಲದಾಗಿದೆ. ಕೋವಿಡ್ ಮೊದಲನೆ ಮತ್ತು ಎರಡನೆ ಅಲೆಯ ವೇಳೆ ಸೋಂಕಿತರಿಗೆ ಹಾಸಿಗೆ, ಆಮ್ಲಜನಕ, ಐಸಿಯು, ಔಷಧಿ ಒದಗಿಸುವಲ್ಲಿ ಕೊರತೆಗಳು, ಖಾಸಗಿ ಆಸ್ಪತ್ರೆಗಳ ಅಸಹಕಾರವು, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಬೇಕಾದ ಅವಶ್ಯಕತೆಯನ್ನು ಎತ್ತಿತೋರಿದೆ.

ರಾಜ್ಯದ ಜನತೆ ಜೀವ ರಕ್ಷಿಸಿಕೊಳ್ಳಲು ಮತ್ತು ಜೀವನ ಉಳಿಸಿಕೊಳ್ಳಲು ಸಾಹಸ ಪಡುತ್ತಿರುವಾಗ, ರಾಜ್ಯದ ಜನತೆಯ ಐಕ್ಯತೆಯನ್ನು ಕಾಪಾಡಬೇಕಾದ, ಜೀವ ರಕ್ಷಿಸಿ–ಜೀವನ ಉಳಿಸಬೇಕಾದ ರಾಜ್ಯ ಸರ್ಕಾರವು ಜನತೆಯನ್ನು ಜಾತಿ ಮತ್ತು ಮತ ಧರ್ಮಗಳ ಆಧಾರಿತವಾಗಿ ವಿಭಜಕ ಕೆಲಸದಲ್ಲಿ ತೊಡಗಿರುವ ಶಕ್ತಿಗಳಿಗೆ ಸಹಕಾರಿಯಾಗಿ ಕ್ರಮವಹಿಸುತ್ತಿರುವುದನ್ನು ಏಳು ಪಕ್ಷಗಳು ಖಂಡಿಸುತ್ತವೆ. ರಾಜ್ಯ ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕರಿಸಿರುವ ಧಾರ್ಮಿಕ ಸ್ವಾತಂತ್ರ ಹಕ್ಕುಗಳ ಸಂರಕ್ಷಣಾ ವಿಧೇಯಕ 2021, ವಾಸ್ತವದಲ್ಲಿ ಮತಾಂತರ ನಿಷೇಧ ಕಾಯ್ದೆಯಾಗಿದೆ. ಇದು ಭಾರತದ ಸಂವಿಧಾನದಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಇಲ್ಲದಾಗಿಸಿ, ಕೋಮು ಧ್ರುವೀಕರಣಕ್ಕೆ ಅನುವುಗೊಳಿಸಿ ಜನತೆಯನ್ನು ಜೀವಿಸಲು ಬಿಡದ ಕ್ರಮವಾಗಿದೆ.

21–01–2022 ರಂದು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಮದುವೆ ಸಮಾರಂಭಗಳಿಗೆ 200 ರವರೆಗೆ ಗರಿಷ್ಠ ಜನರ ಸೇರುವಿಕೆಗೆ ಅವಕಾಶ ಕಲ್ಪಿಸಿರುವಾಗ ಮತ್ತು ವಾರಾಂತ್ಯದ ಕರ್ಫ್ಯೂ ಮರುತೆರವು ಗೊಳಿಸಿರುವಾಗ ರಾಜಕೀಯ ಸಮಾರಂಭ ಹಾಗೂ ಜನರ ಹೋರಾಟಗಳಿಗೆ ಮಾತ್ರ ಅವಕಾಶ ಕಲ್ಪಿಸದಿರುವ ಕ್ರಮವು ಪ್ರಜಾಪ್ರಭುತ್ವ ವಿರೋಧಿಕ್ರಮವಾಗಿದೆ. ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧದ ಧ್ವನಿ ಅಡಗಿಸುವ ಕ್ರಮವಾಗಿದೆ. ಕೂಡಲೆ ಪ್ರತಿಭಟನೆ, ಹೋರಾಟ, ಧರಣಿ, ಮೆರವಣಿಗೆ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಬೇಕು.

ಈ ಎಲ್ಲಾ ಹಿನ್ನೆಲೆಯಲ್ಲಿ ಏಳು ಪಕ್ಷಗಳು ಹಮ್ಮಿಕೊಂಡಿರುವ "ಜೀವ ರಕ್ಷಿಸಿ–ಜೀವನ ಉಳಿಸಿ–ಜೀವಿಸಲು ಬಿಡಿ" ಅಭಿಯಾನದ ಭಾಗವಾಗಿ ಈ ಕೆಳಗಿನಂತೆ ತಮ್ಮಲ್ಲಿ ಮನವಿ ಮಾಡಿದೆ.

* ಕೋವಿಡ್ 3ನೇ ಅಲೆ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಬೇಕು. ಲಾಕ್ಡೌನ್ ವೀಕ್ ಎಂಡ್ ಕರ್ಫ್ಯೂ ಸಂತ್ರಸ್ಥರಿಗೆ ಪರಿಹಾರ ಒದಗಿಸಬೇಕು. ಸಾರ್ವತ್ರಿಕವಾಗಿ ಉಚಿತ ಮಾಸ್ಕ್ ಮತ್ತು ಸ್ಯಾನಿಟೈಸರ್‌ಗಳನ್ನು ವಿತರಿಸಬೇಕು.
* ಮನೆ ಆರೈಕೆಯಲ್ಲಿರುವ ಸೋಂಕಿತರಿಗೆ ಅಗತ್ಯ ನೆರವು ನೀಡಬೇಕು. ವಾರ್ಡ್‌ವಾರು ನಿರ್ದಿಷ್ಟ ನೌಕರರನ್ನು ನಿಯೋಜಿಸಿ, ಸಮುದಾಯ ಅಡುಗೆ ಮನೆಗಳನ್ನು ಸ್ಥಾಪಿಸಿ ಉಚಿತ ಪೌಷ್ಠಿಕ ಆಹಾರ ಒದಗಿಸಬೇಕು.
* ಕೋವಿಡ್ ಸೋಂಕಿತರಿಗೆ ಉಚಿತ ಚಿಕಿತ್ಸೆ ನೀಡಿ ಮೃತರ ಕುಟುಂಬದವರಿಗೆ ತಲಾ 4 ಲಕ್ಷ ಪರಿಹಾರ ನೀಡಬೇಕು. ಕೋವಿಡ್ ವಾರಿಯರ್ಸ್‌ಗಳ ಜೀವನ ಭದ್ರತೆಗೆ ಅಗತ್ಯ ಕ್ರಮವಹಿಸಬೇಕು.
* ಸರ್ಕಾರಿ ಆಸ್ಪತ್ರೆಗಳನ್ನು ಹೆಚ್ಚಿಸಬೇಕು. ಆರೋಗ್ಯ ವಲಯಕ್ಕೆ ಬಜೆಟ್ ಅನುದಾನವನ್ನು ಹೆಚ್ಚಿಸಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಬೇಕು.
* ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಪ್ರತಿ ಕುಟುಂಬಕ್ಕೂ 10 ಸಾವಿರ ನೇರ ನಗದು ವರ್ಗಾವಣೆ ಮಾಡುವ ಮೂಲಕ ಜನತೆಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ರಾಜ್ಯದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಬೇಕು.
* ಪ್ರತಿ ಕುಟುಂಬಕ್ಕೂ ತಲಾ 10 ಕೆ.ಜಿ. ಉಚಿತ ಪಡಿತರ ವಿತರಿಸಬೇಕು.
* 200 ದಿನಗಳ ಉದ್ಯೋಗಗಳನ್ನು ಮಹತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ಒದಗಿಸಬೇಕು. ಕೂಲಿಯನ್ನು ರೂ.600 ಕ್ಕೆ ಹೆಚ್ಚಿಸಬೇಕು. ನಗರ ಪ್ರದೇಶಗಳಿಗೂ ಉದ್ಯೋಗ ಖಾತ್ರಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಮೂಲಕ ನಗರಗಳಿಂದ ಗ್ರಾಮೀಣ ಪ್ರದೇಶಕ್ಕೆ ಅಸಂಘಟಿತರ ಮರುವಲಸೆಯನ್ನು ತಡೆಯಬೇಕು.
* ಶಾಲಾ ಶಿಕ್ಷಣ ಮತ್ತು ಕಾಲೇಜು ಶಿಕ್ಷಣ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಅಗತ್ಯ ಕ್ರಮವಹಿಸಬೇಕು. ಕೋವಿಡ್‌ನಿಂದಾಗಿ ಉಂಟಾಗಿರುವ ಜನತೆಯ ಆದಾಯ ಕೊರತೆಯ ಹಿನ್ನೆಲೆಯಲ್ಲಿ ಎಲ್ಲಾ ಶುಲ್ಕಗಳನ್ನು ಮನ್ನಾ ಮಾಡಬೇಕು. ವಿದ್ಯಾರ್ಥಿಗಳ ಹಾಸ್ಟೆಲ್ ಭತ್ಯೆ, ಅಕ್ಷರ ದಾಸೋಹ ಪಡಿತರ, ಸ್ಕಾಲರ್‌ಶಿಪ್ ಹಾಗೂ ಫೆಲೋ ಶಿಪ್‌ಗಳನ್ನು ವಿದ್ಯಾರ್ಥಿಗಳಿಗೆ ಅಥವಾ ಅವರ ಕುಟುಂಬಗಳಿಗೆ ಪಾವತಿಸಬೇಕು.
* ಕಾರ್ಮಿಕ ವಿರೋಧಿ, ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಬಾರದು. ಕಾರ್ಮಿಕ ಸಂಘಗಳ ಮಾನ್ಯತೆಗೆ,ಗುತ್ತಿಗೆ ಮುಂತಾದ ಖಾಯಂಯೇತ್ತರರ ಖಾಯಂಗೆ, ಅಸಂಘಟಿತರಿಗೆ ಶಾಸನ ಬದ್ಧ ಭವಿಷ್ಯ ನಿಧಿಗಾಗಿ ಶಾಸನ ರೂಪಿಸಬೇಕು.
* ಭೂ ಸ್ವಾಧಾರಣಾ ತಿದ್ದುಪಡಿ ಕಾಯ್ದೆ, ಕೃಷಿ ಉತ್ಪನ್ನ ಮಾರುಕಟ್ಟೆ ತಿದ್ದುಪಡಿ ಕಾಯ್ದೆ, ಭೂ ಕಂದಾಯ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸಿನಂತೆ ನಿಗದಿಪಡಿಸಿ ಜಾರಿಗೊಳಿಸುವ ಶಾಸನ ರೂಪಿಸಬೇಕು.
* ಮತಾಂತರ ನಿಷೇಧ ವಿಧೇಯಕವನ್ನು ಹಿಂಪಡೆಯಬೇಕು.
* ಬೆಲೆ ಏರಿಕೆ ನಿಯಂತ್ರಣಕ್ಕೆ ಅಗತ್ಯಕ್ರಮ ವಹಿಸಬೇಕು.
* ರೈತರ, ಕೂಲಿಕಾರರ ಹಾಗೂ ಕಾರ್ಮಿಕರ ಸಾಲಗಳನ್ನು ಮತ್ತು ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಪಡೆದಿರುವ ಸಾಲಗಳನ್ನು ಮನ್ನಾ ಮಾಡಬೇಕು. ರೈತರ ಹಾಗೂ ಕೂಲಿಕಾರರಿಗೆ ಪ್ರಕೃತಿ ವಿಕೋಪಗಳಿಂದುಂಟಾದ ಸಾಲಕ್ಕೆ ಪರಿಹಾರ ಒದಗಿಸುವ ಋಣ ಮುಕ್ತ ಕಾಯ್ದೆಯನ್ನು ಜಾರಿಗೊಳಿಸಬೇಕು.
* ಜಲ ಜೀವನ್ ಮಿಷಿನ್ ಯೋಜನೆಯಡಿಯಲ್ಲಿ ಗ್ರಾಮೀಣ ಕುಡಿಯುವ ನೀರಿಗೆ ಮೀಟರ್ ಅಳವಡಿಸಿ ಜನರಿಂದ ಶುಲ್ಕ ವಸೂಲಿ ಮಾಡುವ ಶಿಫಾರಸನ್ನು ಹಿಂತೆಗೆದುಕೊಳ್ಳಿ.
* ರಾಜ್ಯದ ಶಿಕ್ಷಣವನ್ನು ವ್ಯಾಪಾರೀಕರಣ ಮತ್ತು ವಾಣಿಜ್ಯೀಕರಣಕ್ಕೆ ಮುಕ್ತವಾಗಿ ತೆರೆದಿಡುವ ಹಾಗೂ ಶಿಕ್ಷಣದಲ್ಲಿನ ಧರ್ಮನಿರಪೇಕ್ಷ ಮೌಲ್ಯಗಳನ್ನು ಇಲ್ಲದಾಗಿಸುವ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಬಾರದು.



ನಾರಾಯಣಗುರು ಸ್ತಬ್ಧಚಿತ್ರ ನಿರಾಕರಣೆ: ದಲಿತ ಹಿಂದುಳಿದವರ ಅವಮಾನ

ಹಾಗಿದ್ದರೆ ನಾವು ಏನು ಮಾಡಬೇಕು? ಜನವರಿ 26 ರಂದು ಕೇರಳದಲ್ಲಿ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಪರ್ಯಾಯವಾಗಿ ನಾರಾಯಣ ಗುರು ಅವರಿಗೆ ಗೌರವ ತೋರಿಸುವ ಕಾರ್ಯಕ್ರಮಗಳನ್ನು ನಡೆಸಬೇಕು. ಅವರ ಚಿಂತನೆ, ಸಮಾಜ ಸುಧಾರಣೆಯ ಕ್ರಮಗಳನ್ನು ನೆನಪು ಮಾಡಿಕೊಳ್ಳಬೇಕು. ಅಲ್ಲದೆ 'ನಮ್ಮ ಸಂಸ್ಕೃತಿ, ನಮ್ಮ ನಿರ್ಧಾರ' ಎನ್ನುವ ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ರವಾನಿಸಬೇಕು. ಕೇಂದ್ರ ಸರಕಾರದ ನಿರ್ಧಾರವನ್ನು ಬೆಂಬಲಿಸುತ್ತಿರುವ ಕರ್ನಾಟಕದ ರಾಜಕೀಯ ಮುಖಂಡರು ದಲಿತ ದ್ವೇಷಿಗಳು ಹಾಗೂ ಹಿಂದುಳಿದ ಜಾತಿಗಳ ವಿರೋಧಿಗಳು ಎನ್ನುವುದನ್ನು ವ್ಯಾಪಕವಾಗಿ ಚರ್ಚಿಸಬೇಕು.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಜನವರಿ 26ರ ಗಣರಾಜ್ಯೋತ್ಸವ ಆಚರಣೆಯಲ್ಲಿ ಕೇರಳವು ಸೇರಿದಂತೆ ನಾಲ್ಕು ರಾಜ್ಯಗಳು ಪ್ರದರ್ಶನಕ್ಕೆ ಎಂದು ಪ್ರಸ್ತಾವನೆ ಸಲ್ಲಿಸಿದ್ದ ಸ್ಥಬ್ಧ ಚಿತ್ರಗಳನ್ನು ಕೇಂದ್ರ ಸರಕಾರವು ತಿರಸ್ಕರಿಸಿದೆ. ಈಗ ಕೇವಲ 12 ರಾಜ್ಯಗಳ ಸ್ಥಬ್ಧ ಚಿತ್ರಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗಿದೆ. ಕೇಂದ್ರ ಸರಕಾರದ ಅನಾಗರೀಕ ದಾರ್ಷ್ಟ್ಯ ಯಾವ ಮಟ್ಟಕ್ಕೆ ತಲುಪಿದೆಯೆಂದರೆ ಈ ನಿರ್ಧಾರಕ್ಕೆ ಯಾವ ಕಾರಣವನ್ನು ಸೂಚಿಸಿಲ್ಲ. ಅಲ್ಲದೆ ಸುದ್ದಿ ಮೂಲಗಳ ಪ್ರಕಾರ ಹೀಗೆ ಕೇರಳದ ಸ್ಥಬ್ಧಚಿತ್ರವನ್ನು ಕೇಂದ್ರ ಸರಕಾರವು ತಿರಸ್ಕರಿಸುತ್ತಿರುವುದು ಮೂರನೇ ಬಾರಿ. ತೀವ್ರ ಆಕ್ರೋಶವನ್ನು ಹುಟ್ಟಿಸಿರುವ ಸಂಗತಿಯೆಂದರೆ ಕೇಂದ್ರವು ತಿರಸ್ಕರಿಸಿದ ಸ್ಥಬ್ಧ ಚಿತ್ರವು ಮಹಾನ್ ಸಂತ ಹಾಗೂ ಸಮಾಜ ಸುಧಾರಕರಾದ ನಾರಾಯಣ ಗುರು ಅವರದು. ನಾರಾಯಣ ಗುರು ಭಾರತದ ಚರಿತ್ರೆಯಲ್ಲಿ ಕಂಡ ಅಪರೂಪದ ಆಧುನಿಕ ಸಂತರು. ಅನೇಕ ಹಿಂದುಳಿದ ಜಾತಿಗಳಿಗೆ ಆತ್ಮವಿಶ್ವಾಸವನ್ನು ತಂದುಕೊಟ್ಟು ಅವುಗಳಿಗೆ ಚಾರಿತ್ರಿಕವಾದ ಸಾಮಾಜಿಕವಾದ ಚಾಲನೆಯನ್ನು ತಂದುಕೊಟ್ಟ ಸಮಾಜ ಸುಧಾರಕರು. ಅವರ ಚಿಂತನೆ ಹಾಗೂ ಕ್ರಿಯಾಶೀಲತೆಗಳು ವಿಶ್ವದ ವಿದ್ವಾಂಸರ ಗಮನ ಸೆಳೆದಿವೆ. ಆದುದರಿಂದಲೇ ಕೇರಳದ ಸಂಸ್ಕೃತಿಯ ಹೆಮ್ಮೆಯ ಅವಿಭಾಜ್ಯ ಸಂಕೇತವಾಗಿರುವ ನಾರಾಯಣ ಗುರು ಅವರು, ಜಾತಿ–ಪಂಥಗಳನ್ನು ಮೀರಿ ಭಾರತೀಯ ಸಂಸ್ಕೃತಿಯ ಸಂಕೇತವೂ ಆಗಿದ್ದಾರೆ. ಕೇಂದ್ರ ಸರಕಾರದ ಪರಿಣತ ಸಮಿತಿಯ ಅವಿವೇಕಿ ನಿರ್ಧಾರವು ಭಾರತೀಯ ಸಂಸ್ಕೃತಿಗೆ ಮಾಡಿದ ಅವಮಾನವಾಗಿದೆ. ಉದ್ದೇಶಪೂರ್ವಕವಾಗಿ ಭಾರತದ ಹಿಂದುಳಿದ ಜಾತಿ ಜನಾಂಗಗಳಿಗೆ ಮಾಡಿದ ಅವಮಾನವೂ ಆಗಿದೆ.

ಕೇಂದ್ರದ ಸಮಿತಿಯ ಈ ನಿರ್ಧಾರಕ್ಕೆ ಕಾರಣವೇನು ಎನ್ನುವುದನ್ನು ಅದೇ ಬಿಟ್ಟು ಕೊಟ್ಟಿದೆ. ನಾರಾಯಣ ಗುರು ಅವರ ಬದಲಾಗಿ ಶಂಕರಾಚಾರ್ಯರ ಸ್ಥಬ್ಧ ಚಿತ್ರವನ್ನು ಪ್ರದರ್ಶಿಸಬಹುದು ಎಂದು ಅದು ಸೂಚಿಸಿದೆ ಎಂದು ವರದಿಯಾಗಿದೆ. ನಾರಾಯಣ ಗುರು ಅವರು ತಮ್ಮದೇ ವಿಶಿಷ್ಟವಾದ ರೀತಿಯಲ್ಲಿ ಬ್ರಾಹ್ಮಣ ಕೇಂದ್ರಿತ ವೈದಿಕ ಪರಂಪರೆಯನ್ನು ತಿರಸ್ಕರಿಸಿದವರು. ಅಂದಿನ ಕಾಲದಲ್ಲಿ ಸಮಾಜದಲ್ಲಿ ಕೀಳು ಅನ್ನಿಸಿಕೊಂಡಿದ್ದ ಜಾತಿಗಳಿಗೆ ಆಧ್ಯಾತ್ಮಿಕವಾದ ಘನತೆ ಹಾಗೂ ಆತ್ಮವಿಶ್ವಾಸವನ್ನು ತಂದು ಕೊಟ್ಟರು. ಅಂದಿನ ಚರಿತ್ರೆಯ ಸಂದರ್ಭದಿಂದಾಗಿ ಬ್ರಾಹ್ಮಣ ವಿರೋಧಿ ಚಳುವಳಿಗೆ ಪರೋಕ್ಷವಾಗಿ ಸಮರ್ಥನೆಯನ್ನು ನೀಡಿದರು. ಅವರು ಸ್ವತಃ ಜಾತಿ, ಪಂಥಗಳನ್ನು ಮೀರಿದ ದಾರ್ಶನಿಕರು, ಆಸ್ತಿಕರು ಹಾಗೂ ಸಂತ ವ್ಯಕ್ತಿತ್ವದವರು. ಆದರೆ ಅವರು ಜೀವಿಸಿದ ಕಾಲದ ಯುಗಧರ್ಮದಿಂದಾಗಿ ಹಿಂದುಳಿದ ಜಾತಿಗಳ ವೈದಿಕೇತರ ಆಧ್ಯಾತ್ಮಿಕತೆಯ ಸಂಕೇತವಾದರು. ಶಂಕರಾಚಾರ್ಯರು ದಾರ್ಶನಿಕರು, ತತ್ವಜ್ಞಾನಿಗಳು ತಾತ್ವಿಕ ಜಿಜ್ಞಾಸೆಯಲ್ಲಿ ಶ್ರೇಷ್ಠ ಸಾಧನೆ ಮಾಡಿದವರು. ಆದರೆ ಬೌದ್ಧ ಚಿಂತನೆಯನ್ನು ತಮ್ಮ ತತ್ವಜ್ಞಾನದಲ್ಲಿ ಬಳಸಿಕೊಂಡು 'ಪ್ರಚ್ಛನ್ನ ಬೌದ್ಧ'ರೆಂದು ಕರೆಸಿಕೊಂಡರೂ ಬೌದ್ಧ ಧರ್ಮದ ಹಿನ್ನಡೆಗೆ ಕಾರಣರಾದರು. ಅಲ್ಲದೆ ನಂತರದ ಕಾಲದಲ್ಲಿ ಮತ್ತು ಇಂದಿನ ಬಲಪಂಥೀಯ ವಲಯಗಳಲ್ಲಿ ಬ್ರಾಹ್ಮಣ ಕೇಂದ್ರಿತ ಹಿಂದು ಧರ್ಮದ ಸಂಕೇತವಾದರು. ಈ ವಲಯಗಳು ಅವರು ಜಾತಿ ವ್ಯವಸ್ಥೆ ಮತ್ತು ವರ್ಣ ವ್ಯವಸ್ಥೆಯನ್ನು ವಿರೋಧಿಸಲಿಲ್ಲವೆನ್ನುವ ಕಾರಣಕ್ಕೆ ಅವರನ್ನು ಹಿಂದುತ್ವದ ಸಂಕೇತವೆಂದು ಭಾವಿಸಿವೆ. ಇದು ಶಂಕರಾಚಾರ್ಯರಿಗೆ ಮಾಡಿದ ಅವಮಾನ. ಏಕೆಂದರೆ ಅವರ ಚಿಂತನೆಯನ್ನು ಒಪ್ಪದವರೂ ಕೂಡ ಶಂಕರಾಚಾರ್ಯರು ಶ್ರೇಷ್ಠ ತತ್ವಜ್ಞಾನಿಯೆಂದು ಒಪ್ಪುತ್ತಾರೆ. ಅಂಥವರನ್ನು ಹಿಂದುತ್ವದ ಸಂಕೇತವೆಂದುಕೊಳ್ಳುವ ಬಲಪಂಥೀಯರ ಸಾಂಸ್ಕೃತಿಕ ಅಜ್ಞಾನವು ಹಾಸ್ಯಾಸ್ಪದವಾಗಿದೆ. ಹೀಗಾಗಿ ಕೇರಳ ಸರಕಾರಕ್ಕೆ ನಾರಾಯಣ ಗುರುಗಳ ಬದಲಾಗಿ ಶಂಕರಾಚಾರ್ಯರ ಸ್ಥಬ್ಧಚಿತ್ರವಿರಲಿ ಎಂದು ಹೇಳಿದ ಅಧಿಕಾರಿಗಳಿಗೆ ಮತ್ತು ಅವರಿಗೆ ನಿರ್ದೇಶನ ಕೊಟ್ಟ ಬಲಪಂಥೀಯ ಸಂಘಟನೆಗಳಿಗೆ ಹಿಂದು ಧರ್ಮದ ಹಾಗೂ ಭಾರತದ ಬಗ್ಗೆ ಇರುವ ಅಜ್ಞಾನವು ಜಗತ್ತಿನಲ್ಲಿ ಇನ್ನಾರಿಗೂ ಇಲ್ಲ. ಅವರ ಲೆಕ್ಕಾಚಾರವೆಂದರೆ ಹಿಂದುಳಿದ ಜಾತಿಗಳ ಸಂತನನ್ನು ಅವಮಾನಿಸಿ ಬ್ರಾಹ್ಮಣ ಕೇಂದ್ರಿತ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿಯೆಂದು ಬಿಂಬಿಸುವುದು. ಅನಾವಶ್ಯಕವಾಗಿ ನಾರಾಯಣ ಗುರುಗಳು ಹಾಗೂ ಶಂಕರಾಚಾರ್ಯರನ್ನು ವಿರೋಧಿಗಳನ್ನಾಗಿ ಬಿಂಬಿಸುವುದು. ಭಾರತದ ಸಾಮಾನ್ಯ ಅಶಿಕ್ಷಿತ ವ್ಯಕ್ತಿಯು ನಾರಾಯಣ ಗುರುಗಳನ್ನು ಹಾಗೂ ಶಂಕರಾಚಾರ್ಯರನ್ನು ಸಮಾನ ಗೌರವದಿಂದ ನೋಡುತ್ತಾನೆ. ದಲಿತ ದ್ವೇಷ ಹಾಗೂ ಹಿಂದುಳಿದ ಜಾತಿಗಳ ಬಗೆಗಿನ ದ್ವೇಷವೇ ಬಲಪಂಥೀಯ ಚಿಂತನೆಯ ಮೂಲವಾಗಿರುವುದರಿಂದ ಇಂಥ ಅವಿವೇಕಿ ನಿರ್ಧಾರದ ಮೂಲಕ ಭಾರತೀಯ ಸಂಸ್ಕೃತಿಯನ್ನು ಹಾಳುಮಾಡುತ್ತಿದೆ.

ಇಲ್ಲಿ ಎರಡು ಮುಖ್ಯ ಅಂಶಗಳಿವೆ. ಮೊದಲನೆಯದು, ಕೇರಳ ಸಂಸ್ಕೃತಿ ಯಾವುದು ಅನ್ನುವುದು ಎನ್ನುವುದನ್ನು ಯಾರು ನಿರ್ಧಾರ ಮಾಡುವವರು? ಕೇರಳದ ಸಾಮಾನ್ಯ ಜನರಲ್ಲವೇ? ಅಥವಾ ಅಲ್ಲಿಯ ನಾಡು, ನುಡಿ ಸಂಸ್ಕೃತಿಗಳನ್ನು ಅಧ್ಯಯನ ಮಾಡುವವರು ಅಲ್ಲವೇ? ಈಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಲ್ಲಿಯ ಸರಕಾರವಲ್ಲವೆ? ಆದರೆ ಇಂದಿನ ಕೇಂದ್ರ ಸರಕಾರವು ಸಂಸ್ಕೃತಿಯೆಂದರೆ ಜಿ.ಎಸ್.ಟಿ. ಎಂದು ಅಂದುಕೊಂಡಿದೆ. ಅಲ್ಲದೆ ಅಪಾರವಾದ ವೈವಿಧ್ಯತೆ ಇರುವ ಭಾರತೀಯ ಸಂಸ್ಕೃತಿಯನ್ನು, ವಿವಿಧ ರಾಜ್ಯಗಳ ಸಂಸ್ಕೃತಿಯನ್ನು ನಿರ್ಧರಿಸುವ ಅಧಿಕಾರ ತನಗಿದೆ ಎನ್ನುವ ಭ್ರಮೆಯಲ್ಲಿದೆ. ಇಂದು ನಮ್ಮ ಕಾಲದ ಯಾವುದೇ ನಾಗರೀಕ ರಾಷ್ಟ್ರದಲ್ಲಿ ಅಧಿಕಾರದಲ್ಲಿರುವ ಸರಕಾರವು ಸಂಸ್ಕೃತಿಯ ವಿಷಯದಲ್ಲಿ ತಾನೇ ನಿರ್ಧಾರ ಕೈಗೊಳ್ಳುತ್ತದೆ ಎಂದರೆ ಅದು ಹಾಸ್ಯಾಸ್ಪದವಾಗಿದೆ. ಎರಡನೇಯ ಅಂಶವೆಂದರೆ, ಸಂವಿಧಾನದ ಪ್ರಕಾರ ಭಾರತವು ಒಕ್ಕೂಟ ಮಾದರಿಯನ್ನು ಒಪ್ಪಿಕೊಂಡಿರುವಾಗ ಕೇಂದ್ರದ ಏಕಪಕ್ಷೀಯ ನಿರ್ಧಾರವು ಸಂವಿಧಾನ ವಿರೋಧಿಯಾಗಿದೆ. ಇದರ ಆಚೆಗೆ ಭಾರತೀಯ ಸಂಸ್ಕೃತಿಯನ್ನು ಬ್ರಾಹ್ಮಣ ಸಂಸ್ಕೃತಿಯಾಗಿ ಬಿಂಬಿಸಲು ಹೊರಟಿರುವ ಬಲಪಂಥೀಯ ಚಿಂತನೆಯು ದಲಿತ ವಿರೋಧಿ ಹಾಗೂ ಹಿಂದುಳಿದ ಜಾತಿಗಳ ವಿರೋಧಿ ಎನ್ನುವುದನ್ನು ಈ ಪ್ರಸಂಗವು ಸಾಬೀತು ಮಾಡಿದೆ.

ಹಾಗಿದ್ದರೆ ನಾವು ಏನು ಮಾಡಬೇಕು? ಜನವರಿ 26ರಂದು ಕೇರಳದಲ್ಲಿ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಪರ್ಯಾಯವಾಗಿ ನಾರಾಯಣ ಗುರು ಅವರಿಗೆ ಗೌರವ ತೋರಿಸುವ ಕಾರ್ಯಕ್ರಮಗಳನ್ನು ನಡೆಸಬೇಕು. ಅವರ ಚಿಂತನೆ, ಸಮಾಜ ಸುಧಾರಣೆಯ ಕ್ರಮಗಳನ್ನು ನೆನಪು ಮಾಡಿಕೊಳ್ಳಬೇಕು. ಅಲ್ಲದೆ 'ನಮ್ಮ ಸಂಸ್ಕೃತಿ, ನಮ್ಮ ನಿರ್ಧಾರ' ಎನ್ನುವ ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ರವಾನಿಸಬೇಕು. ಕೇಂದ್ರ ಸರಕಾರದ ನಿರ್ಧಾರವನ್ನು ಬೆಂಬಲಿಸುತ್ತಿರುವ ಕರ್ನಾಟಕದ ರಾಜಕೀಯ ಮುಖಂಡರು ದಲಿತ ದ್ವೇಷಿಗಳು ಹಾಗೂ ಹಿಂದುಳಿದ ಜಾತಿಗಳ ವಿರೋಧಿಗಳು ಎನ್ನುವುದನ್ನು ವ್ಯಾಪಕವಾಗಿ ಚರ್ಚಿಸಬೇಕು. ಈ ಮುಖಂಡರುಗಳಲ್ಲಿ ಕೆಲವರು ಸ್ವಜಾತಿ ದ್ವೇಷಿಗಳು ಇರುವುದನ್ನು ಅರ್ಥಮಾಡಿಕೊಳ್ಳಬೇಕು.

ಈ ಚರ್ಚೆಯು ಇಲ್ಲಿಗೆ ನಿಲ್ಲಬಾರದು. ಇಂದಿನ ಸಂದರ್ಭದಲ್ಲಿ ಸಂಸ್ಕೃತಿಯನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಲಾಗುತ್ತಿದೆ. ಅತ್ಯಂತ ಅಲ್ಪಸಂಖ್ಯಾತರಿಗೆ ಸೇರಿದ ವೈದಿಕ ಸಂಸ್ಕೃತಿಯನ್ನು ಮೂಲತಃ ಅವೈದಿಕ ಪರಂಪರೆಗಳ ಜನಸಮುದಾಯಗಳ ಮೇಲೆ ಹೇರಲಾಗುತ್ತಿದೆ. ಈ ಪ್ರಯತ್ನದ ಭಾಗವಾಗಿ ನಾರಾಯಣ ಗುರುಗಳಂಥ ಜನಪರಂಪರೆಯ ಶ್ರೇಷ್ಠ ಸಂತರನ್ನು ಉದ್ದೇಶಪೂರ್ವಕವಾಗಿ ಅವಮಾನಿಸಲಾಗುತ್ತಿದೆ. ಆದ್ದರಿಂದ ಯಾವುದು ನಮ್ಮ ಸಂಸ್ಕೃತಿ ಅಲ್ಲವೆನ್ನುವುದನ್ನು ಖಚಿತವಾಗಿ ಹೇಳಬೇಕಾಗಿರುವ ಅವಶ್ಯಕತೆಯಿದೆ.

ನಾರಾಯಣ ಗುರುಗಳು ಅದ್ವೈತ ತತ್ವಜ್ಞಾನದಲ್ಲಿ ಅಪಾರವಾದ ಶ್ರದ್ಧೆಯುಳ್ಳವರು. ಶಂಕರಾಚಾರ್ಯರು ಬರೆದ ಭಾಷ್ಯವನ್ನು ಗೌರವಿಸಿದವರು. ವೈಕಮ್ ಸತ್ಯಾಗ್ರಹದ ಪ್ರಕರಣದ ಸಂಬಂಧ (ಇಂದಿನ) ಕೇರಳಕ್ಕೆ ಬಂದಿದ್ದ ಗಾಂಧಿ ನಾರಾಯಣ ಗುರುಗಳ ಆಶ್ರಮದಲ್ಲಿ ತಂಗಿ ಅವರೊಡನೆ ದೀರ್ಘವಾದ ಸಂಭಾಷಣೆ ನಡೆಸುತ್ತಾರೆ. ನಾರಾಯಣ ಗುರುಗಳು ಸಂಸ್ಕೃತದಲ್ಲಿ, ಗಾಂಧಿ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾರೆ. ವರ್ಣವ್ಯವಸ್ಥೆಯ ಬಗ್ಗೆ ಚರ್ಚಿಸುತ್ತಾರೆ. ಸಂಸ್ಕೃತದಲ್ಲಿ ಮಾತನಾಡುವ ನಾರಾಯಣ ಗುರುಗಳು ವರ್ಣ ಹಾಗೂ ಜಾತಿ ವ್ಯವಸ್ಥೆಯ ಬಗೆಗಿನ ತಮ್ಮ ಚಿಂತನೆಯಲ್ಲಿ ಗಾಂಧಿಯವರಿಗಿಂತ ಆಧುನಿಕರು ಹಾಗು ಹೆಚ್ಚು ವಾಸ್ತವಿಕ ಜ್ಞಾನವುಳ್ಳವರಾಗಿದ್ದರು. ನಾರಾಯಣ ಗುರುಗಳನ್ನು ಭೇಟಿಯಾದ ಮೇಲೆ ಆ ಭೇಟಿ ತಮ್ಮ ಜೀವನದ ಅಮೂಲ್ಯ ಗಳಿಗೆ ಎಂದು ಗಾಂಧಿ ಹೇಳಿದರು. ಅವರ ಹಾಗೆಯೆ ಗುರುಗಳನ್ನು ಭೇಟಿಯಾಗಿದ್ದ ರವೀಂದ್ರನಾಥ ಟಾಗೋರ್ ಅವರು "ಆಧ್ಯಾತ್ಮದಲ್ಲಿ ನಾರಾಯಣ ಗುರುಗಳಿಗೆ ಹೋಲಿಸಬಹುದಾದವರು ಯಾರೂ ಇಲ್ಲ" ಎಂದು ಹೇಳಿದರು. ಹಾಗಿದ್ದರೆ ನಮ್ಮ ಕೇಂದ್ರ ಸರಕಾರ ಮಾತ್ರ ನಾರಾಯಣ ಗುರುಗಳು ಸ್ಥಬ್ಧ ಚಿತ್ರವು ಬೇಡವೆಂದು ಏಕೆ ಹೇಳುತ್ತಿದೆ? ಹೀಗೆ ಹೇಳುವ ಸರಕಾರಕ್ಕೆ ಭಾರತೀಯ ಸಂಸ್ಕೃತಿಯ ಪ್ರಾಥಮಿಕ ಪರಿಚಯವಾದರೂ ಇದೆಯೇ?

ನಾರಾಯಣ ಗುರುಗಳ ಸ್ತಬ್ದಚಿತ್ರವನ್ನು ನಿರಾಕರಿಸಿದ ಕೇಂದ್ರ ಸರಕಾರ–ಸಿಪಿಐ(ಎಂ) ತೀವ್ರ ಖಂಡನೆ

ಗಣರಾಜ್ಯೋತ್ಸವದ ಪೆರೇಡ್ ಗಾಗಿ ಕೇರಳ ಸರಕಾರ ಆಯೋಜಿಸಿದ ಬ್ರಹ್ಮಶ್ರೀ ನಾರಾಯಣ ಗುರುಗಳ ಸ್ತಬ್ದಚಿತ್ರವನ್ನು ಕೇಂದ್ರ ಸರ್ಕಾರದ ಗಣರಾಜ್ಯೋತ್ಸವ ಸಮಿತಿಯು ತಿರಸ್ಕರಿಸಿರುವುದನ್ನು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯು ತೀವ್ರವಾಗಿ ಖಂಡಿಸಿದೆ.

ಒಂದೇ ಜಾತಿ, ಒಂದೇ ಮತ, ಒಂದೇ ದೇವರು – ಜಾತಿ ಮತ ಯಾವುದಾದರೇನು ಮನುಷ್ಯ ಒಳ್ಳೆಯವನಾದರೆ ಸಾಕು ಎಂಬ ಅತ್ಯಂತ ಶ್ರೇಷ್ಠವಾದ ಮಾನವೀಯ ಸಂದೇಶವನ್ನು ಜಗತ್ತಿಗೆ ಸಾರಿದ, ಜಾತಿ ತಾರತಮ್ಯ ಮೂಡನಂಬಿಕೆಗಳ ವಿರುದ್ದ ಧ್ವನಿ ಎತ್ತಿ ಸಮಾಜದ ಸುಧಾರಣೆಗೆ ದೊಡ್ಡ ಕೊಡುಗೆ ನೀಡಿದ, ಕೋಟ್ಯಾಂತರ ಜನತೆಯ ಹ್ರದಯ ಗೆದ್ದ ಮಹಾನ್ ಚೇತನ ನಾರಾಯಣಗುರುಗಳ ಸ್ತಬ್ಧಚಿತ್ರವನ್ನು ನಿರಾಕರಿಸುವ ಮೂಲಕ ಸಮಾನತೆಯ ಚಿಂತನೆ ಹಾಗೂ ಹಿಂದುಳಿದ ವರ್ಗಗಳ ಸ್ವಾಭಿಮಾನವನ್ನು ಅವಮಾನಿಸಿರುವುದು ಮಾತ್ರವಲ್ಲ ಶಂಕರಾಚಾರ್ಯರ ಪ್ರತಿಮೆಯ ಸ್ತಬ್ದಚಿತ್ರವನ್ನು ಮಾಡಲು ಸೂಚಿಸಿರುವುದು ಶ್ರೇಣೀಕೃತ ಜಾತಿ ವ್ಯವಸ್ಥೆಯ ಹಿತಾಸಕ್ತಿಯನ್ನು ಕೇಂದ್ರದ ಬಿಜೆಪಿ ಸರಕಾರ ಹೊಂದಿರುವುದನ್ನು ಎತ್ತಿ ತೋರಿಸಿದೆ. ಇದು ಆಡಳಿತದಲ್ಲಿ ಆರ್‌ಎಸ್‌ಎಸ್ ಚಿಂತನೆಗಳು ಮೇಲುಗೈ ಸಾಧಿಸಿರುವುದರ ಪರಿಣಾಮ. ಕೇಂದ್ರ ಸರಕಾರವು ತಕ್ಷಣ ಆಗಿರುವ ಪ್ರಮಾದವನ್ನು ಸರಿಪಡಿಸಿ ನಾರಾಯಣ ಗುರುಗಳ ಸ್ತಬ್ಧಚಿತ್ರಕ್ಕೆ ಅವಕಾಶ ನೀಡಬೇಕೆಂದು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಆಗ್ರಹಿಸಿದೆ.

ತಲೆಯ ಮೇಲೊಂದು ಸೂರು

ಎಂಬುದು ಗ್ರಾಮೀಣ ಭಾರತದ ಜನರಿಗೆ ಇನ್ನೂ ಕನಸಾಗಿಯೇ ಉಳಿದಿದೆ



‘ಎರಡು ಹೊತ್ತಿನ ಅನ್ನ, ತಲೆ ಮೇಲೊಂದು ಸೂರು’ ಬದುಕಲು ಬೇಕಾದ ಕನಿಷ್ಠ ಅಗತ್ಯಗಳು, ಆದರೆ ನಮ್ಮ ಭಾರತದಲ್ಲಿ ಸ್ವಾತಂತ್ರ್ಯದ 75 ನೇ ವರ್ಷಾಚರಣೆ ಮಾಡುತ್ತಿರುವಾಗ, ಭಾರತದ ಜನರು ಕನಿಷ್ಠ ಅಗತ್ಯಗಳಿಗಾಗಿ ಇನ್ನೂ ಹೋರಾಡುತ್ತಲೇ ಇದ್ದಾರೆ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತ 101 ನೇ ಸ್ಥಾನದಲ್ಲಿದೆ; ಭಾರತದ ಆಹಾರ ನಿಗಮವು ಅಗತ್ಯಕ್ಕಿಂತ ಎರಡು ಪಟ್ಟು ಆಹಾರ ಧಾನ್ಯಗಳನ್ನು ಶೇಖರಿಸಿಟ್ಟಿರುವಾಗ ಲಕ್ಷಾಂತರ ಜನರು ಹಸಿವಿನಿಂದ ತೊಳಲಾಡುತ್ತಿದ್ದಾರೆ; ಅದೇ ರೀತಿಯಲ್ಲಿ, ಜಮೀನಿನ ಲಭ್ಯತೆ ಇರುವಾಗಲೂ ಸ್ವಂತ ಮನೆ ಹೊಂದುವ ಲಕ್ಷಾಂತರ ಜನರ ಕನಸು ಇನ್ನೂ ನನಸಾಗುತ್ತಿಲ್ಲ. ಸಂಪನ್ಮೂಲಗಳ ಕೊರತೆಯಿಂದಲ್ಲ, ಕಾರ್ಪೋರೇಟ್-ಭೂಮಾಲಕರ ನಿಯಂತ್ರಣದಲ್ಲಿರುವ ಸರ್ಕಾರಗಳ ನೀತಿಗಳಿಂದಾಗಿ ಜನರ ಕನಸು ನುಚ್ಚುನೂರಾಗುತ್ತಿವೆ.

ವಿಕ್ರಮ್ ಸಿಂಗ್ **ಅನು: ಟಿ. ಸುರೇಂದ್ರ ರಾವ್**

ಬಿಹಾರದ ಸಮಸ್ತಿಪುರ ಜಿಲ್ಲೆಯ ಚೋಟಾಹಿ ಹಳ್ಳಿಯ ಕೆರೆಯ ಬಳಿ ಕೊನೇ ಪಕ್ಷ 50 ಜನರು ಆತಂಕದಿಂದ ಸೇರಿದ್ದರು. ಬಿಹಾರ ಸರ್ಕಾರ ‘ಜಲ ಜೀವನ್ ಹರ್ಯಾಲಿ’ ಯೋಜನೆಯಡಿ ಅವರು ವಾಸವಿದ್ದ ಪ್ರದೇಶವನ್ನು ‘ಹಸಿರು ವಲಯ’ ಎಂದು ಗುರುತಿಸಿತ್ತು; ಅಲ್ಲಿ ಕಟ್ಟಲಾಗಿರುವ ಮನೆಗಳನ್ನು ಅಕ್ರಮ ಎಂದು ಘೋಷಿಸಿತ್ತು.

ಅವರ ಮನೆಗಳು ಜೇಡಿಮಣ್ಣಿನಿಂದ ಕಟ್ಟಿದ್ದಾಗಿವೆ ಮತ್ತು ಅವರು ಹತ್ತಾರು ದಶಕಗಳಿಂದಲೂ ಅಲ್ಲಿಯೇ ವಾಸಿಸುತ್ತಿದ್ದಾರೆ. ಅವರ ಮನೆಗಳನ್ನು ಈಗ ಬಲವಂತದಿಂದ ಕಸಿದುಕೊಳ್ಳಲಾಗುತ್ತದೆ. ಅವರಲ್ಲಿ ಬಹಳ ಜನರು ಪರಿಶಿಷ್ಟ ಜಾತಿಯ ಹಾಗೂ ಆರ್ಥಿಕವಾಗಿ ವಂಚಿತರಾದ ಕೃಷಿ ಕೂಲಿಕಾರರಾಗಿದ್ದಾರೆ.

ಇಂತಹ ಕತೆಗಳು ನಮ್ಮ ದೇಶದಲ್ಲಿ ಅಪರೂಪವೇನಲ್ಲ. ಭಾರತದ ಲಕ್ಷಾಂತರ ಭೂಹೀನ ಜನರಿಗೆ ತಮ್ಮ ತಲೆಯ ಮೇಲೊಂದು ಸೂರು ಕಟ್ಟಿಕೊಳ್ಳಲು ಅವರದೇ ಆದ ಚಿಕ್ಕ ತುಂಡು ಭೂಮಿಯೂ ಇಲ್ಲ.

2011 ರ ಜನಸಂಖ್ಯಾ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಭಾರತದ ಒಬ್ಬ ವ್ಯಕ್ತಿ ಸರಾಸರಿ 40.03 ಚದರಡಿ ಜಾಗವನ್ನು ಬಳಸುತ್ತಾನೆ, ಅದೇ ನಗರ ಪ್ರದೇಶಗಳಲ್ಲಿ 39.20 ಚದರಡಿ ಜಾಗವನ್ನು ಬಳಸಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿನ ದೊಡ್ಡ ಮನೆಯಲ್ಲಿ 5 ಜನರ ಕುಟುಂಬ ವಾಸಿಸುತ್ತದೆ. ಆದರೆ ಈ ವ್ಯತ್ಯಾಸ ನಗಣ್ಯ. ಗ್ರಾಮೀಣ ಜನರು ಅಷ್ಟು ಚಿಕ್ಕ ಮನೆಗಳಲ್ಲಿ ವಾಸಿಸುತ್ತಿರುವುದಕ್ಕೆ ಭೂಮಿಯ ಕೊರತೆ ಕಾರಣವಲ್ಲ, ಬದಲಿಗೆ ಬಡಜನರಿಗೆ ಭೂಮಿಯ ಅಸಮಾನ ವಿತರಣೆ ಹಾಗೂ ಸಂಪನ್ಮೂಲಗಳ ಕೊರತೆಯೇ ಕಾರಣ.

ಅಚ್ಚರಿಯ ಸಂಗತಿಯೆಂದರೆ, ಭಾರತದಲ್ಲಿ ಮನೆಯಿಲ್ಲದವರ ಸರಿಯಾದ ದತ್ತಾಂಶಗಳೇ ಇಲ್ಲ. ಕಳೆದ 2011 ರ ಸಮೀಕ್ಷೆಯ ಅಂದಾಜಿನ ಪ್ರಕಾರ 1.77 ಲಕ್ಷ ಜನರು ವಸತಿಹೀನರಾಗಿದ್ದಾರೆ. ಈ ಸಂಖ್ಯೆಯು ಕಳೆದ ಒಂದು ದಶಕದಲ್ಲಿ ನಿಸ್ಸಂದೇಹವಾಗಿಯೂ ಹೆಚ್ಚಾಗಿರಬೇಕು, ಏಕೆಂದರೆ ಸರ್ಕಾರದ ಯೋಜನೆಗಳಿಗೆ ಮತ್ತು ಕಾರ್ಪೊರೇಟುಗಳ ಭೂಗಳ್ಳತನ ಮುಂತಾದ ಜಮೀನು ಕಸಿಯುವ ಕಾರಣಗಳಿಂದ ಅಸಂಖ್ಯಾತ ಜನರು ಭೂವಂಚಿತರಾಗಿದ್ದಾರೆ.

ನಿಜ ಹೇಳಬೇಕೆಂದರೆ, ಕನಿಷ್ಠ ವಸತಿಯನ್ನು ಪಡೆಯುವುದು ಮಾನವ ಹಕ್ಕುಗಳಲ್ಲಿ ಒಂದು ಮತ್ತು ಎಲ್ಲರಿಗೂ ಮನೆ ಸೌಲಭ್ಯ ಒದಗಿಸುವ ಹೊಣೆಗಾರಿಕೆ ಎಲ್ಲಾ ಸರ್ಕಾರಗಳದ್ದಾಗಿದೆ. ಈ ಹಿನ್ನೆಲೆಯಲ್ಲಿ ವಸತಿ ಅಂದರೆ ಏನು ಎನ್ನುವುದನ್ನು ತಿಳಿಯುವ ಅಗತ್ಯವಿದೆ. ಮನೆ ಅಂದ ಕೂಡಲೇ ನಾಲ್ಕು ಗೋಡೆ ಮತ್ತು ಅದಕ್ಕೊಂದು ಸೂರು ಎಂದು ನಾವು ಸಾಮಾನ್ಯವಾಗಿ ಭಾವಿಸುತ್ತೇವೆ. ಅದೊಂದು ಸರಕು ಎಂದೂ ತಿಳಿಯುತ್ತೇವೆ. ಆದರೆ, **ವಿಶ್ವಸಂಸ್ಥೆಯ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಿತಿಯ 1991** ರ ವರದಿಯ ಪ್ರಕಾರ “ಬದುಕುವ ಹಕ್ಕು ಎಂದರೆ **ಶಾಂತಿ ಹಾಗೂ ಘನತೆಯಿಂದ ಎಲ್ಲಿಯಾದರೂ ಸುರಕ್ಷಿತವಾಗಿ** ಬದುಕುವುದು.”

ಈ ಆಶಯಗಳಿಗೂ ಮತ್ತು ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಒಂದು ಮನೆಯಂತಹ ಕಟ್ಟಡವನ್ನು ಒದಗಿಸುವುದು ‘ಇಂದಿರಾ ಆವಾಸ್ ಯೋಜನಾ’ದ ಆಶಯವಾಗಿತ್ತು. 2015 ರ ‘ಪ್ರಧಾನ ಮಂತ್ರಿ ಆವಾಸ್ ಯೋಜನಾ –ಗ್ರಾಮೀಣ’ ದ ಪ್ರಕಾರ 2022 ರ ವೇಳೆಗೆ ಗ್ರಾಮೀಣ ಬಡವರಿಗೆ 3 ಕೋಟಿ ಮನೆಗಳನ್ನು ಒದಗಿಸುವುದೆಂದು ನಿರ್ಧರಿಸಲಾಗಿತ್ತು.

ಇತ್ತೀಚೆಗೆ, ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು “ಈ ಯೋಜನೆಯಡಿಯಲ್ಲಿ ಈಗಾಗಲೇ ಗ್ರಾಮೀಣ ಭಾಗದ 1 ಕೋಟಿ ಕುಟುಂಬಗಳಿಗೆ ಮನೆಗಳನ್ನು ನೀಡಲಾಗಿದೆ” ಎಂದು ಪ್ರಕಟಿಸಿದ್ದರು. ಆದರೆ, ಈ ಯೋಜನೆಯನ್ನು ಆರಂಭಿಸಿದ್ದೇ 2015 ರಲ್ಲಿಯಾದ್ದರಿಂದ ಆ ನಂತರ ನಿರ್ಮಾಣವಾದ ಒಟ್ಟು ಮನೆಗಳ ಸಂಖ್ಯೆಯೇ ಕೇವಲ 70 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಅಷ್ಟೆ.

ಈಗಿರುವ ಯಾವ ವಸತಿ ಯೋಜನೆಯೂ ದೇಶದ ವಸತಿ ಸಮಸ್ಯೆಯನ್ನು ಪರಿಹರಿಸಲಾರದು. ಅವು ಯಾವ ಭೂಹೀನರಿಗೂ ಮನೆ ಒದಗಿಸುವುದಿಲ್ಲ. ಏಕೆಂದರೆ, ಈ ಯೋಜನೆಗಳಡಿ ಹಣಕಾಸಿನ ಅನುದಾನ ಪಡೆಯಬೇಕಾದರೆ ಅವರು ಭೂಮಿಯ ಶಾಸನಬದ್ಧ ಒಡೆಯರಾಗಿರಬೇಕು.

ಗ್ರಾಮೀಣ ಭೂಹೀನರಿಗೆ ಭೂಮಿ ಒದಗಿಸಲು ಸಾಕಷ್ಟು ಅವಕಾಶಗಳು ಸರ್ಕಾರಿ ದಾಖಲೆಗಳಲ್ಲಿವೆ; ಭೂಹೀನರಿಗೆ ಅದರಲ್ಲೂ ಆದ್ಯತೆಯ ಮೇರೆಗೆ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಕುಟುಂಬಗಳಿಗೆ ಗ್ರಾಮದ ಸರ್ವರಿಗೂ ಸೇರಿದ ಜಮೀನನ್ನು ವಿತರಿಸಲು ನಿಬಂಧನೆಗಳಿವೆ. ಆದರೆ ಇವ್ಯಾವ ನಿಬಂಧನೆಗಳನ್ನೂ ಯಾವುದೇ ಜನ ಚಳುವಳಿಗಳಿಲ್ಲದೇ ಅಥವಾ ಸಂವೇದನಾಶೀಲ ಸರ್ಕಾರಿ ಅಧಿಕಾರಿಗಳಿಲ್ಲದೇ ಬಳಸಲಾಗಿಲ್ಲ.

ಇದು ಸಮಸ್ಯೆಯ ಒಂದು ಮುಖವಷ್ಟೆ. ಅವರದ್ದೇ ಮನೆಗಳಿದ್ದೂ ಜಮೀನು ಅವರದ್ದಲ್ಲದ ಭೂಹೀನರೂ ಇದ್ದಾರೆ. ಸರ್ಕಾರ ಅಥವಾ ಭೂಮಾಲೀಕ ಅವರನ್ನು ಒಕ್ಕಲೆಬ್ಬಿಸುವ ಅಪಾಯ ಸದಾ ಇದ್ದೇ ಇದೆ. ಆದಿವಾಸಿ ಜನಗಳ ಒಂದು ದೊಡ್ಡ ವಿಭಾಗವನ್ನು ಅವರ ಮೂಲ ಸ್ಥಳಗಳಿಂದ ಓಡಿಸಲಾಗುತ್ತಿದೆ. ಕಿರುಕುಳ ಹಾಗೂ ಅವಮಾನಕ್ಕೆ ಅವರನ್ನು ಒಳಪಡಿಸಲಾಗುತ್ತಿದೆ.

ಪಂಜಾಬಿನ ಪಠಾನ್‌ಕೋಟ್ ಜಿಲ್ಲೆಯ ಸುಜನ್‌ಪುರ ಪ್ರದೇಶದ ಚೊಟ್ಟಾಪನೋಲ್ ಹಳ್ಳಿಯಲ್ಲಿ ದೊಡ್ಡ ಭೂಮಾಲಿಕನ ಜಮೀನಿನಲ್ಲಿ ಕಟ್ಟಿದ ಮನೆಗಳಲ್ಲಿ ಜನರು ವಾಸಿಸುತ್ತಿದ್ದಾರೆ. ಯಾವಾಗಲಾದರೂ ಸ್ಥಳೀಯ ಜನರ ಅಥವಾ ಕಾರ್ಮಿಕರ ಅಥವಾ ಭೂಮಾಲಿಕರ ಕುಟುಂಬದ ಸದಸ್ಯರ ನಡುವೆ ತಿಕ್ಕಾಟಗಳು ಉಂಟಾದರೆ, ಈ ಬಸ್ತಿಯ ಹಾದಿಯನ್ನು ಮುಚ್ಚಲಾಗುತ್ತದೆ. ಇನ್ನು ಕೆಲವು ಬಾರಿ, ಯಾವುದಾದರೂ ಕುಟುಂಬ ಮನೆಯನ್ನು ನವೀಕರಿಸಲು ಅಥವಾ ಹಳೆ ಮನೆಯ ಬದಲು ಹೊಸ ಮನೆ ನಿರ್ಮಾಣ ಮಾಡಲು ಬಯಸಿದರೆ, ಆ ಜಮೀನಿನ ಭೂಮಾಲಿಕ ಅವರನ್ನು ಕೋರ್ಟಿಗೆ ಎಳೆಯುತ್ತಾನೆ. ತಮ್ಮದಲ್ಲದ ಜಮೀನಿನಲ್ಲಿ ಮನೆ ಕಟ್ಟಿಕೊಂಡವರ ಅಳಲಲ್ಲಿ ಇದು ಒಂದು ನಿದರ್ಶನವಷ್ಟೆ, ಇನ್ನೂ ವಿಧ ವಿಧವಾದ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ.

ಭಾರತದಲ್ಲಿ ಭೂಹೀನತೆ ಬಹು ದೊಡ್ಡ ತೊಡಕಾಗಿ ಪರಿಣಮಿಸಿದೆ ಮತ್ತು ಅದು ವಸತಿಗೆ ನೇರವಾಗಿ ಸಂಬಂಧಿಸಿದೆ. 2016 ರ ‘ಇಂಡಿಯಾ ಸ್ಪೆಂಡ್ ರಿಪೋರ್ಟ್’ ಪ್ರಕಾರ ಭಾರತದ ಕೃಷಿಭೂಮಿಯ ಮೂರನೇ ಒಂದು ಭಾಗದಷ್ಟು ಜಮೀನು ಜನಸಂಖ್ಯೆಯ ಶೇಕಡಾ 4.9 ರಷ್ಟು ಜನರ ವಶದಲ್ಲಿದೆ, ಮತ್ತು ಒಬ್ಬ ದೊಡ್ಡ ಭೂಮಾಲೀಕ ಸಾಮಾನ್ಯವಾಗಿ ಒಬ್ಬ ಸಾಮಾನ್ಯ ರೈತನಿಗಿಂತ 45 ಪಟ್ಟು ಹೆಚ್ಚು ಜಮೀನನ್ನು ಹೊಂದಿರುತ್ತಾನೆ.

ಭೂಸುಧಾರಣೆ ಮತ್ತು ಜಮೀನು ವಿತರಣೆಯ ಕಾರ್ಯಸೂಚಿಯು ಪ್ರಮುಖ ರಾಜಕೀಯ ವಿಷಯವಾಗಿ ಹೊರಹೊಮ್ಮಿದೆ. ಭೂಸುಧಾರಣೆಯ ಸಾಧ್ಯತೆಗಳ ಕಾಲ ಮುಗಿದುಹೋಗಿದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ಹೂಡಿಕೆಯೊಂದೇ ಭವಿಷ್ಯದ ಬೆಳವಣಿಗೆಗೆ ಸಹಾಯಕಾರಿ ಎಂದು ಕೆಲವು ರಾಜಕೀಯ ಪಕ್ಷಗಳು ಹೇಳುತ್ತಿವೆ. ಎನ್.ಎಸ್.ಎಸ್.ಒ.(ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ)ದ 43 ನೇ ಸುತ್ತಿನ (1987–88) ಸಮೀಕ್ಷೆ ಮತ್ತು 68 ನೇ ಸುತ್ತಿನ (2011–12) ಸಮೀಕ್ಷೆಯ ನಡುವಿನ ಅಂಕಕಿಅಂಶಗಳನ್ನು ಹೋಲಿಕೆ ಮಾಡಿದಾಗ, ನವ–ಉದಾರವಾದಿ ನೀತಿಗಳ ಜಾರಿಯ ನಂತರ, ಭೂಸುಧಾರಣೆಯ ಮಾತುಗಳು ಹಿಂದಕ್ಕೆ ಸರಿದಿರುವ ಮತ್ತು ಅಪಾಯಕಾರಿ ಮಟ್ಟದಲ್ಲಿ ಭೂನಷ್ಟವಾಗುತ್ತಿರುವ ಸಂಗತಿ ಬೆಳಕಿಗೆ ಬಂದಿದೆ. ಗ್ರಾಮೀಣ ಭಾಗದ ಭೂಹೀನ ಕುಟುಂಬಗಳ (0.01 ಹೆಕ್ಟೇರ್ ಜಮೀನಗಿಂತ ಕಡಿಮೆ ಇರುವವರು) ಸಂಖ್ಯೆ ಈ ಅವಧಿಯಲ್ಲಿ ಶೇಕಡಾ 35 ರಿಂದ ಶೇಕಡಾ 49 ಕ್ಕೆ ಏರಿದೆ.

ಒಂದು ಕಡೆಯಲ್ಲಿ, ಭಾರತ ಸರ್ಕಾರವು ತಾನು ಎಲ್ಲರಿಗೂ ವಸತಿ ಸೌಕರ್ಯ ಕಲ್ಪಿಸುವುದಾಗಿ ಹೇಳುತ್ತಿರುವಾಗಲೇ, ಮತ್ತೊಂದೆಡೆ ಅದರ ಆ ನೀತಿಗಳೆಲ್ಲಾ ಕೇವಲ ಕೆಲವೇ ಯೋಜನೆಗಳಿಗೆ ಸೀಮಿತವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಿಂದಿನ ಯುಪಿಎ ಹಾಗೂ ಈಗಿನ ಎನ್.ಡಿ.ಎ. ಸರ್ಕಾರಗಳು ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಗಳೇ ಜನರನ್ನು ಅವರ ಜಮೀನುಗಳಿಂದ ಹೊರತಳ್ಳುತ್ತಿವೆ. ಆದಿವಾಸಿಗಳಿಗೆ ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಅವರ ಭೂಮಿಹಕ್ಕುಗಳನ್ನು ನೀಡುವ ಸಲುವಾಗಿ ತಂದಿರುವ **ಅರಣ್ಯ ಹಕ್ಕುಗಳ ಕಾಯಿದೆ**ಯನ್ನು ಬಳಸಿ ಲಕ್ಷಾಂತರ ಆದಿವಾಸಿಗಳನ್ನು ಅವರ ಜಮೀನುಗಳಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ರೈತರಿಂದ ಸಾವಿರಾರು ಎಕರೆಗಳ ಕೃಷಿ ಭೂಮಿಯನ್ನು ಕೂಡ ಕಸಿದುಕೊಂಡು ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರ ಮಾಡಲಾಗುತ್ತಿದೆ.

ಭಾರತದಲ್ಲಿ ಬಲವಂತದಿಂದ ಒಕ್ಕಲೆಬ್ಬಿಸುವ ಕುರಿತು ವಸತಿ ಮತ್ತು ಭೂ ಹಕ್ಕುಗಳ ಜಾಲವು (ಹೆಚ್.ಎಲ್.ಆರ್.ಎನ್.) ನಡೆಸಿದ ಸಮೀಕ್ಷೆಯ ವರದಿ ಪ್ರಕಾರ 2017, 2018 ಮತ್ತು 2019 ರಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು 1,77,700 ಮನೆಗಳನ್ನು ಧ್ವಂಸ ಮಾಡಿವೆ: ಅಂದರೆ ಪ್ರತಿದಿನ 519 ಜನರು ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ; ಪ್ರತಿ ಗಂಟೆಗೆ 5 ಮನೆಗಳು ನಾಶವಾಗಿವೆ; ಪ್ರತಿ ಗಂಟೆಗೆ 22 ಜನರು ಮನೆ ಕಳೆದುಕೊಳ್ಳುತ್ತಿದ್ದಾರೆ. ಇನ್ನೂ ಮುಂದುವರಿದು, ಪ್ರಸ್ತುತ ಭಾರತದಾದ್ಯಂತ ಸರಿಸುಮಾರು 1 ಕೋಟಿ 50 ಲಕ್ಷ ಜನರು ಸ್ಥಾನಪಲ್ಲಟಗೊಳ್ಳುವ ಅಪಾಯದಲ್ಲಿದ್ದಾರೆ. ಈ ಅಂಕಿಸಂಖ್ಯೆಗಳು ನಮ್ಮನ್ನು ಗಾಬರಿಗೊಳಿಸುತ್ತವಾದರೂ ಇವು ನಿಜವಾದ ಪರಿಸ್ಥಿತಿಯನ್ನು ಪ್ರತಿಫಲಿಸುವುದಿಲ್ಲ. ಇದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಜನರು ಕಷ್ಟ ಅನುಭವಿಸುತ್ತಿದ್ದಾರೆ. ಕೋವಿಡ್–19 ರ ಸಮಯದಲ್ಲಿ (2020 ರ ಮಾರ್ಚ್ 16 ಮತ್ತು ಜುಲೈ 31 ರ ನಡುವೆ) ಭಾರತದಲ್ಲಿ ಸರ್ಕಾರಿ ಸಂಸ್ಥೆಗಳೇ 20,000 ಜನರನ್ನು ಅವರ ಮನೆಗಳಿಂದ ಹೊರಹಾಕಿವೆ (ಹೆಚ್.ಎಲ್.ಆರ್.ಎನ್. ವರದಿ).

‘ಎರಡು ಹೊತ್ತಿನ ಅನ್ನ, ತಲೆ ಮೇಲೊಂದು ಸೂರು’ ಬದುಕಲು ಬೇಕಾದ ಕನಿಷ್ಠ ಅಗತ್ಯಗಳು, ಆದರೆ ನಮ್ಮ ಭಾರತದಲ್ಲಿ ಸ್ವಾತಂತ್ರ್ಯದ 75 ನೇ ವರ್ಷಾಚರಣೆ ಮಾಡುತ್ತಿರುವಾಗ, ಭಾರತದ ಜನರು ಕನಿಷ್ಠ ಅಗತ್ಯಗಳಿಗಾಗಿ ಇನ್ನೂ ಹೋರಾಡುತ್ತಲೇ ಇದ್ದಾರೆ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತ 101 ನೇ ಸ್ಥಾನದಲ್ಲಿದೆ; ಭಾರತದ ಆಹಾರ ನಿಗಮವು ಅಗತ್ಯಕ್ಕಿಂತ ಎರಡು ಪಟ್ಟು ಆಹಾರ ಧಾನ್ಯಗಳನ್ನು ಶೇಖರಿಸಿಟ್ಟಿರುವಾಗ ಲಕ್ಷಾಂತರ ಜನರು ಹಸಿವಿನಿಂದ ತೊಳಲಾಡುತ್ತಿದ್ದಾರೆ; ಅದೇ ರೀತಿಯಲ್ಲಿ, ಜಮೀನಿನ ಲಭ್ಯತೆ ಇರುವಾಗಲೂ ಸ್ವಂತ ಮನೆ ಹೊಂದುವ ಲಕ್ಷಾಂತರ ಜನರ ಕನಸು ಇನ್ನೂ ನನಸಾಗುತ್ತಿಲ್ಲ. ಸಂಪನ್ಮೂಲಗಳ ಕೊರತೆಯಿಂದಲ್ಲ, ಕಾರ್ಪೋರೇಟ್–ಭೂಮಾಲಕರ ನಿಯಂತ್ರಣದಲ್ಲಿರುವ ಸರ್ಕಾರಗಳ ನೀತಿಗಳಿಂದಾಗಿ ಜನರ ಕನಸು ನುಚ್ಚುನೂರಾಗುತ್ತಿವೆ. ಭಾರತ ಶ್ರೀಮಂತವಾಗಿದೆ, ಆದರೆ ಭಾರತೀಯರು ಬಡವರು, ಏಕೆಂದರೆ ಸರ್ಕಾರಗಳು ಅನುಸರಿಸುತ್ತಿರುವ ಅಭಿವೃದ್ಧಿಯ ಮಾದರಿಗಳು ಬಹು ಸಂಖ್ಯಾಂತರನ್ನು ವಂಚಿಸುತ್ತಿವೆ, ಕೆಲವೇ ಕೆಲವರಿಗೆ ಅನುಕೂಲ ಮಾಡಿಕೊಡುತ್ತಿವೆ.



ಮೋದಿ ಸರಕಾರದ ಪಕ್ಷಪಾತಿ ಹಾಗೂ ಸಂಕುಚಿತ ಧೋರಣೆಯಿಂದಾಗಿ ಗಣ ರಾಜ್ಯೋತ್ಸವ ಪರೇಡ್‌ನಲ್ಲಿ ದಕ್ಷಿಣ ಭಾರತದ ರಾಜ್ಯಗಳು ಅಕ್ಷರಶಃ ಪ್ರಾತಿನಿಧ್ಯ ಕಳೆದುಕೊಂಡಿವೆ. ಪ್ರತಿಪಕ್ಷಗಳ ಆಡಳಿತವಿರುವ ಮೂರು ರಾಜ್ಯಗಳ ಸ್ತಬ್ಧ ಚಿತ್ರಗಳನ್ನು ದುರುದ್ದೇಶದಿಂದ ತಿರಸ್ಕರಿಸಿರುವುದು ಕೇಂದ್ರ ಸರ್ಕಾರದ ಆಳವಾದ ಒಕ್ಕೂಟ-ವಿರೋಧಿ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ಜನವರಿ 26 ಭಾರತೀಯ ಗಣರಾಜ್ಯ ಹಾಗೂ ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ನಿರೂಪಿಸಿರುವ ಸಂವಿಧಾನದ ಆಗಮನವನ್ನು ಸಂಕೇತಿಸುವ ದಿನ. ಸಂವಿಧಾನದ ಈ ಮೂಲ ಆಚಾರ ಸೂತ್ರವನ್ನೇ ಮೋದಿ ಸರಕಾರ ಉಲ್ಲಂಘಿಸುತ್ತಿದೆ.

* ಪ್ರಕಾಶ್ ಕಾರಟ್

ಒಕ್ಕೂಟತತ್ವ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಮೌಲ್ಯಗಳ ಬಗ್ಗೆ ತಾತ್ಸಾರ

2022ರ ಜನವರಿ 26 ರಂದು ದೇಶದ ರಾಜಧಾನಿ ದೆಹಲಿಯಲ್ಲಿ ನಡೆಯುವ ಗಣರಾಜ್ಯ ದಿನದ ಪರೇಡ್‌ನಲ್ಲಿ ಪ್ರಸ್ತುತಪಡಿಸಲು ಕೆಲವು ರಾಜ್ಯಗಳು ಪ್ರಸ್ತಾಪಿಸಿದ ಸ್ತಬ್ದ ಚಿತ್ರಗಳನ್ನು ಕೇಂದ್ರ ಸರ್ಕಾರ ತಿರಸ್ಕರಿಸಿರುವುದು ಬಿಜೆಪಿ ಆಡಳಿತಗಾರರ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

ಕೇರಳ, ಬಂಗಾಳ ಮತ್ತು ತಮಿಳುನಾಡಿನ ಟ್ಯಾಬ್ಲೋಗಳಿಗೆ ಅವಕಾಶ ನಿರಾಕರಿಸಿರುವುದು ಒಕ್ಕೂಟ ತತ್ವಕ್ಕೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಸಾಮಾಜಿಕ-ಸಾಂಸ್ಕೃತಿಕ ಪರಂಪರೆಗಳಿಗೆ ಮಾಡಿದ ತೀವ್ರ ಅವಮಾನವಾಗಿದೆ.

ಸ್ವಾತಂತ್ರ್ಯದ 75ನೇ ವರ್ಷಾಚರಣೆ ಈ ವರ್ಷದ ಗಣರಾಜ್ಯ ದಿನ ಪರೇಡ್‌ನ ವಿಷಯವಸ್ತು ಆಗಿದೆ. ಅದಕ್ಕೆ ಅನುಗುಣವಾಗಿ ಬಂಗಾಳ ಸರಕಾರ, ಸ್ವಾತಂತ್ರ್ಯ ಹೋರಾಟದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಅವರು ಸ್ಥಾಪಿಸಿದ್ದ ಆಝಾದ್ ಹಿಂದ್ ಸೇನೆ(ಇಂಡಿಯನ್ ನ್ಯಾಷನಲ್ ಆರ್ಮಿ-ಐಎನ್‌ಎ)ಯ ಪಾತ್ರವನ್ನು ಬಿಂಬಿಸುವ ಟ್ಯಾಬ್ಲೋವನ್ನು ಸಿದ್ಧಪಡಿಸಿತ್ತು. ಅದನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ತಮಿಳುನಾಡು ರಾಜ್ಯದ ಪ್ರಮುಖ ಸ್ವಾತಂತ್ರ್ಯ ಸೇನಾನಿಗಳಾದ ವಿ.ಒ. ಚಿದಂಬರಂ, ಸ್ವಾತಂತ್ರ್ಯ ಸಂಗ್ರಾಮದ ರಾಷ್ಟ್ರ ಕವಿ ಸುಬ್ರಮಣ್ಯ ಭಾರತಿ ಮತ್ತಿತರರಿಗೆ ಸಂಬಂಧಿಸಿದ ಸ್ತಬ್ಧಚಿತ್ರವನ್ನು ಪ್ರಸ್ತಾಪಿಸಿತ್ತು. ಅದಕ್ಕೂ ಕೇಂದ್ರದ ಅನುಮತಿ ಸಿಕ್ಕಿಲ್ಲ.


ಗಣರಾಜ್ಯೋತ್ಸವ ಪರೇಡ್‌ಗೆ ಶ್ರೀನಾರಾಯಣ ಗುರು ಅವರ ಸ್ತಬ್ಧಚಿತ್ರ ನಿರಾಕರಿಸಿದ ಕುರಿತು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಧಾನಿಗೆ ಬರೆದ ಪತ್ರದ ಸಾರಾಂಶ.

ಶ್ರೀ ನರೇಂದ್ರ ಮೋದಿಜೀ

ಮುಂಬರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕೇರಳದ ಸ್ತಬ್ಧಚಿತ್ರವನ್ನು ಸೇರಿಸದಿರುವ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ಇದು ನಮ್ಮ ಸ್ವಾತಂತ್ರ್ಯದ 75 ನೇ ವರ್ಷ, ಇದನ್ನು ಅಮೃತ ಮಹೋತ್ಸವ ಎಂದು ಆಚರಿಸಲಾಗುತ್ತಿದೆ. ಕೇರಳದ ಪ್ರಸ್ತಾವಿತ ಸ್ತಬ್ಧಚಿತ್ರವು ಅತ್ಯಂತ ಬಲವಾದ ಸಾಮಾಜಿಕ ಸಂದೇಶವನ್ನು ಹೊಂದಿರುವುದರಿಂದ ಮತ್ತು ಸಮಕಾಲೀನ ಸಾಮಾಜಿಕ ಸನ್ನಿವೇಶದಲ್ಲಿ ಹೆಚ್ಚಿನ ಪ್ರಸ್ತುತತೆಯನ್ನು ಹೊಂದಿರುವ ಕಾರಣ ನಾನು ಮೇಲಿನ ಸಂಗತಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ಕಳೆದ ಶತಮಾನದಲ್ಲಿ ಕೇರಳದ ನವೋದಯ ಚಳವಳಿಯನ್ನು ಮುನ್ನಡೆಸಿದ ಮಹಾನ್ ದಾರ್ಶನಿಕ ಮತ್ತು ಸಮಾಜ ಸುಧಾರಕ ಶ್ರೀ ನಾರಾಯಣ ಗುರುಗಳ ಚಿತ್ರಣವನ್ನು ನಮ್ಮ ಸ್ತಬ್ಧಚಿತ್ರ ಒಳಗೊಂಡಿದೆ. ಅವರ ಆಲೋಚನೆಗಳು ಮತ್ತು ಕಾರ್ಯಗಳು ರಾಷ್ಟ್ರೀಯ ಮಾತ್ರವಲ್ಲದೆ ಪ್ರಪಂಚದಾದ್ಯಂತ ಗಮನ ಸೆಳೆದಿವೆ. ಶ್ರೀನಾರಾಯಣ ಗುರುಗಳು ಮಾನವರ ನಡುವೆ ವಿಭಜನೆಗೆ ಕಾರಣವಾದ ಅಸ್ಪೃಶ್ಯ ಆಚರಣೆಗಳ ವಿರುದ್ಧ ಹೋರಾಡಿದರು ಮತ್ತು ಅವರು ಸಾರ್ವತ್ರಿಕ ಸಹೋದರತ್ವ, ಸ್ವಾತಂತ್ರ್ಯ ಮತ್ತು ಎಲ್ಲರಿಗೂ ಶಿಕ್ಷಣದ ಹಕ್ಕಿನ ತತ್ವಶಾಸ್ತ್ರವನ್ನು ಪ್ರಚಾರ ಮಾಡಿದರು.

ದೇಶದ ಯುವ ಪೀಳಿಗೆಗೆ ಸ್ತಬ್ಧಚಿತ್ರ ಪಸರಿಸಬಹುದಾದ ಸಂದೇಶವು ಬಹಳ ಮೌಲ್ಯಯುತವಾಗಿದೆ. ಹಾಗಾಗಿ ಮುಂಬರುವ ಗಣರಾಜ್ಯೋತ್ಸವ ಪರೇಡ್ ನಲ್ಲಿ ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ಸೇರಿಸಲು ಗೌರವಾನ್ವಿತ ಪ್ರಧಾನಿಯವರ ತುರ್ತು ಮಧ್ಯಸ್ಥಿಕೆಯನ್ನು ಕೋರುತ್ತೇನೆ. ಕೇರಳದ ಸ್ತಬ್ಧಚಿತ್ರಗಳು ಹಿಂದೆಯೂ ಒಂದಕ್ಕಿಂತ ಹೆಚ್ಚು ಬಾರಿ ಪ್ರಶಂಸೆಗೆ ಪಾತ್ರವಾಗಿವೆ ಎಂಬುದನ್ನು ವಿನಮ್ರವಾಗಿ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ತಮ್ಮ ವಿಶ್ವಾಸಿ
ಪಿಣರಾಯಿ ವಿಜಯನ್

ಕೇರಳ ಸರಕಾರ ಸಲ್ಲಿಸಿದ ಪ್ರಸ್ತಾವನೆಯ ಪ್ರತಿಕೃತಿ

ಕೇರಳದ ಕೊಲ್ಲಂ ಜಿಲ್ಲೆಯಲ್ಲಿ ಬೃಹದಾಕಾರದ ವಿಶ್ವವಿಖ್ಯಾತ ಜಟಾಯುವಿನ ಶಿಲ್ಪವನ್ನು ಹೊಂದಿರುವ ಶಿಲೋದ್ಯಾನ ಹಾಗೂ ಕೇರಳದ ಇನ್ನೊಂದು ವಿಶಿಷ್ಟತೆಯಾದ ಹಾವಿನಾಕಾರದ ದೋಣಿ ಹಾಗೂ ನಾರಾಯಣ ಗುರುರವರ ಪ್ರತಿಮೆಯನ್ನು ಹೊಂದಿರುವ ಇದರ ಥೀಮ್ ಮಹಿಳಾ ಸುರಕ್ಷತೆ



ಯಾರು ಹೆಚ್ಚು ಪ್ರಸ್ತುತ?

ಇನ್ನೂ ಆಘಾತದ ಸಂಗತಿಯೆಂದರೆ, ಮಹಾನ್ ಜಾತಿವಾದ-ವಿರೋಧಿ ಹಾಗೂ ಪುನರುತ್ಥಾನದ ಮಹಾವ್ಯಕ್ತಿ ನಾರಾಯಣ ಗುರು ಅವರನ್ನು ಚಿತ್ರಿಸುವ ಕೇರಳದ ಟ್ಯಾಬ್ಲೊ ತಿರಸ್ಕರಿಸಿದ್ದು. ನಾರಾಯಣ ಗುರು ಬದಲು ಆದಿ ಶಂಕರಾಚಾರ್ಯರ ಪ್ರತಿಮೆ ಇರಲೆಂಬುದು ಕೇಂದ್ರದ ತಜ್ಞರ ಸಮಿತಿಯ ಅಭಿಪ್ರಾಯವಾಗಿದೆ ಎಂದು ವರದಿಯಾಗಿದೆ. ಆದರೆ ಕೇರಳ ಸರ್ಕಾರ ನಾರಾಯಣ ಗುರು ಚಿತ್ರಣಕ್ಕೇ ಪಟ್ಟು ಹಿಡಿದಾಗ ಅದನ್ನು ತಿರಸ್ಕರಿಸಲಾಗಿದೆ.

20ನೇ ಶತಮಾನದ ಆರಂಭದ ಸಮಾಜ ಸುಧಾರಕ ಹಾಗೂ ಪುನರುತ್ಥಾನ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೂ ಕೊಡುಗೆ ಕೊಟ್ಟ ನಾರಾಯಣ ಗುರುಗಿಂತ ಬ್ರಾಹ್ಮಣ್ಯವನ್ನು ಮರುಸ್ಥಾಪನೆ ಮಾಡಿದ 8ನೇ ಶತಮಾನದ ಧಾರ್ಮಿಕ ವ್ಯಕ್ತಿ ಹೇಗೆ ಹೆಚ್ಚು ಪ್ರಸ್ತುತರಾಗುತ್ತಾರೆ ಎಂಬುದನ್ನು ಆಳುವ ವ್ಯವಸ್ಥೆಯ ಹಿಂದುತ್ವವಾದಿ ಧೋರಣೆಯೇ ವಿವರಿಸಲು ಸಾಧ್ಯ. ಕೇರಳದ ಟ್ಯಾಬ್ಲೊ ಮೇಲೆ ಆದಿ ಶಂಕರಾಚಾರ್ಯರನ್ನು ಹೇರಿಕೆ ಮಾಡಲು ತಜ್ಞರ ಸಮಿತಿ ಮೊಂಡು ಹಠ ಹಿಡಿದಿದ್ದು ಶ್ರೀ ನಾರಾಯಣ ಗುರು ಅವರಿಗೆ ಮಾತ್ರವಲ್ಲ ಕೇರಳದ ಇಡೀ ಪ್ರಗತಿಪರ ಸಾಮಾಜಿಕ-ಸಾಂಸ್ಕೃತಿಕ ಪರಂಪರೆಗೇ ಎಸಗಿದ ಅವಮಾನವಾಗಿದೆ.

ಅಸಮರ್ಥನೀಯ ಸಮರ್ಥನೆ


ತಮ್ಮ ರಾಜ್ಯಗಳ ಟ್ಯಾಬ್ಲೊಗಳನ್ನು ತಿರಸ್ಕರಿಸಿದ್ದನ್ನು ಪ್ರತಿಭಟಿಸಿ ಬಂಗಾಳ ಮತ್ತು ತಮಿಳು ನಾಡು ರಾಜ್ಯಗಳ ಮುಖ್ಯಮಂತ್ರಿಗಳು ಬರೆದ ಪತ್ರಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಉತ್ತರ ಬರೆದು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಟ್ಯಾಬ್ಲೊ ಆಯ್ಕೆಗೆ ಒಂದು ಉತ್ತಮ ವ್ಯವಸ್ಥೆಯಿದೆ. ಈಗಿನ ಆಯ್ಕೆ ಸರಿಯಾಗಿದೆ ಎಂದು ಅಸಮರ್ಥನೀಯ ಸಮರ್ಥನೆ ನೀಡಿದ್ದಾರೆ. ತಜ್ಞರ ಸಮಿತಿಯಲ್ಲಿ ಕಲೆ, ಸಂಸ್ಕೃತಿ, ಸಂಗೀತ, ವಾಸ್ತುಶಿಲ್ಪ ಮತ್ತಿತರ ಕ್ಷೇತ್ರಗಳ ಪ್ರಮುಖರು ತಜ್ಞರು ಇರುತ್ತಾರೆ ಎಂದು ಸಿಂಗ್ ಹೇಳಿದ್ದಾರೆ. ಈ ತಜ್ಞರು ಯಾರು ಎಂದು ದೇಶಕ್ಕೆ ಗೊತ್ತಾಗಬೇಕು. ದೇಶದ 75ನೇ ಸ್ವಾತಂತ್ರ್ಯೋತ್ಸವ ವಿಷಯವಸ್ತುವಾಗಿರುವ ಗಣ ರಾಜ್ಯ ಪರೇಡ್‌ನಲ್ಲಿ ಆದಿ ಶಂಕರಾಚಾರ್ಯ ಹೆಚ್ಚು ಪ್ರಸ್ತುತರಾಗುತ್ತಾರೆ ಎಂದು ಪರಿಗಣಿಸಿದವರು ಯಾರು ಎನ್ನುವುದೂ ದೇಶಕ್ಕೆ ತಿಳಿಯಬೇಕು.

ಕೇಂದ್ರೀಯ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯುಡಿ) ಕೂಡ ನೇತಾಜಿ ಕುರಿತ ಸ್ತಬ್ಧ ಚಿತ್ರ ಸಿದ್ಧಪಡಿಸಿದೆ ಎಂದು ಬಂಗಾಳ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ರಕ್ಷಣಾ ಮಂತ್ರಿ ಉಲ್ಲೇಖಿಸಿದ್ದಾರೆ. ನೇತಾಜಿಯಂಥ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ನಾಯಕನಿಗೆ ಜನ್ಮ ನೀಡಿದ ಹೆಮ್ಮೆಯಿರುವ ಬಂಗಾಳ ರಾಜ್ಯಕ್ಕಿಂತ ಕೇಂದ್ರೀಯ ಸಚಿವಾಲಯದ ಇಲಾಖೆಯೊಂದಕ್ಕೆ ಆದ್ಯತೆ ನೀಡುವುದು ಎಷ್ಟು ಸರಿ?.


ಸಂಕುಚಿತ ಧೋರಣೆ

ಮೋದಿ ಸರಕಾರದ ಪಕ್ಷಪಾತಿ ಹಾಗೂ ಸಂಕುಚಿತ ಧೋರಣೆಯಿಂದಾಗಿ ಗಣ ರಾಜ್ಯೋತ್ಸವ ಪರೇಡ್‌ನಲ್ಲಿ ದಕ್ಷಿಣ ಭಾರತದ ರಾಜ್ಯಗಳು ಅಕ್ಷರಶಃ ಪ್ರಾತಿನಿಧ್ಯ ಕಳೆದುಕೊಂಡಿವೆ. ಪ್ರತಿಪಕ್ಷಗಳ ಆಡಳಿತವಿರುವ ಮೂರು ರಾಜ್ಯಗಳ ಸ್ತಬ್ಧ ಚಿತ್ರಗಳನ್ನು ದುರುದ್ದೇಶದಿಂದ ತಿರಸ್ಕರಿಸಿರುವುದು ಕೇಂದ್ರ ಸರ್ಕಾರದ ಆಳವಾದ ಒಕ್ಕೂಟ-ವಿರೋಧಿ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ಜನವರಿ 26 ಭಾರತೀಯ ಗಣರಾಜ್ಯ ಹಾಗೂ ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ನಿರೂಪಿಸಿರುವ ಸಂವಿಧಾನದ ಆಗಮನವನ್ನು ಸಂಕೇತಿಸುವ ದಿನ. ಸಂವಿಧಾನದ ಈ ಮೂಲ ಆಚಾರ ಸೂತ್ರವನ್ನೇ ಮೋದಿ ಸರಕಾರ ಉಲ್ಲಂಘಿಸುತ್ತಿದೆ.


ಅನು: ವಿಶ್ವ



20ನೇ ಶತಮಾನದ ಆರಂಭದ ಸಮಾಜ ಸುಧಾರಕ ಹಾಗೂ ಪುನರುತ್ಥಾನ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೂ ಕೊಡುಗೆ ಕೊಟ್ಟ ನಾರಾಯಣ ಗುರುರವರಿಗಿಂತ ಬ್ರಾಹ್ಮಣ್ಯವನ್ನು ಮರುಸ್ಥಾಪನೆ ಮಾಡಿದ 8ನೇ ಶತಮಾನದ ಧಾರ್ಮಿಕ ವ್ಯಕ್ತಿ ಹೇಗೆ ಹೆಚ್ಚು ಪ್ರಸ್ತುತರಾಗುತ್ತಾರೆ ಎಂಬುದನ್ನು ಆಳುವ ವ್ಯವಸ್ಥೆಯ ಹಿಂದುತ್ವವಾದಿ ಧೋರಣೆಯಿಂದಷ್ಟೇ ವಿವರಿಸಲು ಸಾಧ್ಯ.







ಗಂಗಾವತಿಯಲ್ಲಿ ಜನವರಿ 2ರಿಂದ 4 ರ ವರೆಗೆ ನಡೆದ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯ ಗಳಲ್ಲಿ 12 ನಿರ್ಣಯಗಳ ಪೂರ್ಣ ಪಾಟಗಳು ಕಳೆದ ಎರಡು ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಸಂಚಿಕೆಯಲ್ಲಿ ಇನ್ನೂ ಕೆಲವು ನಿರ್ಣಯಗಳು ಮುಂದಿನ ಪುಟಗಳಲ್ಲಿ ....

ಸಾರ್ವಜನಿಕ ಉದ್ದಿಮೆಗಳು ಮತ್ತು ಸಂಸ್ಥೆಗಳು ಉಳಿಯಬೇಕು

ಕೇಂದ್ರದ ಮೋದಿ ಸರ್ಕಾರದ ಸಾರ್ವಜನಿಕ ಉದ್ದಿಮೆಗಳನ್ನು ಮತ್ತು ಸಂಸ್ಥೆಗಳನ್ನು ಮಾರಾಟ ಮಾಡುವ ದೇಶ ವಿರೋಧಿ ಕ್ರಮಗಳನ್ನು ಮತ್ತು ಇದಕ್ಕೆ ಪೂರಕವಾಗಿ ನಡೆದುಕೊಳ್ಳುತ್ತಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮಗಳನ್ನೂ ಸಮ್ಮೇಳನವು ತೀವ್ರವಾಗಿ ವಿರೋಧಿಸಿದೆ,

ಸಾರ್ವಜನಿಕ ಉದ್ದಿಮೆಗಳು, ಸಾರ್ವಜನಿಕ ಸಂಪನ್ಮೂಲಗಳು, ಸಾರ್ವಜನಿಕ ಸೇವೆಗಳು, ಹೀಗೆ ಸಮಾಜಕ್ಕೆ ಸೇರಿದ, ಜನಸಮೂಹಗಳ ಉಪಯೋಗಕ್ಕೆ ಇರಬೇಕಾದ ಎಲ್ಲವನ್ನೂ ಖಾಸಗಿ ಬಂಡವಾಳದಾರರ ಲೂಟಿಗೆ ಒಪ್ಪಿಸಿಬಿಡುವ ನವಉದಾರೀಕರಣ ನೀತಿಗಳು ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಆಡಳಿತದಲ್ಲಿ ಅವ್ಯಾಹತವಾಗಿ ಹೆಚ್ಚಾಗಿದೆ. ಸ್ವಾತಂತ್ರ್ಯಾನಂತರದ ಭಾರತದ ಬೆಳವಣಿಗೆಯ ಪಥದಲ್ಲಿಯೇ ಇದರ ಅಂತರ್ಗತ ಬೀಜಗಳು ಹುದುಗಿದ್ದರೂ, 1991 ರಲ್ಲಿ ರಾವ್–ಸಿಂಗ್ ಜೋಡಿಯ ನೇತೃತ್ವದಲ್ಲಿ ಆರಂಭವಾದ LPG ನೀತಿಗಳು ನಿರಂತರವಾಗಿ ಹೆಚ್ಚಾಗುತ್ತಾ ಮೋದಿ ಸರ್ಕಾರದಲ್ಲಿ ಅದರ ಶಿಖರ ಬಿಂದುವನ್ನು ತಲುಪಿವೆ. ಸಾರ್ವಜನಿಕ ಉದ್ದಿಮೆಗಳನ್ನು ದೇಶೀ ಮತ್ತು ವಿದೇಶೀ ಖಾಸಗಿ ಬಂಡವಾಳಿಗರಿಗೆ ಒಪ್ಪಿಸುವ, ಸಾರ್ವಜನಕ ಸಂಪನ್ಮೂಲಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು ಖಾಸಗೀಕರಿಸುವ, ಶಿಕ್ಷಣ, ಆರೋಗ್ಯ, ಮುಂತಾದ ಸಾರ್ವಜನಿಕ ಸೇವೆಗಳ ಸರ್ಕಾರಿ ವೆಚ್ಚವನ್ನು ಪೂರ್ಣವಾಗಿ ಕಡಿತಗೊಳಿಸಿ ಖಾಸಗಿಯವರ ಕೃಪಾಕಟಾಕ್ಷಕ್ಕೆ ಜನರನ್ನು ನೂಕುವ ಕೆಲಸವನ್ನು ಪ್ರಸಕ್ತ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಮರೋಪಾದಿಯಲ್ಲಿ ಕೈಗೊಂಡಿವೆ.

ಹಿಂದೆ ವಾಜಪೇಯಿ ಸರ್ಕಾರದ ಸಂದರ್ಭದಲ್ಲಿ, ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂತೆಗೆಯಲೆಂದೇ ಒಬ್ಬ ಮಂತ್ರಿಯನ್ನು ನೇಮಕ ಮಾಡಲಾಗಿತ್ತು. ನಂತರ ಎಡಪಕ್ಷಗಳ ಬೆಂಬಲಿತ ಯುಪಿಎ 1 ರ ಸಂದರ್ಭದಲ್ಲಿ ಈ ಪ್ರಕ್ರಿಯೆಗೆ ಸ್ವಲ್ಪ ತಡೆ ಸಿಕ್ಕಿತ್ತು. ಅಪಾರ ಸಂಪತ್ತನ್ನು ಹೊಂದಿರುವ ಹಲವಾರು ನಷ್ಟ ಅಥವಾ ರೋಗಪೀಡಿತ ಸಾರ್ವಜನಿಕ ಉದ್ದಿಮೆಗಳನ್ನು ಸಂಪೂರ್ಣವಾಗಿ ಅತ್ಯಂತ ಕಡಿಮೆ ಬೆಲೆಗೆ ಮಾರುವ ಮಾತುಗಳನ್ನು ಸರ್ಕಾರಗಳು ಆಡುತ್ತಿದ್ದವು. ಅಗತ್ಯವಾದ ಬಂಡವಾಳ ಹೂಡಿಕೆ ಮಾಡಿ ಆಧುನೀಕರಣಗೊಳಿಸಿದ್ದರೆ ಬಹುತೇಕ ಉದ್ದಿಮೆಗಳು ಲಾಭದ ಲಯಕ್ಕೆ ಬರುತ್ತಿದ್ದವು. ಆದರೆ ಸರ್ಕಾರ ಅದನ್ನು ಮಾಡಲಿಲ್ಲ. ಇದರ ಜೊತೆಗೆ ಈಗ ವ್ಯೂಹಾತ್ಮಕ ಮತ್ತು ಮೂಲ ವಲಯಗಳಲ್ಲಿರುವ ಬಹುತೇಕ ಲಾಭದಾಯಕ ಸಾರ್ವಜನಕ ಉದ್ದಿಮೆಗಳನ್ನು ಖಾಸಗೀಕರಿಸಲು ಸರ್ಕಾರ ತೀರ್ಮಾನಿಸಿರುವುದು ಆತಂಕಕಾರಿ ಸಂಗತಿಯಾಗಿದೆ.

2018–19 ರಲ್ಲಿ ಪ್ರಮುಖ ಸಾರ್ವಜನಿಕ ಉದ್ದಿಮೆಗಳಾದ ಓಎನ್‌ಜಿಸಿ, ಕೋಲ್ ಇಂಡಿಯಾ ಲಿ., ಬಿಹೆಚ್‌ಇಎಲ್, ಮುಂತಾದವುಗಳಲ್ಲಿ ಬಂಡವಾಳ ಹಿಂತೆಗೆತ ಮಾಡಲಾಗಿದ್ದರೆ, ಹೆಚ್‌ಎಸ್‌ಸಿಸಿ (ಇಂಡಿಯಾ) ಲಿ., ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ನ್ಯಾಷನಲ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಲಿ., ಮುಂತಾದವುಗಳಲ್ಲಿ ವ್ಯೂಹಾತ್ಮಕ ಬಂಡವಾಳ ಹಿಂತೆಗೆತ ಮಾಡಲಾಗಿದೆ. ಅಪಾರ ಲಾಭ ಮಾಡುತ್ತಿರುವ ಸಾರ್ವಜನಿಕ ಉದ್ದಿಮೆಗಳ ಬಳಿಯಿದ್ದ ಮಿಗುತಾಯ ಮತ್ತು ಮೀಸಲು ನಿಧಿಗಳನ್ನು ಕೇಂದ್ರ ಸರ್ಕಾರ ವಶಪಡಿಸಿಕೊಂಡಿದೆ ಮತ್ತು ಈ ಮೂಲಕ ಅದರ ಮಾರುಕಟ್ಟೆ ಮೌಲ್ಯವನ್ನು ತಗ್ಗಿಸಿ ಅವುಗಳನ್ನು ಖಾಸಗಿಯವರು ಕಡಿಮೆ ಬೆಲೆಗೆ ಕೊಳ್ಳಲು ಅನುಕೂಲ ಮಾಡಲಾಗಿದೆ.

ರಕ್ಷಣೆ, ಉಕ್ಕು, ವಿದ್ಯುತ್, ವಿಮೆ, ಔಷಧಿ, ವಿಮಾನಯಾನ, ಇಂಜಿನಿಯರಿಂಗ್, ಬೃಹತ್ ಕಾಮಗಾರಿ, ಪೆಟ್ರೋಲಿಯಂ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ದೇಶದ ಸ್ವಾವಲಂಬನೆಯನ್ನು ಕಾಪಾಡುತ್ತಿರುವ ಸಾರ್ವಜನಕ ಉದ್ದಿಮೆಗಳನ್ನು ಖಾಸಗೀಕರಿಸಲು ಮೋದಿ ಸರ್ಕಾರವು ಪ್ರಕಟಿಸಿದೆ. ಸುಮಾರು 300 ಸಾರ್ವಜನಿಕ ಉದ್ದಿಮೆಗಳನ್ನು ಎರಡು ಡಜನ್ ಸಂಖ್ಯೆಗೆ ಇಳಿಸುವುದಾಗಿ, ಮತ್ತು ನಾಲ್ಕು ವ್ಯೂಹಾತ್ಮಕ ವಲಯಗಳಲ್ಲಿ 3 ಅಥವಾ 4 ಉದ್ದಿಮೆಗಳನ್ನು ಮಾತ್ರ ಉಳಿಸಿಕೊಳ್ಳುವ ಉದ್ದೇಶವನ್ನು ಮೋದಿ ಸರ್ಕಾರ ಪ್ರಕಟಿಸಿದೆ. ಬಿಇಎಂಎಲ್, ಭದ್ರಾವತಿಯ ವಿಐಎಸ್‌ಎಲ್, ಸೇಲಂ ಮತ್ತು ದುರ್ಗಾಪುರ್ ಸ್ಟೀಲ್, ಬಿಪಿಸಿಎಲ್, ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಮುಂತಾದ 26 ಸಾರ್ವಜನಿಕ ಉದ್ದಿಮೆಗಳ ಶೇ.100 ರಷ್ಟು ಷೇರುಗಳನ್ನು ಮಾರಾಟ ಮಾಡಲು ತೀರ್ಮಾನಿಸಿದೆ. ಏರ್ ಇಂಡಿಯಾವನ್ನು ಟಾಟಾ ಕಂಪನಿಗೆ ಚಿನ್ನದ ತಟ್ಟೆಯಲ್ಲಿಟ್ಟು ಕೊಡಲಾಗಿದೆ. ಎನ್‌ಟಿಪಿಸಿ, ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ, ಇಂಡಿಯನ್ ರೈಲ್ವೆ, ರೈಲ್‌ಟೆಲ್, ಟಿಸಿಐಎಲ್, ಹೆಚ್‌ಪಿಸಿಎಲ್, ಮುಂತಾದ

ಪುಟ 10 ನೋಡಿ

ಕೃಷಿ ಕೂಲಿಕಾರರ ಹಕ್ಕುಗಳ ರಕ್ಷಣೆಗೆ ಸಮಗ್ರ ಕಾಯ್ದೆ ಬೇಕು

ಕೃಷಿ ಕೂಲಿಕಾರರು ಸಮಗ್ರ ಕೇಂದ್ರಿಯ ಶಾಸನಕ್ಕಾಗಿ ನಡೆಸುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವ ನಿರ್ಣಯ:

ಕೃಷಿ ಕೂಲಿಕಾರರು ಕೃಷಿ ಉತ್ಪಾದನೆಯಲ್ಲಿ ಒಂದು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುತ್ತಾರೆ. ಅವರೇ ನಮ್ಮ ದೇಶದ ಬಡ ಜನತೆಯ ಬಹುದೊಡ್ಡ ವಿಭಾಗ ಅವರು ಆರ್ಥಿಕ ಶೋಷಣೆಗೂ ಸಾಮಾಜಿಕ ದಮನಕ್ಕೂ ಒಳಪಟ್ಟವರು, ಅವರು ನಮ್ಮ ದೇಶದ ದುಡಿಯುವ ಜನ ವಿಭಾಗಗಳ ಬಹು ದೊಡ್ಡ ವಿಭಾಗ, ಅವರಿಗೆ ತಮ್ಮ ಹಕ್ಕುಗಳನ್ನು ರಕ್ಷಣೆ ಮಾಡಲು ಯಾವ ಸಮಗ್ರ ಕಾನೂನಿನ ಬಲವಿಲ್ಲ, ಈ ನಮ್ಮ ದೇಶದಲ್ಲಿ ಗಿಡ ಮರಗಳ ರಕ್ಷಣೆಗೆ ಕಾನೂನುಗಳಿವೆ, ಪಶು ಪಕ್ಷಿಗಳ ರಕ್ಷಣೆಗೆ ಕಾನೂನುಗಳ, ಆದರೆ ಕೂಲಿಕಾರರ ರಕ್ಷಣೆಗೆ ಕಾನೂನುಗಳಿಲ್ಲ ದೇಶ ಸ್ವತಂತ್ರವಾಗಿ 75 ವರ್ಷಗಳು ಕಳೆದರೂ ಕೃಷಿ ಕೂಲಿಕಾರರ ವೇತನ, ಕೆಲಸದ ಪರಿಸ್ಥಿತಿ ಮತ್ತು ಸಾಮಾಜಿಕ ಭದ್ರತೆಯನ್ನ ಒಳಗೊಳ್ಳುವ ಸಮಗ್ರ ಕಾನೂನ್ನೊಂದನ್ನು ಅಂಗೀಕರಿಸುವ ಆಳುವ ಸರ್ಕಾರಗಳು ವಿಫಲವಾಗಿವೆ.

ಕೇಂದ್ರದಲ್ಲಿ ಇದುವರೆಗೆ ಆಡಳಿತ ನಡೆಸಿದ ಯಾವುದೇ ಸರ್ಕಾರ ಇಂತಹ ಒಂದು ಕಾನೂನನ್ನು ಅಂಗೀಕರಿಸುವಲ್ಲಿ ವಿಫಲವಾಗಿದೆ. ಕಳೆದ ಮೂರುವರೆ ದಶಕಗಳಿಂದ ಅಂತಹ ಮಸೂದೆಯೊಂದು ಅಂಗೀಕಾರಕ್ಕಾಗಿ ಸರ್ಕಾರದ ಮುಂದೆ ಕಾಯುತ್ತಿದೆ. ಇದು ಆಳುವ ಸರ್ಕಾರಗಳ ವರ್ಗ ಸ್ವರೂಪವನ್ನು ತೋರಿಸುತ್ತದೆ.

ಕೇವಲ ತ್ರಿಪುರ ಮತ್ತು ಕೇರಳ ರಾಜ್ಯಗಳಲ್ಲಿ ಮಾತ್ರ ಕೃಷಿ ಕೂಲಿಕಾರ್ಮಿಕರಿಗಾಗಿ ಸಮಗ್ರವಾದ ಕಲ್ಯಾಣ ಕಾನೂನುಗಳನ್ನು ರಚಿಸಲಾಗಿದೆ. ಕೇರಳದಲ್ಲಿರುವ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರ ಹಾಗೂ ತ್ರಿಪುರದಲ್ಲಿ ಹಿಂದೆ ಎಡ ರಂಗದ ಸರ್ಕಾರ ಆಡಳಿತವನ್ನು ವಹಿಸಿಕೊಂಡದ್ದು ಇದಕ್ಕೆ ಕಾರಣವಾಗಿತ್ತು, ಕೃಷಿ ಕೂಲಿಕಾರರ ಬಲಿಷ್ಟ ಚಳುವಳಿಯು ಈ ಎರಡು ರಾಜ್ಯಗಳಲ್ಲಿ ಕೃಷಿ ಕೂಲಿಕಾರರ ಸಮಗ್ರ ಕಾನೂನನ್ನು ರಚಿಸಲು ಕಾರಣವಾಗಿದೆ. ತಮಿಳುನಾಡಿನಲ್ಲಿಯೂ ಸಹ ಇಂತಹ ಕಾನೂನೊಂದು ಅಸ್ತಿತ್ವದಲ್ಲಿತ್ತು, ಆದರೆ ನಂತರ ಕೃಷಿ ಕೂಲಿಕಾರರ ಕಾಯ್ದೆಯನ್ನು ರದ್ದುಮಾಡಿ ಕೃಷಿ ಕೂಲಿಕಾರರ ಕಲ್ಯಾಣ ಯೋಜನೆಯನ್ನು ರೂಪಿಸಲಾಯಿತು.

ಪ್ರಸಕ್ತ ಕಾಲಘಟ್ಟದಲ್ಲಿ ಕೃಷಿ ರಂಗದಲ್ಲಿ ಬಿಕ್ಕಟ್ಟು ಆಳವಾಗುತ್ತಿದ್ದು, ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಾಗುತ್ತಿರುವಾಗ ಮತ್ತು ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮವಾಗಿ ಕೃಷಿ ರಂಗದಲ್ಲಿ ಕೃಷಿ ಕೂಲಿಕಾರರಿಗೆ ಸಿಗುತ್ತಿರುವ ಕೆಲಸ ಕಡಿಮೆಯಾಗುತ್ತಿರುವಾಗ ಕಲ್ಯಾಣ ರಾಜ್ಯದ ಪರಿಕಲ್ಪನೆ ಕ್ಷೀಣಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಕೂಲಿಕಾರರಿಗೆ ಒಂದು ಸಮಗ್ರವಾದ ಕೇಂದ್ರೀಯ ಶಾಸನ ಅತಿ ಅಗತ್ಯವಾಗಿದೆ, ಕೇಂದ್ರ ಸರ್ಕಾರವು ಕಾರ್ಮಿಕ ಕಾನೂನುಗಳನ್ನು ಬಲಹೀನಗೊಳಿಸಿ ಕಾರ್ಮಿಕರ ಕಾಯ್ದೆಗಳ ಸಂಹಿತೆಯನ್ನು ರೂಪಿಸಲು ಹೊರಟಿರುವಾಗ ಕೃಷಿ ಕೂಲಿಕಾರರು ಇತರ ಸಮಾನ ಮನಸ್ಕರ ಸಂಘಟನೆಗಳೊಂದಿಗೆ ಸೇರಿಕೊಂಡು ಜಂಟಿಯಾಗಿ ಹಾಗೂ ಸ್ವತಂತ್ರವಾಗಿ ಕೃಷಿ ಕೂಲಿ ಕಾರ್ಮಿಕರ ಸಮಗ್ರ ಕೇಂದ್ರಿಯ ಶಾಸನಕ್ಕಾಗಿ ಒತ್ತಾಯಿಸುವುದು ಅತ್ಯಗತ್ಯವಾಗಿದೆ.

ನಿರುದ್ಯೋಗದ ಸಮಸ್ಯೆ ಬಗೆಹರಿಸಬೇಕು, ಉದ್ಯೋಗದ ಹಕ್ಕುಗಳನ್ನು ಖಾತರಿ ಪಡಿಸಬೇಕು

ಕೇಂದ್ರ, ರಾಜ್ಯ ಸರಕಾರಗಳು ನಿರುದ್ಯೋಗ ಸಮಸ್ಯೆ ಬಗೆಹರಿಸಲು, ಉದ್ಯೋಗ ಸೃಷ್ಟಿಸುವ ನೀತಿಗಳನ್ನು ಜಾರಿಗೊಳಿಸಲು ಮುಂದಾಗಬೇಕು ಎಂದು ಆಗ್ರಹಿಸುವ ಮತ್ತು ಹಾಗೂ ನಿರುದ್ಯೋಗದ ಸಮಸ್ಯೆಗೆ ಎದುರಾಗಿ ವಿದ್ಯಾರ್ಥಿ, ಯುವಜನರನ್ನು ಸಂಘಟಿಸಿ ಪ್ರಬಲ ಹೋರಾಟ ರೂಪಿಸಲು ಎಲ್ಲಾ ಘಟಕಗಳಿಗೆ ಕರೆ ನೀಡಿರುವ ನಿರ್ಣಯ:

ನಿರುದ್ಯೋಗದ ಸಮಸ್ಯೆ ಸ್ವತಂತ್ರ ಭಾರತದ ಇತಿಹಾಸದಲ್ಲೇ ಗರಿಷ್ಟ ಮಟ್ಟ ತಲುಪುತ್ತಿದೆ. ನವ ಉದಾರವಾದ ನೀತಿಗಳು ವೇಗ ಪಡೆಯುತ್ತಿದ್ದಂತೆ ನಿರುದ್ಯೋಗದ ದರವೂ ಹೊಸ ಎತ್ತರಕ್ಕೆ ಏರುತ್ತಿದೆ. 'ಪ್ರತಿ ಕುಟುಂಬದಲ್ಲೂ ಕನಿಷ್ಟ ಒಬ್ಬ ನಿರುದ್ಯೋಗಿ ಇದ್ದಾನೆ' ಎಂಬಷ್ಟು ನಿರುದ್ಯೋಗ ಇಂದು ಮನೆ ಮನೆ ಸಮಸ್ಯೆಯೆಯಾಗಿ ವ್ಯಾಪಕತೆ ಪಡೆದಿದೆ.

ಸ್ವತಂತ್ರ ಭಾರತದಲ್ಲಿ ಕೈಗಾರಿಕೆ, ಉದ್ಯಮಗಳ ಸ್ಥಾಪನೆಯ ಸಂದರ್ಭ ಉದ್ಯೋಗ ಸೃಷ್ಟಿಯೂ ಅದರ ಪ್ರಧಾನ ಉದ್ದೇಶಗಳಲ್ಲಿ ಒಂದಾಗಿತ್ತು. ಅದರಲ್ಲಿಯೂ ಸಾರ್ವಜನಿಕ ರಂಗದ ಉದ್ಯಮಗಳು ಉದ್ಯೋಗ ಸೃಷ್ಟಿಯನ್ನು ಆದ್ಯತೆಯಾಗಿ ಹೊಂದಿದ್ದವು. ಆದರೆ ಮುಕ್ತ ಮಾರುಕಟ್ಟೆ, ನವ ಉದಾರವಾದದ ನೀತಿಗಳು ಜಾರಿಗೊಂಡ ಮೇಲೆ ಬಂಡವಾಳ ಹೂಡಿಕೆಯ ಪ್ರಧಾನ ಉದ್ದೇಶ ಲಾಭ ಮಾತ್ರ ಎಂಬ ಮನೋಭಾವ ಖಾಸಗಿ, ಸಾರ್ವಜನಿಕ ರಂಗ ಎರಡರಲ್ಲೂ ಎದ್ದು ಕಾಣುತ್ತಿದೆ. ಉದ್ಯೋಗಿಗಳ ಕಡಿತ, ಗುತ್ತಿಗೆ ಹೊರಗುತ್ತಿಗೆ ಪದ್ದತಿಗಳು ಉದ್ಯೋಗವಕಾಶಗಳನ್ನು ಸೀಮಿತಗೊಳಿಸಿದವು. ಬಳಸು, ಬಿಸಾಕು ಕಣ್ಣೋಟಗಳು, ಭದ್ರತೆ ಇಲ್ಲದ ಅರೆ ವೇತನದ, ಗೌರವ ಧನದ ಉದ್ಯೋಗಗಳು ಬಹುತೇಕರನ್ನು ಜೀವನ ನಿರ್ವಹಣೆ ನಡೆಸಲಾಗದ ಆದಾಯದ ಅರೆ ಉದ್ಯೋಗಿಗಳನ್ನಾಗಿಸಿದೆ. ಸಾರ್ವಜನಿಕ ರಂಗದ ಉದ್ಯಮಗಳ ಖಾಸಗೀಕರಣ ಉದ್ಯೋಗ ನಷ್ಟಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದೆ.

ಬ್ಯಾಂಕ್‌ಗಳು, ರೈಲ್ವೆ ಸೇರಿದಂತೆ ಸರಕಾರದ ಬಹುತೇಕ ಇಲಾಖೆಗಳಲ್ಲಿ ಹೆಚ್ಚಿನ ಹುದ್ದೆಗಳು ಭರ್ತಿಯಾಗದೆ ಖಾಲಿ ಬಿದ್ದಿವೆ. ಕರ್ನಾಟಕ ರಾಜ್ಯ ಸರಕಾರದ ಇಲಾಖೆಗಳಲ್ಲೇ ಸರಿಸುಮಾರು ಎರಡು ಲಕ್ಷ ಉದ್ಯೋಗಗಳು ಭರ್ತಿಯಾಗದೆ ಖಾಲಿ ಬಿದ್ದಿರುವುದು ಆತಂಕಕಾರಿ ವಿಷಯ. ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿದರೆ ಸರಕಾರದ ಖಜಾನೆಗೆ ದೊಡ್ಡ ಹೊರೆ ಬೀಳಲಿದೆ ಎಂದು ರಾಜ್ಯದ ಕಂದಾಯ ಸಚಿವರು ಇತ್ತೀಚೆಗೆ ಹೇಳಿಕೆ ನೀಡಿರುವುದು ಸರಕಾರಗಳನ್ನು ನಡೆಸುವವರು ನಿರುದ್ಯೋಗ ಸಮಸ್ಯೆಯ ಕುರಿತು ಹೊಂದಿರುವ ದೃಷ್ಟಿಕೋನವನ್ನು ಜಾಹೀರುಗೊಳಿಸುತ್ತದೆ. ಏಳು ವರ್ಷಗಳ ಹಿಂದೆ ಅಧಿಕಾರಕ್ಕೇರುವಾಗ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಯ ಭರವಸೆಯನ್ನು ಯುವಜನರಿಗೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿಯವರು ಉದ್ಯೋಗ ಸೃಷ್ಟಿಯ ಕುರಿತು ಯಾವ ಪ್ರಯತ್ನವನ್ನೂ ಮಾಡಿಲ್ಲ. ಬದಲಿಗೆ, ಕಾರ್ಪೊರೇಟ್ ಬಂಡವಾಳವಾದದ ಪರವಾದ ಬಿಜೆಪಿ ಸರಕಾರದ ನೀತಿಗಳು ಕೋಟಿಗಳ ಲೆಕ್ಕದಲ್ಲಿ ಉದ್ಯೋಗ

ಪುಟ 11 ನೋಡಿ

ಬಂಜರು, ಬಗರ್ ಹುಕುಂ, ಅರಣ್ಯ ಭೂಮಿಯಲ್ಲಿನ ರೈತ ಭೂಮಿ ಹಕ್ಕನ್ನು ಮಾನ್ಯ ಮಾಡಬೇಕು

ವಿವಿಧ ಪ್ರಶ್ನೆಗಳ ಆಧಾರದಲ್ಲಿ ಬಂಜರು, ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಪ್ರಶ್ನೆಯನ್ನು ಬಗೆಹರಿಸಲು ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸಮ್ಮೇಳನ ಒತ್ತಾಯಿಸಿದೆ.


ತಲತಲಾಂತರಗಳಿಂದ ಬುಡಕಟ್ಟು ಮತ್ತು ಬುಡಕಟ್ಟೇತರ ರೈತರು ತಮ್ಮ ಜೀವನಕ್ಕಾಗಿ ಬಂಜರು ಭೂಮಿಯಲ್ಲಿ, ಕಂದಾಯ ಭೂಮಿ ಬಗರ್ ಹುಕುಂ ಸಾಗುವಳಿ ಮತ್ತು ಅರಣ್ಯ ಭೂಮಿಯಲ್ಲಿ ವಾಸ ಮತ್ತು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಸ್ವಾತಂತ್ರ್ಯ ನಂತರ ಬಂದಂತ ಹಲವಾರು ಸರಕಾರಗಳು ಹಕ್ಕುಪತ್ರ ಕೊಡುವುದಾಗಿ ಆಶ್ವಾಸನೆ ನೀಡುತ್ತಾ ಬಂದರು. ಕೆಲವು ಜಿಲ್ಲೆಗಳ ಶೇ. 10–20 ಜನರಿಗೆ ಮಂಜೂರಿ ನೀಡಿದರು. ಆದರೆ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಿಲ್ಲ.

ರಾಜ್ಯದಲ್ಲಿ ಸುಮಾರು 4 ಲಕ್ಷ 83 ಸಾವಿರ ಬಗರ್ ಹುಕುಂ ಅರ್ಜಿಗಳು ಬಾಕಿ ಉಳಿದಿವೆ. ಕಂದಾಯ ಭೂಮಿಯ ಕೆಲವು ಭಾಗವನ್ನು 2010 ರಲ್ಲಿ ಸರಕಾರ ಅರಣ್ಯ ಇಂಡೀಕರಣ ಕಾನೂನಿನ ಮೂಲಕ ಅರಣ್ಯ ಇಲಾಖೆಗೆ ವರ್ಗಾಯಿಸಿದ ಪರಿಣಾಮ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡುವಲ್ಲಿ ತೊಡಕಾಗಿದೆ. ಇನ್ನೊಂದು ಕಡೆ ಸರಕಾರ ಬಗರ್ ಹುಕುಂ ಅಕ್ರಮ–ಸಕ್ರಮ ಸಮಿತಿಗಳನ್ನು ರಾಜ್ಯದ ಎಲ್ಲ ತಾಲೂಕುಗಳಲ್ಲಿ ರಚಿಸಿಲ್ಲ. ರಚಿಸಿದಲ್ಲಿ ಸಭೆ ಸೇರಿ ಅರ್ಜಿ ವಿಲೇವಾರಿ ಕೆಲಸ ನಡೆಯುತ್ತಿಲ್ಲ. ನಮೂನೆ 50, 53 ರಲ್ಲಿ ಅರ್ಜಿ ಹಾಕಿಕೊಂಡರು. ನಂತರ ನಮೂನೆ 57 ರಲ್ಲಿ ಅರ್ಜಿ ಹಾಕಿದರು ಹಾಗೆಯೇ ಬಾಕಿ ಉಳಿದಿವೆ.

94 ಸಿ ಮತ್ತು 94 ಸಿಸಿ ಯಡಿಯಲ್ಲು ಅರ್ಜಿ ಹಾಕಿದವು ವಿಲೇವಾರಿ ಆಗಿಲ್ಲ.

ಅರಣ್ಯ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು 1980 ರ ಅರಣ್ಯ ಕಾಯ್ದೆ ಅಡ್ಡಿ ಆಗುತ್ತಿದೆಯೆಂದು 2005 ರಲ್ಲಿ ಯುಪಿಎ ಸರಕಾರ ಇದ್ದಾಗ ಎಡ ಪಕ್ಷಗಳ ಒತ್ತಾಯದ ಮೇರೆಗೆ ಬುಡಕಟ್ಟು ಮತ್ತು ಇತರೆ ಅರಣ್ಯವಾಸಿಗಳಿಗೆ ಅರಣ್ಯ ಜಮೀನಿನ ಹಕ್ಕು ನೀಡಲು ಒಂದು ಕಾನೂನು ಬಂದಿತು. ಆ ಕಾನೂನು ಅಡಿ ಅರ್ಜಿ ಹಾಕಿಕೊಂಡು 13 ವರ್ಷಗಳಿಂದ ಬಡ ರೈತರು ಕಾಯುತ್ತಿದ್ದಾರೆ. ಬುಡಕಟ್ಟು ಇಲಾಖೆಗೆ ಉಸ್ತುವಾರಿ ವಹಿಸಲಾಗಿದ್ದು ಅರ್ಜಿಗಳು ಹಾಗೆಯೇ ಬಾಕಿ ಇವೆ. ಬುಡಕಟ್ಟು ಅರ್ಜಿಗಳನ್ನು ಕೆಲವು ಜಿಲ್ಲೆಗಳಲ್ಲಿ ಮಾನ್ಯ ಮಾಡಿ ಹಕ್ಕು ಪತ್ರ ನೀಡಿದ್ದಾರೆ. ಅದು ಕೆಲವು ಬಾಕಿ ಇವೆ. ಇತರೆ ಅರಣ್ಯ ವಾಸಿಗಳ ಅರ್ಜಿಗಳು ಇತ್ಯರ್ಥ ಆಗಿಲ್ಲ. 3 ತಲೆಮಾರು ಅಥವಾ 75 ವರ್ಷದ ದಾಖಲೆಬೇಕು ಎನ್ನುವದು ಪ್ರಮುಖ ಅಡ್ಡಿಯಾಗಿದೆ. ವಿಭಾಗ ಮಟ್ಟದಲ್ಲಿ ತಿರಸ್ಕೃತವಾಗಿ ಜಿಲ್ಲಾ ಮಟ್ಟದ ಸಮಿತಿಗೆ ಮೇಲ್ಮನವಿಯನ್ನು ಹಲವಾರು ಜಿಲ್ಲೆಗಳಲ್ಲಿ ಹಾಕಲಾಗಿದೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಅರ್ಜಿ ತೆಗೆದುಕೊಳ್ಳಲು ಕೆಲಸ ನಡೆದೆ ಇಲ್ಲ. ಕೆಲವು ಕಡೆ ಗುಪ್ತವಾಗಿ ಇಟ್ಟು ಅರ್ಜಿ ತೆಗೆದುಕೊಳ್ಳುವ ಪ್ರಕ್ರಿಯೆ ನಡೆದಿಲ್ಲ. ರಾಜ್ಯದಲ್ಲಿ 2 ಲಕ್ಷಕ್ಕೂ ಮೇಲ್ಪಟ್ಟು ಅರಣ್ಯವಾಸಿಗಳ ಅರ್ಜಿಗಳನ್ನು ಸರಕಾರ ಗಂಭೀರವಾಗಿ ತೆಗೆದುಕೊಂಡಿಲ್ಲ. ಹಲವಾರು ಹಂತದ ಹೋರಾಟಗಳು ನಡೆದರೂ ಇದಕ್ಕೊಂದು ಪರಿಹಾರ ಕಂಡುಕೊಳ್ಳುವಲ್ಲಿ ಸರಕಾರಗಳು ವಿಫಲವಾಗಿವೆ. ಅರಣ್ಯ ಇಲಾಖೆಯವರು ನಿರಂತರವಾಗಿ ಬಡ ಜನರಿಗೆ ಕಿರುಕುಳ ನೀಡುತ್ತಿದ್ದಾರೆ. ಈ ಮಧ್ಯ ಉತ್ತರ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಅಭಯಾರಣ್ಯಗಳು ಘೋಷಣೆಯಾಗಿರುವುದರಿಂದ ಅಲ್ಲಿ ಅರಣ್ಯ ಅತಿಕ್ರಮಣ ತೆರವಿಗೆ ಸೂಚನೆ ನೀಡಲಾಗುತ್ತಿದೆ.

ಈ ಎಲ್ಲ ಪ್ರಶ್ನೆಗಳ ಆಧಾರದಲ್ಲಿ ಬಂಜರು, ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಪ್ರಶ್ನೆಯನ್ನು ಬಗೆಹರಿಸಲು ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.



ಅಧಿಸೂಚಿತ ಮುಕ್ತ ದತ್ತಾಂಶ ನೀತಿಯನ್ನು ಹಿಂಪಡೆಯಬೇಕು

ಕರ್ನಾಟಕ ಸರ್ಕಾರವು ಮುಕ್ತ ದತ್ತಾಂಶ ನೀತಿಯನ್ನು ಹಿಂಪಡೆದುಕೊಳ್ಳಬೇಕು ಹಾಗೂ ಇನ್ನೂ ಚರ್ಚೆಯಲ್ಲಿರುವ ಮತ್ತು ವಿಚಾರ–ವಿಮರ್ಶೆ ನಡೆಯುತ್ತಿರುವ ಖಾಸಗಿತ್ವ ಮತ್ತು ದತ್ತಾಂಶ ಆಳ್ವಿಕೆಯ ಕಾಯ್ದೆಗಳಿಗೆ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳು ಬದ್ಧರಾಗಿರಬೇಕೆಂದು ಗ್ರಹಿಸುವ ನೀತಿಯನ್ನು ತರಬೇಕು ಎಂದು ಸಮ್ಮೇಳನ ಆಗ್ರಹಿಸಿದೆ.

ಅಕ್ಟೋಬರ್ 19, 2019 ರಂದು ಕರ್ನಾಟಕ ಸರ್ಕಾರವು 'ಮುಕ್ತದತ್ತಾಂಶ ನೀತಿ' (ಓಪನ್ ಡೇಟಾ ಪಾಲಿಸಿ) ಕುರಿತು ಅಧಿಸೂಚನೆ ನೀಡಿದೆ. ಅದು ಮೂರು ಸರ್ವವ್ಯಾಪಿ ಗುರಿಗಳನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ – ಸರ್ಕಾರಿ ಇಲಾಖೆ ಗಳಾದ್ಯಂತ ದತ್ತಾಂಶದ ನಿರ್ವಹಣೆ ಮತ್ತು ಪರಸ್ಪರ ಕಾರ್ಯಸಾಧ್ಯತೆ; ಸಂಶೋಧನೆ, ನಾವೀನ್ಯತೆ ಮತ್ತು ಪುರಾವೆ ಆಧಾರಿತ ಆಳ್ವಿಕೆಗಾಗಿ ಸರ್ಕಾರಿ ದತ್ತಾಂಶಗಳ ಮುಂಬಳಕೆಗೆ ಮುಕ್ತ ಅವಕಾಶವನ್ನು ಸಾಧ್ಯಗೊಳಿಸಲು ಪ್ರಕ್ರಿಯೆಗಳು ಮತ್ತು ಮಾನದಂಡಗಳನ್ನು ನಿರ್ವಚಿಸುವುದು; ಮತ್ತು ಅನಾಮಧೇಯಗೊಳಿಸಿದ ನಾಗರಿಕ ದತ್ತಾಂಶಗಳ ನಗದೀಕರಣವನ್ನು ಉತ್ತೇಜಿಸುವುದು. ಈ ನೀತಿಯು ಅನಾಮಧೇಯಗೊಳಿಸಿದ ನಾಗರಿಕ ದತ್ತಾಂಶ ಗಳನ್ನು ಹಂಚಿಕೊಳ್ಳಬೇಕು ಎನ್ನುತ್ತದೆ. ಇದರಲ್ಲಿ ಅನಾಮಧೇಯಗೊಳಿಸುವಿಕೆಯನ್ನು ತೆಗೆಯುವ ಅಪಾಯವಿರುವುದರಿಂದ ಈ ಮೂಲಕ ಅದು ಗಂಭೀರವಾದ ಖಾಸಗಿತ್ವದ ಬೆದರಿಕೆಗಳನ್ನು ಒಡ್ಡಬಹುದು. 'ಇ–ಆಳ್ವಿಕೆ ಕೇಂದ್ರ' ದಲ್ಲಿ ಕರ್ನಾಟಕ ಮುಕ್ತದತ್ತಾಂಶ ಅಂತರ್–ಸಂಪರ್ಕವಿಭಾಗ (ಇಂಟರ್ಫೇಸ್) ದ ಯೋಜನಾ ನಿರ್ದೇಶಕರೇ ವಿವರಿಸಿದ ಪರಿಭಾಷೆಯಲ್ಲಿ "ಕರ್ನಾಟಕದಲ್ಲಿ, ಶಾಲೆಗಳು ಮತ್ತು ಆಸ್ಪತ್ರೆಗಳು ಎಲ್ಲಿವೆ ಎಂದು ನಮಗೆ ತಿಳಿದಿದೆ," "ನಮಗೆ ಸಾಕ್ಷರತೆಯ ದರಗಳು, ರೋಗಗಳು ಮತ್ತು ರೋಗಿಗಳ ವಿವರಗಳು ಸಹ ತಿಳಿದಿದೆ. ಆದ್ದರಿಂದ, ಹೆಚ್ಚಿನ ಜನಸಂಖ್ಯೆಯುಳ್ಳ ಆದರೆ ಕಡಿಮೆ ಸಾಕ್ಷರತೆ ಹೊಂದಿರುವ ಪ್ರದೇಶದಲ್ಲಿ ಉತ್ತಮಶಾಲೆಗಳ ಕೊರತೆ ಕುರಿತಾದ ದತ್ತಾಂಶವನ್ನು ಶಾಲೆ ಅಥವಾ ಆಸ್ಪತ್ರೆಯನ್ನು ಎಲ್ಲಿ ತೆರೆಯಬಹುದು ಎಂಬುದನ್ನು ಗುರುತಿಸಲು ಖರೀದಿಸಬಹುದು." ಈರೀತಿಯಲ್ಲಿ ಈ ನೀತಿಯು ಬಂಡವಾಳಕ್ಕೆ ಎಲ್ಲಿ, ಯಾವುದರ ಮೇಲೆ ಹೂಡಿಕೆ ಮಾಡಬೇಕು ಎನ್ನುವುದಕ್ಕೆ ಸಾಕ್ಷ್ಯ ದತ್ತಾಂಶವನ್ನು ಒದಗಿಸುವ ಮೂಲಕ ನಗದೀಕರಣಕ್ಕೆ(ಹಣಗಳಿಕೆಗೆ) ಸಹಾಯ ಮಾಡುತ್ತದೆ.

ಈ ನೀತಿಯ ಅತ್ಯಂತ ತ್ರಾಸದಾಯಕವಾದ ಭಾಗವೆಂದರೆ, ಅದನ್ನು ಜಾರಿಗೆ ತರುವುದು. ಇದರಲ್ಲಿ ಅಳವಡಿಸಿಕೊಂಡಿರುವ "ದತ್ತಾಂಶ ಮಾಲೀಕತ್ವ" ಪರಿಕಲ್ಪನೆಯು ದತ್ತಾಂಶವನ್ನು ಸಂಸ್ಕರಿಸುವ ರಾಜ್ಯ ಸರ್ಕಾರದ ಇಲಾಖೆ ಗಳನ್ನು ಅವುಗಳ ಮಾಲೀಕರನ್ನಾಗಿ ಮಾಡುತ್ತದೆ. ಮುಕ್ತ ದತ್ತಾಂಶ ನೀತಿಯು ಕರ್ನಾಟಕ ಸರ್ಕಾರದ ಆಯಾ ಇಲಾಖೆಗಳ "ಮುಖ್ಯ ದತ್ತಾಂಶ ಅಧಿಕಾರಿ" ಗಳಿಗೆ ಈ ದತ್ತಾಂಶ ಭಾಗಗಳ ಮಾಲೀಕತ್ವವನ್ನು ನೀಡುತ್ತದೆ.

ಪ್ರಭುತ್ವ ಅಥವಾ ಸರ್ಕಾರವು ಅದರ ನಾಗರಿಕರ ದತ್ತಾಂಶಗಳ ಪಾಲಕರಾಗಿದ್ದಾರೆ, ಅವರು ಎಂದಿಗೂ ಅದರ ಮಾಲೀಕರಾಗಲು ಸಾಧ್ಯವಿಲ್ಲ. ತನ್ನ ನಾಗರಿಕರ ಖಾಸಗಿತ್ವ ಮತ್ತು ದತ್ತಾಂಶ ವನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯವಾಗಿದೆ ಮತ್ತು ಅದರ ಪಾಲಕರಾಗಿರಲು ಬದ್ಧವಾಗಿರಬೇಕು. ಇದು ಈಗಾಗಲೇ ಬಿಡುಗಡೆ ಮಾಡಲಾದ ವೈಯಕ್ತಿಕ ದತ್ತಾಂಶ ಮಸೂದೆ ಮತ್ತು ವೈಯಕ್ತಿಕ ವಲ್ಲದ ದತ್ತಾಂಶ ಆಡಳಿತದ 'ಚೌಕಟ್ಟಿನಲ್ಲಿ ಅಳವಡಿಸಲಾದ ತತ್ವಗಳಿಗೆ ವಿರುದ್ಧವಾಗಿದೆ. ಸಾರಿಗೆ ಇಲಾಖೆಯ ಆಯ್ದ ದತ್ತಾಂಶವನ್ನು ಈಗಾಗಲೇ ಓಲಾ ಮತ್ತು ಉಬರ್ ನಂತಹ ಕಂಪನಗಳಿಗೆ ಮಾರಾಟ ಮಾಡಲಾಗಿದೆ ಎಂಬುದನ್ನು ಗಮನಸುವುದು ಮುಖ್ಯವಾಗಿದೆ.

ಕರ್ನಾಟಕ ಸರ್ಕಾರವು ಮುಕ್ತ ದತ್ತಾಂಶ ನೀತಿಯನ್ನು ಹಿಂಪಡೆದುಕೊಳ್ಳಬೇಕು ಮತ್ತು ತನ್ನ ನಾಗರಿಕರ ದತ್ತಾಂಶ ವನ್ನು ಮಾರಾಟ ಮಾಡಿ ವಿವಿಧ ವ್ಯಾಪಾರ ಸಂಸ್ಥೆಗಳು ನಾಗರಿಕರನ್ನು ಲೂಟಿ ಮಾಡಲು ಅನುಕೂಲ ಮಾಡಿಕೊಡುವುದನ್ನು ತಡೆಯಬೇಕು. ಅದಕ್ಕೆ ಬದಲಾಗಿ, GDPR ಮಾದರಿಯಲ್ಲಿ ದತ್ತಾಂಶ ಖಾಸಗಿತ್ವ ಕಾಯ್ದೆಯನ್ನು ಅನುಷ್ಠಾನ ಗೊಳಿಸುವುದು ಮುಖ್ಯವಾಗಿದೆ ಮತ್ತು ಪ್ರಭುತ್ವವು ಸಂರಕ್ಷಕ ವ್ಯವಸ್ಥೆಯಂತೆ ಕಾರ್ಯನಿರ್ವಹಿಸಬೇಕು ಹಾಗೂ ಇನ್ನೂ ಚರ್ಚೆಯಲ್ಲಿರುವ ಮತ್ತು ವಿಚಾರ–ವಿಮರ್ಶೆ ನಡೆಯುತ್ತಿರುವ ಖಾಸಗಿತ್ವ ಮತ್ತು ದತ್ತಾಂಶ ಆಳ್ವಿಕೆಯ ಕಾಯ್ದೆಗಳಿಗೆ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳು ಬದ್ಧರಾಗಿರಬೇಕೆಂದು ಗ್ರಹಿಸುವ ನೀತಿ ಯನ್ನು ತರಬೇಕು.

ಸಾರ್ವಜನಿಕ ಉದ್ದಿಮೆಗಳು ಮತ್ತು ಸಂಸ್ಥೆಗಳು ಉಳಿಯಬೇಕು

ಪುಟ 9 ರಿಂದ

50 ಕ್ಕೂ ಹೆಚ್ಚಿನ ಲಾಭದಾಯಕ ಉದ್ದಿಮೆಗಳ ಆಸ್ತಿಗಳನ್ನು ಮಾರಲು ಗುರುತಿಸಲಾಗಿದೆ.

1956 ರಲ್ಲಿ ಕೇವಲ 5 ಕೋಟಿ ಮೂಲ ಬಂಡವಾಳದಲ್ಲಿ ಆರಂಭಿಸಲಾದ ಎಲ್‌ಐಸಿ ಇಂದು 38 ಲಕ್ಷ ಕೋಟಿಗೂ ಹೆಚ್ಚಿನ ಆಸ್ತಿಯನ್ನು ಹೊಂದಿದೆ. ತೆರಿಗೆ ರೂಪದಲ್ಲಿ ಪ್ರತಿ ವರ್ಷ 10 ಸಾವಿರ ಕೋಟಿ ರೂಗಳನ್ನು ಮತ್ತು ಡಿವಿಡೆಂಡ್ ರೂಪದಲ್ಲಿ ಸುಮಾರು 2.7 ಸಾವಿರ ಕೋಟಿ ರೂಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುವ ಎಲ್‌ಐಸಿ ಕಾಯ್ದೆಗೆ ತಿದ್ದುಪಡಿ ತಂದು ಶೇ.49 ರಷ್ಟು ಷೇರು ಮಾರಾಟಕ್ಕೆ ಮುಂದಾಗಿದೆ. ಬ್ಯಾಂಕ್ ವಿಲೀನೀಕರಣದ ಹಿಂದೆ ಬೃಹತ್ ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡುವ ಹುನ್ನಾರವಿದೆ. ಸ್ವತಂತ್ರ ಭಾರತದಲ್ಲೇ ಮೊದಲ ಬಾರಿಗೆ ಎನ್ನುವಂತೆ ದೇಶದ ಕೇಂದ್ರ ಬ್ಯಾಂಕ್‌ನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ.

ದೇಶದ ರಕ್ಷಣಾ ಪಡೆಗಳಿಗೆ ಬೇಕಾದ ಉತ್ಪನ್ನಗಳನ್ನು ತಯಾರಿಸುತ್ತಿದ್ದ 41 ಆರ್ಡಿನೆನ್ಸ್ ಫ್ಯಾಕ್ಟರಿಗಳ 273 ಉತ್ಪನ್ನಗಳ ಪೈಕಿ 182 ಉತ್ಪನ್ನಗಳನ್ನು ಖಾಸಗಿಯವರಿಗೆ ನೀಡಲಾಗಿದೆ. ಇದರಿಂದ 7 ಫ್ಯಾಕ್ಟರಿಗಳಲ್ಲಿ ಪೂರ್ಣವಾಗಿ ಕೆಲಸವೇ ಇರುವುದಿಲ್ಲ ಮತ್ತು 14 ಫ್ಯಾಕ್ಟರಿಗಳಲ್ಲಿ ಶೇ.50 ಕೆಲಸ ಇರುವುದಿಲ್ಲ. 50 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ದೇಶ ರಕ್ಷಣೆ ವಿಚಾರದಲ್ಲೂ ಕಾರ್ಪೊರೇಟ್‌ಗಳ ಹಿತವನ್ನೇ ಆದ್ಯತೆಯನ್ನಾಗಿ ಮೋದಿ ಸರ್ಕಾರ ಮಾಡಿಕೊಂಡಿದೆ. ರಫೇಲ್ ಯುದ್ಧ ವಿಮಾನಗಳ ವಿಚಾರದಲ್ಲೂ ರಿಲಯನ್ಸ್ ಕಂಪನಿಗೆ ಲಾಭ ಮಾಡಿಕೊಡಲು ನಮ್ಮ ಹೆಮ್ಮೆಯ ಹೆಚ್‌ಎಎಲ್‌ನ್ನು ಬಲಿ ಕೊಡಲಾಗಿದೆ.

741 ಕಿ.ಮೀ. ಉದ್ದದ ಕೊಂಕಣ್ ರೈಲ್ವೆಯನ್ನು ಕೇವಲ 750 ಕೋಟಿ ರೂಗಳಿಗೆ ಖಾಸಗಿಯವರಿಗೆ ಬಿಟ್ಟುಕೊಡಲು ಮೋದಿ ಸರ್ಕಾರ ತೀರ್ಮಾನಿಸಿದೆ. ಇದರ ಅಸಲಿ ಮೌಲ್ಯ ಏನಲ್ಲವೆಂದರೂ ಇದಕ್ಕಿಂತ 30 ಪಟ್ಟು ಹೆಚ್ಚಾಗಿದೆ! ಪಶ್ಚಿಮ ಘಟ್ಟಗಳಲ್ಲಿ ದೀರ್ಘವಾಗಿ ಕ್ರಮಿಸುವ ಕೊಂಕಣ್ ರೈಲ್ವೆಯ ಹಾದಿಯಲ್ಲಿ ದೇಶದ ಪ್ರಮುಖ ಮೂರು ನೌಕಾ ನೆಲೆಗಳು, ನಾಲ್ಕು ಬೃಹತ್ ಬಂದರುಗಳು, ಮೂರು ತೈಲ ಸಂಸ್ಕರಣಾ ಘಟಕಗಳು, ನೂರಾರು ಸಂಪರ್ಕ ರೈಲ್ವೆಗಳು ಬರುತ್ತವೆ. ಇಂತಹ ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಖಾಸಗಿಯವರಿಗೆ ಅತ್ಯಂತ ಅಗ್ಗವಾಗಿ ವರ್ಗಾವಣೆಯಾಗಲಿವೆ. ದೇಶದ ಅತ್ಯಂತ ಅಗ್ಗದ ಸಾರಿಗೆಯಾದ ರೈಲ್ವೆಯನ್ನು ಖಾಸಗೀಕರಿಸಲು ರೈಲ್ವೆ ಡೆವಲಪ್‌ಮೆಂಟ್ ಅಥಾರಿಟಿಯನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ರೈಲ್ವೆ ಟ್ರಾಕ್‌ಗಳನ್ನು ಖಾಸಗಿಯವರಿಗೆ ನೀಡಲಾಗುವುದು. ಪ್ರಯಾಣ ಮತ್ತು ಸರಕು ಸಾರಿಗೆ ದರಗಳನ್ನು ಇದು ನಿಗದಿ ಮಾಡಲಿದೆ. ಶೇ.47 ರಷ್ಟು ಸಬ್ಸಿಡಿ ಇರುವ ರೈಲ್ವೆ ಪ್ರಯಾಣ ದರಗಳು ಮುಂದೆ ಇಲ್ಲವಾಗಲಿವೆ.

ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಲಾದ ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ (NMP) ಅಡಿಯಲ್ಲಿ ದೇಶದ ಬಹುತೇಕ ಸಾರ್ವಜನಿಕ ಉದ್ದಿಮೆಗಳನ್ನು ಮತ್ತು ಸಂಸ್ಥೆಗಳನ್ನು 40 ವರ್ಷಗಳ ದೀರ್ಘಾವಧಿ ಭೋಗ್ಯಕ್ಕೆ ಖಾಸಗಿಯವರಿಗೆ ಹಸ್ತಾಂತರಿಸಲಾಗುವುದು. NHAI ಅಧೀನದ ಶೇ.22 ರಷ್ಟು ಅಂದರೆ 26,700 ಕಿ.ಮೀ.ಗಳಷ್ಟಿ ರಾಷ್ಟ್ರೀಯ ಹೆದ್ದಾರಿಗಳನ್ನು, 400 ರೈಲ್ವೆ ನಿಲ್ದಾಣಗಳನ್ನು, 90 ಪ್ಯಾಸೆಂಜರ್ ರೈಲುಗಳನ್ನು, 25 ಪ್ರಮುಖ ವಿಮಾನ ನಿಲ್ದಾಣಗಳನ್ನು, 14,197 ಃಖಓಐ ಟವರ್‌ಗಳನ್ನು, 2.86 ಲಕ್ಷ ಕಿ.ಮೀ. ಭಾರತ್‌ನೆಟ್ ಓಎಫ್‌ಸಿ ಲೈನುಗಳನ್ನು, 160 ಕಲ್ಲಿದ್ದಲು ಗಣಿಗಳನ್ನು, 28,608 ಸರ್ಕ್ಯೂಟ್ ಕಿ.ಮೀ. ವಿದ್ಯುತ್ ಸಾಗಾಣಿಕೆ ಲೈನುಗಳನ್ನು, NHPC ಮತ್ತು NTPC ವಿದ್ಯುತ್ ಉತ್ಪಾದನಾ ಘಟಕಗಳನ್ನು, IOCL, HPCL ಮತ್ತು GAILನ ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳ ಪೈಪ್‌ಲೈನ್‌ಗಳನ್ನು, 9 ಪ್ರಮುಖ ಬಂದರುಗಳ 31 ಪ್ರಾಜೆಕ್ಟ್‌ಗಳನ್ನು, FCI ಮತ್ತು ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್‌ನ ಶೇ.39 ರಷ್ಟು ಸಂಗ್ರಹಣಾ ಸಾಮರ್ಥ್ಯವನ್ನು, ಕ್ರೀಡಾಂಗಣಗಳನ್ನು, ಹೀಗೆ ಎಲ್ಲಾ ಸಾರ್ವಜನಿಕ ರಂಗಗಳ ಆಸ್ತಿಗಳನ್ನು ಮತ್ತು ಸಂಪತ್ತುಗಳನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರ ಹೊರಟಿದೆ. ಇದಕ್ಕೆ ಪೂರಕವಾಗಿ ರಾಜ್ಯದ ಬಿಜೆಪಿ ಸರ್ಕಾರವೂ ಕಾಯ್ದೆ ಮತ್ತು ಕಾನೂನುಗಳನ್ನು ಬದಲಾಯಿಸುತ್ತಿದೆ.

ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಸಾರ್ವಜನಿಕ ಉದ್ದಿಮೆಗಳು ವ್ಯಾಪಕ ಕೈಗಾರಿಕಾ ನೆಲೆಯನ್ನು ಒದಗಿಸಿದವು. ವಿದ್ಯುತ್, ರೈಲ್ವೇ, ರಸ್ತೆ, ಸಂಪರ್ಕ, ಕಬ್ಬಿಣ/ಉಕ್ಕು, ರಕ್ಷಣೆ, ಹಡಗು, ಕಲ್ಲಿದ್ದಲು, ಸಿಮೆಂಟ್, ಪೆಟ್ರೋಲಿಯಂ, ವಿಮೆ, ಬ್ಯಾಂಕಿಂಗ್, ಬಾಹ್ಯಾಕಾಶ ಸಂಶೋಧನೆ, ವಿಜ್ಞಾನ ತಂತ್ರಜ್ಞಾನ, ಹೀಗೆ ಎಲ್ಲಾ ಪ್ರಮುಖ ರಂಗಗಳಲ್ಲಿ ದೇಶಕ್ಕೆ ಒಂದು ಸ್ವಾವಲಂಬಿ ಆರ್ಥಿಕತೆಯನ್ನು ನಿರ್ಮಿಸುವಲ್ಲಿ ಸಾರ್ವಜನಿಕ ಉದ್ದಿಮೆಗಳು ಮಹತ್ವದ ಪಾತ್ರ ವಹಿಸಿವೆ. ಈ ಉದ್ದಿಮೆಗಳು ಸ್ಥಾಪನೆಯಾದಲೆಲ್ಲಾ ವ್ಯವಸ್ಥಿತವಾದ ನಗರಗಳೇ ನಿರ್ಮಾಣವಾಗಿವೆ, ಹೆಚ್ಚಿನ ನಾಗರಿಕ ಸೌಲಭ್ಯಗಳು, ಹೆಚ್ಚಿನ ಉದ್ಯೋಗಗಳು ಲಭ್ಯವಾಗಿವೆ. ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ದೊರೆತಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ನೆರವಾಗಿದೆ. ಒಟ್ಟಾರೆ ದೇಶದ ಸ್ವಾವಲಂಬನೆ, ಸಾರ್ವಭೌಮತೆ ರಕ್ಷಣೆಗೆ ಸಾರ್ವಜನಕ ಉದ್ದಿಮೆಗಳು ಕೆಲಸ ಮಾಡಿವೆ.

ಈ ಹಿನ್ನೆಲೆಯಲ್ಲಿ ಕೇಂದ್ರದ ಮೋದಿ ಸರ್ಕಾರದ ಸಾರ್ವಜನಿಕ ಉದ್ದಿಮೆಗಳನ್ನು ಮತ್ತು ಸಂಸ್ಥೆಗಳನ್ನು ಮಾರಾಟ ಮಾಡುವ ದೇಶ ವಿರೋಧಿ ಕ್ರಮಗಳನ್ನು ಗಂಗಾವತಿಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ರಾಜ್ಯ ಸಮ್ಮೇಳನವು ತೀವ್ರವಾಗಿ ವಿರೋಧಿಸುತ್ತದೆ. ಇದಕ್ಕೆ ಪೂರಕವಾಗಿ ನಡೆದುಕೊಳ್ಳುತ್ತಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮಗಳನ್ನೂ ಸಿಪಿಐ(ಎಂ) ಸಮ್ಮೇಳನವು ವಿರೋಧಿಸುತ್ತದೆ.

ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನಿಲ್ಲಿಸಿ ಸುರಕ್ಷತೆ ಒದಗಿಸಬೇಕು

ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ನ್ಯಾಯ ಮೂರ್ತಿ ವರ್ಮಾ ಕಮಿಟಿಯ ಶಿಪಾರಸುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು, ತಪ್ಪಿತಸ್ಥರು ಯಾರೇ ಆಗಿದ್ದರೂ ಶಿಕ್ಷಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರಕಟಿಸಬೇಕೆಂದು ಸಮ್ಮೇಳನ ಆಗ್ರಹಿಸಿದೆ.

ರಾಜ್ಯವ್ಯಾಪಿಯಾಗಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಅನಿಯಂತ್ರಿತವಾಗಿ ನಡೆಯುತ್ತಿವೆ. ಇವುಗಳನ್ನು ತಡೆಯಲು ವಿಫಲವಾಗಿರುವ ಕೇಂದ್ರ ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) 23 ನೇ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

ಪಾಳೇಗಾರಿ ಮೌಲ್ಯಗಳು ಮತ್ತು ನವ ಉದಾರೀಕರಣ ನೀತಿಗಳ ಪರಿಣಾಮಗಳು ಮಹಿಳೆಯರನ್ನು ತೀವ್ರ ಸಂಕಷ್ಟಕ್ಕೆ ದೂಡಿವೆ. ಕೋವಿಡ್ ಸಂದರ್ಭದಲ್ಲಿ ಏಕಾಏಕಿ ಘೋಷಿಸಿದ ಲಾಕ್ ಡೌನ್ ಕಾರಣದಿಂದ ಮಹಿಳೆಯರು ಮನೆಯಿಂದ ಹೊರಬರಲಾಗದೆ ಪರಿಹಾರದ ದಾರಿಗಳೂ ಇಲ್ಲದೆ ಹಲವು ದೌರ್ಜನ್ಯಗಳಿಗೆ ಬಲಿಯಾದರು. ಅದಕ್ಕೆ ಪರ್ಯಾಯ ಪರಿಹಾರಗಳ ವ್ಯವಸ್ಥೆಯನ್ನು ರೂಪಿಸದ ಕೇಂದ್ರ–ರಾಜ್ಯ ಸರ್ಕಾರಗಳು, ಮಹಿಳಾ ಅಯೋಗಗಳು 2020– 21 ರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿವೆ ಎಂದು ಸಮರ್ಥನೆ ನೀಡಿವೆ.

2019 – 20 ರಲ್ಲಿ ದೇಶದಲ್ಲಿ ನಡೆದ ಬಾಲ್ಯ ವಿವಾಹಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. 2018 – 19 ಕ್ಕೆ ಹೋಲಿಸಿದರೆ ಶೇ 66 ರಷ್ಟು ಹೆಚ್ಚಳವಿದೆ. ಶಾಲೆಗಳು ಇಲ್ಲದಿರುವುದು, ಬದುಕಿನ ಅಭದ್ರತೆ, ಹೆಣ್ಣು ಮಕ್ಕಳ ಸುರಕ್ಷತೆಯ ಸಮಸ್ಯೆಗಳಿಗೆ ಪರಿಹಾರವಾಗಿ ಬಾಲ್ಯ ವಿವಾಹಗಳು ನಡೆದಿರುವುದು ಸಮೀಕ್ಷೆಗಳಿಂದ ದೃಡಪಟ್ಟಿದೆ. ಕೌಟುಂಬಿಕ ದೌರ್ಜನ್ಯ 2019 –20 ರಲ್ಲಿ ಶೇ 115.5 ರಷ್ಟು ಹೆಚ್ಚಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇನ್ನೂ ಬೆಳಕಿಗೆ ಬಾರದ ಪ್ರಕರಣಗಳು ಸಾಕಷ್ಟಿವೆ. ಲಾಕ್‌ಡೌನ್ ಮತ್ತು ಅನ್ಲಾಕ್ ಸಮಯದಲ್ಲಿ ವರ್ಕ್ ಫ್ರಮ್ ಹೋಮ್ ಮೂಲಕ ಕೆಲಸ ಮಾಡುವ ಮಹಿಳೆಯರು ಹೊಸ ಸ್ವರೂಪಗಳಲ್ಲಿ ಆನ್ಲೈನ್ ಕಿರುಕುಳವನ್ನು ಅನುಭವಿಸುತ್ತಿರುವ ಘಟನೆಗಳು ವರದಿಯಾಗುತ್ತಿವೆ. ಹಾಗೆಯೇ ವರದಕ್ಷಿಣೆ ಕಿರುಕುಳ, ಯುವ ಜನರ ಆಯ್ಕೆ ಹಕ್ಕುಗಳ ಮೇಲೆ ದಾಳಿ, ಮಹಿಳೆಯರ ಸಾಕಾಣಿಕೆ, ಅತ್ಯಾಚಾರದಂತಹ ಘಟನೆಗಳು ಹೆಚ್ಚಾಗಿವೆ. ಇತ್ತೀಚೆಗೆ ಮಧ್ಯ ರಾತ್ರಿಯಲ್ಲಿ ಮಹಿಳೆಯರಿಗೆ ಕಾಲ್ ಮಾಡಿ ಅಶ್ಲೀಲವಾಗಿ ಮಾತನಾಡುವುದು, ಲೈಂಗಿಕತೆಗೆ ಆಹ್ವಾನಿಸುವುದು, ಅಶ್ಲೀಲ ಚಿತ್ರಗಳನ್ನು ಕಳಿಸುವಂತಾ ಕೃತ್ಯಗಳು ನಡೆಯುತ್ತಿದ್ದು, ಹೊರಗೆ ಹೇಳಿಕೊಳ್ಳಲಾರದ ಪರಿಸ್ಥಿತಿಯಲ್ಲಿ ಮಾನಸಿಕ ಕಿರುಕುಳಗಳನ್ನು ಮಹಿಳೆಯರು ಅನುಭವಿಸುತ್ತಿದ್ದಾರೆ.

ಮಹಿಳೆಯರ ದೌರ್ಜನ್ಯಗಳ ಪ್ರಕರಣಗಳ ಸಂಖ್ಯೆಗನುಗುಣವಾಗಿ ಮಹಿಳಾ ಸಾಂತ್ವನ ಕೇಂದ್ರಗಳನ್ನು, ಮಹಿಳಾ ಪೋಲಿಸ್ ಠಾಣೆಗಳನ್ನು, ತ್ವರಿತಗತಿಯ ನ್ಯಾಯಲಯಗಳನ್ನು ಹೆಚ್ಚಿಸುವ ಸಮುದಾಯವನ್ನು ಮತ್ತು ಶಿಕ್ಷಣವನ್ನು ಲಿಂಗ ಸಂವೇದನಾಶೀಲಗೊಳಿಸುವ ಮೂಲಕ ತುರ್ತು ಕ್ರಮಗಳಿಗೆ ಸರ್ಕಾರ ಮುಂದಾಗಬೇಕಿತ್ತು. ಬದಲಿಗೆ ಕೋವಿಡ್ ಅವಧಿಯಲ್ಲಿ ಆರ್ಥಿಕ ಬಿಕ್ಕಟ್ಟಿನ ಕಾರಣ ನೀಡಿ ಹಲವು ಜಿಲ್ಲೆಗಳಲ್ಲಿ ಸಾಂತ್ವನ ಕೇಂದ್ರಗಳನ್ನು ಮುಚ್ಚಲಾಗಿದೆ. ದೀರ್ಘ ಮತ್ತು ದುಬಾರಿ ಕಾನೂನು ಪ್ರಕ್ರಿಯೆಗಳೇ ಹಿಂಸಾತ್ಮಕವಾಗಿರುವ್ಯದರಿಂದ ನ್ಯಾಯಕ್ಕಾಗಿನ ಹೋರಾಟಗಳಿಂದ ಒಂದು ದೂರ ಉಳಿಯುವುದು, ಇಲ್ಲವೇ ಪ್ರಕ್ರಿಯೆಯಿಂದ ಹೊರಬರುವ ಮಹಿಳೆಯರ ಸಂಖ್ಯೆ ಗಣನೀಯವಾಗಿದೆ.

ಸಂಪ್ರದಾಯದ ರಕ್ಷಣೆಯ ಹೆಸರಿನಲ್ಲಿ ಅಂತರ್ ಜಾತಿ ಮತ್ತು ಅಚಿತರ್ ಧರ್ಮೀಯ ಯುವ ಜನರು ಒಂದೆಡೆ ಮತೀಯ ಗೂಂಡಾಗಿರಿಗೆ ಮತ್ತೊಂದೆಡೆ ತಮ್ಮ ಪೋಷಕರಿಂದಲೇ ಅವಮರ್ಯಾದೆಯ ಹೆಸರಿನಲ್ಲಿ ನಡೆಯುತ್ತಿರುವ ದಾಳಿಗಳಿಗೆ ಬಲಿಯಾಗುತ್ತಿದ್ದಾರೆ. ಮರ್ಯಾದೆ ಹೆಸರಿನಲ್ಲಿ ನಡೆಯುತ್ತಿರುವ ಅಪರಾಧಗಳನ್ನು ನಿಯಂತ್ರಿಸಲು ವಿಶೇಷ ಕಾನೂನನ್ನು ಜಾರಿಗೆ ತರಲು ದೇಶವ್ಯಾಪಿ ಹೋರಾಟಗಳು ನಡೆಯುತ್ತಿದ್ದರು ಪ್ರಭುತ್ವ ಅದಕ್ಕೆ ಆದ್ಯ ಗಮನ ನೀಡಲಿಲ್ಲ. ಬದಲಿಗೆ ಯುವಜನರ ಆಯ್ಕೆಯ ಹಕ್ಕುಗಳನ್ನು ನಿರ್ಭಂದಿಸಲು ಮತಾಂತರ ನಷೇಧ ಮಸ್ರದೆಯನ್ನು ಜಾರಿ ಮಾಡುವ ಹಿಡನ್ ಅಜೆಂಡಾವನ್ನು ಮುನ್ನಲೆಗೆ ತರಲೊರಟಿದೆ. ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗ ವ್ಯವಸ್ಥೆಯು ಸೇರಿ ಲಿಂಗ ಸಮಾನತೆಯ ವಿಷಯದಲ್ಲಿ ಅಸಂವೇದನಾಶೀಲ ವಾಗಿರುವುದು ಪ್ರಜಾ ಪ್ರಭುತ್ವ ಚಳುವಳಿಗೇ ಒಂದು ಸವಾಲಾಗಿದೆ.

ಈ ಹಿಂದೆ ಮಹಿಳೆಯರ ಮೇಲಿನ ದೌರ್ಜನ್ಯಗಳ ನಿಯಂತ್ರಣಕ್ಕೆ 2018 ರಲ್ಲಿ ಉಗ್ರಪ್ಪ ಸಮಿತಿ 6017 ಪುಟದ ವರದಿಯಲ್ಲಿ 135 ಶಿಫ್ಪಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರ ಅದನ್ನು ಅಂಗೀಕರಿಸದ ಕಾರಣ ದೂಳು ಹಿಡಿಯುವಂತಾಗಿದೆ. ಅದರಲ್ಲಿರುವ ಪ್ರಮುಖ ಶಿಫ್ಪಾರಸ್ಸುಗಳನ್ನು ಅಂಗೀಕರಿಸುವ ಮೂಲಕ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ನಿಯಂತ್ರಣಕ್ಕೆ ಸರ್ಕಾರ ಮುಂದಾಗಬೇಕು.

ಈ ಹಿನ್ನಲೆಯಲ್ಲಿ ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ನ್ಯಾಯ ಮೂರ್ತಿ ವರ್ಮಾ ಕಮಿಟಿಯ ಶಿಪಾರಸುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು, ತಪ್ಪಿತಸ್ಥರು ಯಾರೇ ಆಗಿದ್ದರು ಶಿಕ್ಷಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರಕಟಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) 23 ನೇ ಸಮ್ಮೇಳನವು ಒತ್ತಾಯಿಸುತ್ತದೆ.

ನಿರುದ್ಯೋಗದ ಸಮಸ್ಯೆ

ಪುಟ 9 ರಿಂದ

ನಷ್ಟಕ್ಕೆ ಕಾರಣವಾಗಿದೆ. ತಪ್ಪಾದ ಆರ್ಥಿಕ ನೀತಿಗಳ ಜೊತೆಯಲ್ಲಿ ಕೊರೋನ ನಿರ್ವಹಣೆಯಲ್ಲಿ ಅವೈಜ್ಞಾನಿಕ ಲಾಕ್‌ಡೌನ್ ಪದ್ಧತಿಯನ್ನು ಅಳವಡಿಸಿಕೊಂಡದ್ದು ಉದ್ಯೋಗದ ಬಿಕ್ಕಟ್ಟನ್ನು ಮತ್ತಷ್ಟು ಹಿಗ್ಗಿಸಿತು. ಇಂದು ಉದ್ಯೋಗ ಸೃಷ್ಟಿಯ ಬದಲಿಗೆ ಉದ್ಯೋಗ ನಷ್ಟದ ಕಡೆಗೆ ದೇಶ ದಾಪುಗಾಲು ಇಡುತ್ತಿದೆ.

ದುಬಾರಿಯಾಗಿರುವ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತವಾದ ಸರ್ಟಿಫಿಕೇಟ್ ಪಡೆದು ಲಕ್ಷಾಂತರ ಸಂಖ್ಯೆಯಲ್ಲಿ ಹೊರಬರುವ ವಿದ್ಯಾವಂತ ಯುವಜನತೆಗೆ ಅವರು ಪಡೆದ ಸರ್ಟಿಫಿಕೇಟ್‌ಗಳಿಗೆ ಅನುಗುಣವಾದ ಉದ್ಯೋಗಗಳು ಲಭ್ಯವಿಲ್ಲದೆ ಅಸಹಾಯಕರಾಗುತ್ತಿದ್ದಾರೆ. ಇದು ಸಾಮಾಜಿಕವಾಗಿಯೂ ಅಶಾಂತಿಗೆ ಕಾರಣವಾಗುತ್ತಿದೆ. ಹತಾಶ ಯುವಜನತೆ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು, ಮತಾಂಧ, ಛಿದ್ರಕಾರಕ ವಿಚಾರಗಳತ್ತ ಆಕರ್ಷಿತರಾಗುವುದು, ಕ್ಷೋಭೆ ಹುಟ್ಟಿಸುವ ಶಕ್ತಿಗಳ ಕೈಗೆ ಸಿಲುಕಿ ಬಲಿಪಶುಗಳಾಗುತ್ತಿರುವುದು ಕಣ್ಣಿಗೆ ರಾಚುವಂತೆ ಕಾಣುತ್ತಿದೆ. ನಿರುದ್ಯೋಗದಿಂದ ಬೇಸತ್ತು ಆತ್ಮಹತ್ಯೆಗೈಯ್ಯುವವರ ಪ್ರಮಾಣವೂ ಹೆಚ್ಚುತ್ತಿದೆ.

ಈ ಎಲ್ಲಾ ಹಿನ್ನಲೆಯಲ್ಲಿ ಕೇಂದ್ರ, ರಾಜ್ಯ ಸರಕಾರಗಳು ನಿರುದ್ಯೋಗ ಸಮಸ್ಯೆ ಬಗೆಹರಿಸಲು, ಉದ್ಯೋಗ ಸೃಷ್ಟಿಸುವ ನೀತಿಗಳನ್ನು ಜಾರಿಗೊಳಿಸಲು ಮುಂದಾಗಬೇಕು ಹಾಗೂ ನಿರುದ್ಯೋಗದ ಸಮಸ್ಯೆಗೆ ಎದುರಾಗಿ ವಿದ್ಯಾರ್ಥಿ, ಯುವಜನರನ್ನು ಸಂಘಟಿಸಿ ಪ್ರಬಲ ಹೋರಾಟ ರೂಪಿಸಬೇಕು.



ಋಣ ಮುಕ್ತ ಕಾನೂನನ್ನು ಜಾರಿಗೊಳಿಸಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳಗಳಿಂದ ಮಹಿಳೆಯರನ್ನು ರಕ್ಷಿಸಬೇಕು

ಕೋವಿಡ್ ಸಾಂಕ್ರಾಮಿಕತೆಯ ಎರಡು ಅಲೆಗಳು ಮತ್ತು ಅಯೋಜಿತವಾದ ಲಾಕ್‌ಡೌನ್‌ನಿಂದ ಸಾಮಾನ್ಯ ಜನತೆ ಅದರಲ್ಲು ಮಹಿಳೆಯರು ಇನ್ನೂ ಚೇತರಿಸಿಕೊಂಡಿಲ್ಲ. ಜೀವನಾಧಾರಗಳನ್ನು ಕಳೆದುಕೊಂಡ ಜನತೆ ಕನಿಷ್ಟ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಲಗಳ ಸುಳಿಗೆ ಸಿಲುಕಿದ್ದು ಹೊರಬರಲು ಹಲವು ನಮೂನೆಯ ದುಡಿಮೆಗೆ ಹೆಗಲು ನೀಡುತ್ತಾ ಜರ್ಜರಿತರಾಗಿದ್ದಾರೆ.

ಬ್ಯಾಂಕುಗಳ ಅಲಭ್ಯತೆ, ಸುಲಭದಲ್ಲಿ ಬ್ಯಾಂಕುಗಳಿಂದ ಸಾಲಸೌಲಭ್ಯಗಳು ಸಿಗದಿರುವುದು, ಸರ್ಕಾರಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಕಾರ್ಯಾಚರಣೆ ಇಲ್ಲದಿರುವುದು, ಬ್ಯಾಂಕ್‌ಗಳಲ್ಲಿ ಗಿರವಿ ಇಡಲು ಆಸ್ತಿ ಮತ್ತು ಒಡವೆಗಳಿಲ್ಲದಿರುವುದು, ಖಾಸಗಿಯಾಗಿ ಸಿಗುವ ಸಾಲದ ಮೇಲಿನ ಅಧಿಕಬಡ್ಡಿ, ಚಕ್ರಬಡ್ಡಿ. ದಲ್ಲಾಳಿಗಳ ಕಿರುಕುಳಗಳು ಇವುಗಳಿಂದ ಹೊರಬರಲು ಪರ್ಯಾಯ ಮಾರ್ಗೋಪಾಯಗಳಿಲ್ಲದೇ ಮನೆಬಾಗಿಲಿಗೆ ಬರುವ ಮೈಕ್ರೊಫೈನಾನ್ಸ್ ಸಂಸ್ಥೆಗಳ ಸಾಲಗಳಿಗೆ ಲಕ್ಷಾಂತರ ಮಹಿಳೆಯರು ಸಿಲುಕಿದ್ದಾರೆ. ಬ್ಯಾಂಕುಗಳಿಂದ ಕಡಿಮೆ ಬಡ್ಡಿಗೆ ಸಾಲಗಳನ್ನು ಪಡೆದು ಮಹಿಳೆಯರಿಗೆ ಅಧಿಕ ಬಡ್ಡಿ ವಿಧಿಸುವ ಈ ಸಂಸ್ಥೆಗಳು ರಾಜ್ಯದಲ್ಲಿ ಅನಯಂತ್ರಿತವಾಗಿ ಮತ್ತು ಪ್ರಶ್ನಾತೀತವಾಗಿ ವಿಸ್ತಾರಗೊಂಡಿವೆ. ಇವರಿಂದ ಸಾಲ ಪಡೆದ ಮಹಿಳೆಯರಲ್ಲಿ ಬಹುಸಂಖ್ಯಾತರು ಕುಟುಂಬದ ಕನಿಷ್ಟ ನಿರ್ವಹಣೆಗೆ, ಕೋವಿಡ್ ಮತ್ತು ಕೋವಿಡ್ಯೇತರ ಆರೋಗ್ಯ ಸಮಸ್ಯೆಗಳ ಸಂದರ್ಭದಲ್ಲಿ, ಕೋವಿಡ್ ಸಾವುಗಳ ಸಂದರ್ಭದಲ್ಲಿ ಹೆರಿಗೆ, ಬಾಣಂತನದ ಸಂದರ್ಭ ನಭಾಯಿಸಲು, ಮಕ್ಕಳ ಶಾಲಾ ಕಾಲೇಜು ಶುಲ್ಕಗಳನ್ನು ಪಾವತಿಸಲು, ಸಾಲಗಳ ಮರುಪಾವತಿಗಾಗಿ ಸಾಲ ಪಡೆದವರಾಗಿದ್ದಾರೆ. ಬಹುಸಂಖ್ಯಾತ ಮಹಿಳೆಯರಿಗೆ ತಾವು ತೆಗೆದುಕೊಂಡಿರುವ ಸಾಲ ಕಟ್ಟಬೇಕಾದ ವಾರದ/ತಿಂಗಳ ಕಂತುಗಳ ಹಣದ ಮಾಹಿತಿ ಇದೆ ಆದರೆ ಅದರೊಂದಿಗೆ ಮಿಳಿತಗೊಂಡಿರುವ ಬಡ್ಡಿ ಮತ್ತು ಚಕ್ರ ಬಡ್ಡಿಯ ವಿವರಗಳು ತಿಳಿದಿಲ್ಲ. ಅದರಲ್ಲು ಗ್ರಾಮಾಂತರ ಮತ್ತು ಹಿಂದುಳಿದ ಜಿಲ್ಲೆಗಳಲ್ಲಿ ಅವರಿಗೇ ಅರಿವಿಲ್ಲದಂತೆ ಶೋಷಣೆಗೆ ಒಳಗಾಗಿರುವುದನ್ನು ನೋಡಬಹುದು. ಗುಂಪಿನಲ್ಲಿ ಯಾರಾದರು ಒಬ್ಬರು ಸಾಲ ಪಡೆದು ತೀರಿಸಲಾಗದಿದ್ದರೆ ಇಡೀ ಗುಂಪನ್ನು ಹೊಣೆ ಮಾಡುವ ಎಂ.ಎಫ್.ಐಗಳ ಹುನ್ನಾರಗಳಿಂದ ಬಾಧಿತ ಮಹಿಳೆಯರು ಸಾರ್ವಜನಿಕ ಅಪಮಾನಕ್ಕೆ ಒಳಗಾಗುವುದು ಹಲ್ಲೆ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ನಾಡಿನಾದ್ಯಂತ ಕಾಣಬಹುದು. ಅದರಲ್ಲು ಧರ್ಮಸ್ಥಳ ಗುಂಪುಗಳು ಎಲ್ಲ ಜಿಲ್ಲೆಗಳಲ್ಲಿ ವಿಸ್ತರಿಸಿದ್ದು ಸಾಲ ಸೌಲಭ್ಯಗಳ ನೆರವು ನೀಡುತ್ತಾ ಗುಂಪಿನ ಮಹಿಳೆಯರನ್ನು ರಾಜಕೀಯ/ ಧಾರ್ಮಿಕ ಕಾರ್ಯಕ್ರಗಳಲ್ಲಿ ಪಾಲ್ಗೊಳ್ಳುವ ವ್ಯವಸ್ಥಿತ ಜಾಲವನ್ನೇ ಹೊಂದಿದ್ದಾರೆ. ಆರ್.ಬಿ.ಐ ಈ ವಲಯವನ್ನು ಆದ್ಯತಾ ವಲಯವೆಂದು ಅವಲಂಬಿಸಿರುವುದು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಮತ್ತಷ್ಟು ಪುಷ್ಟೀಕರಿಸಿದೆ. ಈ ಹಿನ್ನಲೆಯಲ್ಲಿ

ನಮ್ಮ ಹಕ್ಕೊತ್ತಾಯಗಳು

- ಋಣಮುಕ್ತ ಕಾನೂನನ್ನು ಜಾರಿಗೊಳಿಸಿ ಮಹಿಳೆಯರ ಮೇಲಿರುವ ಸಾಲಗಳನ್ನು ಮನ್ನಾ ಮಾಡಿ.
- ಕೋವಿಡ್ ಸಾಂಕ್ರಾಮಿಕತೆಯಿಂದ ಚೇತರಿಸಿಕೊಳ್ಳಲು ಶೂನ್ಯ ಬಡ್ಡಿದರದಲ್ಲಿ ಮಹಿಳೆಯರಿಗೆ ಸಾಲಸೌಲಭ್ಯಗಳನ್ನು ನೀಡಿ.
- ಬ್ಯಾಂಕುಗಳ ಶಾಖೆಗಳನ್ನು ಗ್ರಾಮ ಮಟ್ಟಕ್ಕೆ ವಿಸ್ತರಿಸಿ. ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ರಚನೆಗೆ ಮತ್ತು ವಿಸ್ತರಣೆಗೆ ಆದ್ಯ ಗಮನ ನೀಡಿ, ಮಹಿಳೆಯರಿಗೆ ಆದಾಯದಾಯಕ ಚಟುವಟಿಕೆಗಳ ತರಬೇತಿಗಳನ್ನು ನೀಡಿ ಅವರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯ ಖಾತ್ರಿಯನ್ನು ಒದಗಿಸಿ.
- ಮಹಿಳೆಯರಿಗೆ ಮಾನಸಿಕ ದೈಹಿಕ ಕಿರುಕುಳಗಳನ್ನು ನೀಡುವ ಅಧಿಕ ಬಡ್ಡಿ ವಿಧಿಸಿ ವಂಚಿಸುವ ಎಂ.ಎಫ್.ಐ ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿಸುವ ಮೂಲಕ ಬಡತನವನ್ನು ನಿವಾರಿಸುವ ಕೇರಳದ ಕುಟುಂಬಶ್ರೀ ಯೋಜನೆಯ ಮಾದರಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಬಲಪಡಿಸಬೇಕೆಂದು ಸಿ.ಪಿ.ಐ(ಎಂ)ನ 23 ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ನಿವೇಶನ ರಹಿತರಿಗೆ ನಿವೇಶನ ಕೊಡಬೇಕು

ಇತ್ತೀಚಿನ ಒಂದು ಅಧ್ಯಯನ ಪ್ರಕಾರ ನಮ್ಮ ದೇಶದ ಗ್ರಾಮೀಣ ಜನಸಂಖ್ಯೆಯಲ್ಲಿ ಶೇ 30% ರಷ್ಟು ಜನಗಳಿಗೆ ಒಂದು ತುಂಡು ಭೂಮಿಯೂ ಸಹ ಇಲ್ಲ. 2 ಕೋಟಿಗೂ ಹೆಚ್ಚು ಕುಟುಂಬಗಳಿಗೆ ಸ್ವಂತ ಮನೆಗಳಿಲ್ಲ, ಇದು ನವೇಶನ ರಹಿತರ ಸಮಸ್ಯೆಯ ವಿಸ್ತಾರವನ್ನು ನಮ್ಮ ಕಣ್ಣೆದುರು ತರುತ್ತದೆ. ಪ್ರತಿ ಒಂದು ಮನೆಗೆ 5 ಸೆಂಟ್ಸ್ ಪ್ರಕಾರ ಲೆಕ್ಕಹಾಕಿದರೆ ಎಲ್ಲರಿಗೂ ಮನೆಗಳನ್ನು ಒದಗಿಸಲು 10 ಲಕ್ಷ ಎಕರೆ ಭೂಮಿ ಬೇಕಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಳ್ಳದೇ ಕೇಂದ್ರ ಸರ್ಕಾರ 2022 ಒಳಗಾಗಿ ಎಲ್ಲ ಮನೆ ಇಲ್ಲದವರಿಗೆ ಮನೆಗಳನ್ನು ಒದಗಿಸುವ ಭರವಸೆ ನೀಡುತ್ತಿದೆ. ಇದು ಕೇವಲ ಜನರ ಗಮನವನ್ನು ಬೇರೆ ಕಡೆ ಸೆಳೆಯುವ ತಂತ್ರವಾಗಿದೆ ಮಾತ್ರವಲ್ಲ ಸ್ವಂತ ಮನೆಗಳಿಗಾಗಿ ಬಡ ಜನರು ಹೋರಾಟ ಮಾಡುವುದನ್ನು ತಡೆಯುವ ಕುತಂತ್ರವಾಗಿದೆ.

2022 ಒಳಗಾಗಿ ಎಲ್ಲ ಮನೆ ಇಲ್ಲದ ಬಡವರಿಗೆ ಸ್ವಂತ ಮನೆಗಳು ದೊರಕುವಂತಾಗಬೇಕಾದರೆ ಸರ್ಕಾರಿ ಪಡಾ ಭೂಮಿಯನ್ನು ಅರಣ್ಯ ಭೂಮಿಯನ್ನು ಸಂರಕ್ಷಿಸಿ ಮನೆ ಇಲ್ಲದ ಹಾಗೂ ಭೂಮಿ ಇಲ್ಲದ ಕಟುಂಬಗಳಿಗೆ ವಿತರಣೆ ಮಾಡಬೇಕು. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಗಂಭೀರ ಸ್ವರೂಪ ತಾಳಲಿದೆ.

ಭೂಮಿಯ ಪ್ರಶ್ನೆ ಬಡ ರೈತರನ್ನು ಕೃಷಿ ಕೂಲಿಕಾರರನ್ನು ಮತ್ತು ಅತಿ ಹೆಚ್ಚು ದಮನಕ್ಕೆ ಒಳಗಾದ ದಲಿತರನ್ನು ಮತ್ತು ಆದಿವಾಸಿಗಳನ್ನು ಒಂದುಗೂಡಿಸುವ ಬಹುಮುಖ್ಯ ಪ್ರಶ್ನೆಯಾಗಿದೆ. ವ್ಯವಸಾಯಕ್ಕೆ ಭೂಮಿ ಬಯಸುವ ಭೂ ರಹಿತರಿದ್ದಾರೆ, ಮನೆಗಳಿಗಾಗಿ ಭೂಮಿಯನ್ನು ಬಯಸುವವರಿದ್ದಾರೆ. ಮನೆ ನವೇಶನಕ್ಕಾಗಿ ಭೂಮಿ ಪಡೆಯ ಬಯಸುವವರು ಇದ್ದಾರೆ. ಇದೊಂದು ಸಾಧಿಸಬಹುದಾದ ಬಯಕೆ ಇಲ್ಲಿ ನಮ್ಮ ಮಧ್ಯಪ್ರವೇಶ ತುರ್ತಾಗಿ ಅವಶ್ಯಕವಾಗಿಯೂ ಬೇಕಾಗಿದೆ. ಮನೆ ಇಲ್ಲದವರಿಗೆ ಆಗ ಮನೆಗಳನ್ನು ಒದಗಿಸುವ ಬೇರೆ ಬೇರೆ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಘೋಷಿಸುತ್ತಿರುತ್ತದೆ. ಈ ಕಾರ್ಪೊರೇಟ್ ಕಂಪನಿಗಳು ಪರವಾದ ಸರ್ಕಾರಗಳು, ತಾವು ಹೇಳುವುದನ್ನು ಜಾರಿ ಮಾಡುವಲ್ಲಿ ಪ್ರಾಮಾಣಿಕವಾಗಿಯೂ ಪಾರದರ್ಶಕವಾಗಿಯೂ ಇರುವುದಿಲ್ಲ. ಆದರೆ ಜನತೆಯ ಬಲಿಷ್ಟ ಹಾಗೂ ಅನಿರ್ಧಿಷ್ಟ ಸ್ಥಳಿಯ ಹೋರಾಟಗಳ ಮೂಲಕ ಈ ಜನವಿರೋಧಿ ಸರ್ಕಾರಗಳ ಮೇಲೆ ಪರಿಣಾಮಕಾರಿ ಒತ್ತಡ ತರಬಹುದು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮನೆ ಇಲ್ಲದ, ನಿವೇಶನ ಇಲ್ಲದ ಜನರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ.

ಯಾವುದೇ ಉದ್ಯಮ ನಡೆಸುವುದು ಸರಕಾರದ ಉಸಾಬರಿಯಲ್ಲವಾದರೆ

ವೊಡಾಫೋನ್–ಐಡಿಯಾದಲ್ಲಿ ಸರಕಾರ ಶೇರುದಾರನಾಗುವುದು ಯಾಕೆ?

ಉತ್ಕೃಷ್ಟ ಸಂಪರ್ಕ ಜಾಲ ದೇಶದ ಭದ್ರತೆ, ಡಿಜಿಟಲ್ ಆರ್ಥಿಕತೆಯ ಆಧಾರವಾಗಿರುವ ದೃಷ್ಟಿಯಿಂದ ಟೆಲಿಕಾಂ ಆಯಕಟ್ಟಿನ ಕ್ಷೇತ್ರ. ಈ ಕ್ಷೇತ್ರದಲ್ಲಿ ಎರಡು ಕಂಪನಿಗಳ ಏಕಸ್ವಾಮ್ಯ ಸೇವೆಯ ಗುಣಮಟ್ಟ, ಬೆಲೆಗಳ ದೃಷ್ಟಿಯಿಂದ ಒಳ್ಳೆಯದಲ್ಲ. ಮೂರನೆಯ ಕಂಪನಿಯ ಅಗತ್ಯವಿದೆ. ಸರಿ.. ..ಇದಕ್ಕೆ ಸರಕಾರದ ಬಳಿ ಮೂರು ದಾರಿಗಳಿವೆ. ಒಂದು : ವೊಡಾಫೋನ್–ಐಡಿಯಾ (ವಿ.ಐ)ವನ್ನು ಸರಕಾರವೇ ಯಾಕೆ ನಡೆಸಬಾರದು? ಅಥವಾ ಎರಡು: ವಿ.ಐ ದಿವಾಳಿಯಾಗಲು ಬಿಟ್ಟು ಅದರ ಜಾಲವನ್ನು ಬಿ.ಎಸ್.ಎನ್.ಎಲ್ ಗೆ ಕೊಟ್ಟು ಅಗತ್ಯ ಬಂಡವಾಳ ಹೂಡಿ ಯಾಕೆ ಬೆಳೆಸಬಾರದು ಅಥವಾ ಮೂರು : ಸರಕಾರ ನಿಯಂತ್ರಣ ಹೊಂದಿರುವ ವಿ.ಐ ಮತ್ತು ಬಿ.ಎಸ್.ಎನ್.ಎಲ್ ಎರಡೂ ಕಂಪನಿಗಳನ್ನು ವಿಲೀನಗೊಳಿಸಿ ಇನ್ನಷ್ಟು ಬಂಡವಾಳ ಹೂಡಿ ಯಾಕೆ ನಡೆಸಬಾರದು? ಇಲ್ಲಿಯೇ ಈ ಸರಕಾರದ, ಪ್ರಧಾನಿ ಮೋದಿ ಅವರ "The Government has no business to be in business (ಯಾವುದೇ ಉದ್ಯಮ ನಡೆಸುವುದು ಸರಕಾರದ ಉಸಾಬರಿಯಲ್ಲ)" ವೆಂಬ ಪವಿತ್ರ ತತ್ವ ಮತ್ತು ಚಮಚಾ ಬಂಡವಾಳಶಾಹಿಯ ಮೇಲೆ ಮಮತೆ ಅಡ್ಡ ಬರುತ್ತಿರುವುದು.

ವೊಡಾಫೋನ್–ಐಡಿಯಾ (ವಿಐ) ದೇಶದ ಮೂರನೆಯ ಅತಿದೊಡ್ಡ ಟೆಲಿಕಾಂ ಸೇವಾ ಕಂಪನಿ. ಅದು ಕೆಲವು ವರ್ಷಗಳಿಂದ ಆರ್ಥಿಕ ಸಂಕಷ್ಟದಲ್ಲಿದೆ. ಅದು ಕೇಂದ್ರ ಸರಕಾರಕ್ಕೆ ಕೊಡಬೇಕಿದ್ದ 2 ಲಕ್ಷ ಕೋಟಿ ರೂ. ನ ಸಾಲವನ್ನು ಬಾಕಿಯಿರಿಸಿಕೊಂಡಿದೆ. ಸರಕಾರ ಇತ್ತೀಚೆಗೆ ಅದರ ಸಂಕಷ್ಟ ಪರಿಹಾರಕ್ಕೆ ಒಂದು ಘೋಷಣೆ ಮಾಡಿದೆ. ಅದರ ಬಾಕಿಯ ಒಂದು ಭಾಗವನ್ನು ಶೇರು ಗಳಾಗಿ ಬದಲಾಯಿಸಲು ಮತ್ತು ಉಳಿದ ಬಾಕಿ ತೀರಿಸಲು ಅವಧಿಯನ್ನು ಇನ್ನೂ ನಾಲ್ಕು ವರ್ಷಗಳಿಗೆ ವಿಸ್ತರಿಸಲು ಕೇಂದ್ರ ಸರಕಾರ ಒಪ್ಪಿದೆ. ಈ ನಿರ್ಣಯದಿಂದಾಗಿ ವಿ.ಐ ನ ಶೇ.35.8 ಶೇರು ಹೊಂದಿರುವ ಕೇಂದ್ರ ಸರಕಾರ ಅದರ ಅತಿ ದೊಡ್ಡ ಹೂಡಿಕೆದಾರ ಆಗಿದೆ. ಅತಿ ದೊಡ್ಡ ಹೂಡಿಕೆದಾರರಿಗೆ ಒಂದು ಕಂಪನಿಯನ್ನು ನಡೆಸುವ ಅಧಿಕಾರ ಮತ್ತು ಜವಾಬ್ದಾರಿ ಎರಡೂ ಇರುತ್ತದೆ. ಆದರೆ ಸರಕಾರ ವಿ.ಐ ಕಂಪನಿಯನ್ನು ನಡೆಸಲು ತನಗೆ ಆಸಕ್ತಿ ಇಲ್ಲವೆಂದಿದೆ. ಅನುಕ್ರಮವಾಗಿ ಎರಡನೆಯ ಮತ್ತು ಮೂರನೆಯ ಅತಿ ದೊಡ್ಡ ಖಾಸಗಿ ಹೂಡಿಕೆದಾರರಾದ ವೊಡಾಫೋನ್ (ಶೇ.28.5) ಮತ್ತು ಆದಿತ್ಯ ಬಿರ್ಲಾ (ಶೇ.17.8) ಕಂಪನಿಯ ನಿರ್ವಹಣೆಯನ್ನು ಮುಂದುವರೆಸಲಿದ್ದಾರೆ. 'ಪ್ರವರ್ತಕರ ಹಕ್ಕು'ಗಳ ಆಧಾರದ ಮೇಲೆ ಕಂಪನಿಯ ನಿರ್ವಹಣೆಯನ್ನು ಮಾಡಲು ತಮಗೆ ತಾವೇ ಅಧಿಕಾರ ಕೊಡುವ ತಿದ್ದುಪಡಿಯನ್ನು 'ಶೇರುದಾರರ ಒಪ್ಪಂದ'ಕ್ಕೆ ಅವರು ಮಾಡಿಕೊಂಡಿದ್ದಾರೆ. ಕೇಂದ್ರ ಸರಕಾರ ಮತ್ತು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಇನ್ನೂ ವಿ.ಐ ಕಂಪನಯ ಸಾಲಗಾರರಾಗಿರುತ್ತಾರೆ.

ಒಂದು ಕಂಪನಿಯ ಅತಿ ದೊಡ್ಡ ಶೇರುದಾರ ಅತಿ ದೊಡ್ಡ ಸಾಲಗಾರನಾಗಿರುವ ವಿಲಕ್ಷಣ ಪರಿಸ್ಥಿತಿ ಸೃಷ್ಟಿಯಾಗಿದೆ. ಇದು ಹೇಗೆ ಸಾಧ್ಯವಾಯಿತು? ಇದು ಕಳೆದ ಮೂರು ದಶಕಗಳಿಂದ ದೇಶದಲ್ಲಿ ಪಾಲಿಸಲಾಗುತ್ತಿರುವ ನವ–ಉದಾರವಾದಿ ನೀತಿಗಳ ದುಷ್ಫಲ. ಅದರ ಭಾಗವಾಗಿ ಟೆಲಿಕಾಂ ಕ್ಷೇತ್ರದ ಸುಧಾರಣೆಗಳ ಹೆಸರಲ್ಲಿ ಏನಕೇನ ಪ್ರಕಾರೇಣ ಖಾಸಗೀಕರಣ ನೀತಿಯ ದುಷ್ಫಲ.

ವಿದ್ಯುತ್, ಕಲ್ಲಿದ್ದಲು ಮುಂತಾದ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಖಾಸಗೀಕರಣ ವಿಫಲಗೊಂಡಿದ್ದು, ಇದರಿಂದಾಗಿ ಬ್ಯಾಂಕುಗಳ ಎನ್.ಪಿ.ಎ (ಬರಡು ಆಸ್ತಿಗಳು) ಭಾರಿ ಏರಿಕೆ ಕಂಡಿದ್ದವು. ಇವು ನವ–ಉದಾರವಾದಿ ನೀತಿಗಳ ವೈಫಲ್ಯ ಎಂದು ವಾದಿಸಿದವರಿಗೆ, ಆ ನೀತಿಗಳ ಬೆಂಬಲಿಗರು ಟೆಲಿಕಾಂ ಕ್ಷೇತ್ರವನ್ನು ತೋರಿಸಿ "ನೋಡಿ! ಈ ಕ್ಷೇತ್ರದಲ್ಲಿ ಅದು ಸಫಲವಾಗಿದೆ" ಎನ್ನುತ್ತಿದ್ದರು. ಈಗ ಟೆಲಿಕಾಂ ಕ್ಷೇತ್ರ ಅದೇ ಹಾದಿ ಹಿಡಿದಿದೆ ಎಂಬುದು ಸ್ಪಷ್ಟ. ಈ ಕ್ಷೇತ್ರದಲ್ಲಿ ಕೇವಲ ಎರಡು ಕಂಪನಿಗಳು (ಜಿಯೊ ಮತ್ತು ಏರ್‌ಟೆಲ್) ಮಾತ್ರ ಉಳಿದಿವೆ. ಟೆಲಿಕಾಂ ಲೈಸೆನ್ಸ್ ಪಡೆದ ಹಲವಾರು ಕಂಪನಿಗಳು ಮಾಯವಾಗಿ, ಈ ಎರಡು ಕಂಪನಿಗಳ ಏಕಸ್ವಾಮ್ಯ ಈ ಕ್ಷೇತ್ರವನ್ನು ಆಳುತ್ತಿದೆ. ಇದೇ ಸಮಯದಲ್ಲಿ ಟೆಲಿಕಾಂ ಕ್ಷೇತ್ರದ ಸಾರ್ವಜನಿಕ ಉದ್ಯಮ ಬಿ.ಎಸ್.ಎನ್.ಎಲ್.ನ್ನು ಹಾಳುಗೆಡವಲಾಗುತ್ತಿದೆ. ಅದರ ಸಾಲಗಳನ್ನು ಹೀಗೆ (ವಿ.ಐ ಕಂಪನಿಗೆ ಮಾಡಿದಂತೆ) ಪುನರ್‌ರಚಿಸಬೇಕು, ಅದರ ಮೂಲಸೌಕರ್ಯ ವಿಸ್ತರಿಸಲು ಬಂಡವಾಳ ಒದಗಿಸಬೇಕು ಎಂಬ ಕೋರಿಕೆಯ ಕುರಿತು ಇದೇ ಸರಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿದೆ. ಅದಕ್ಕೆ ಅಗತ್ಯ ಮೊಬೈಲ್ 3 ಜಿ, 4ಜಿ ಲೈಸೆನ್ಸನ್ನೂ ಸೂಕ್ತ ಸಮಯದಲ್ಲಿ ಕೊಟ್ಟಿಲ್ಲ. ಇವನ್ನು ಜಾರಿ ಮಾಡಲು ಬೇಕಾದ ಉಪಕರಣಗಳ ಖರೀದಿಯನ್ನು ಮಾಡಲು ಅಡೆತಡೆಗಳನ್ನು ಹಾಕುತ್ತಿದೆ.

ಟೆಲಿಕಾಂ ಕ್ಷೇತ್ರದ ಸುಧಾರಣೆಗಳ ಹೆಸರಲ್ಲಿ ಖಾಸಗಿ ಕಂಪನಿಗಳಿಗೆ ಲೈಸೆನ್ಸ್ ನೀಡುವಲ್ಲಿ ಹಗರಣಗಳ ಸರಮಾಲೆಯಿಂದ ಈ ಕ್ಷೇತ್ರ ಬಾಧಿತವಾಗುತ್ತಾ ಬಂದಿದೆ. ಬೆಡ್ ರೂಂ ನಲ್ಲಿ ನೋಟುಗಳ ಸೂಟ್ ಕೇಸುಗಳು ತುಂಬಿದ್ದ ಕುಖ್ಯಾತ 1994ರ 'ಸುಖರಾಂ ಹಗರಣ'ದಿಂದ ಈ ಸರಮಾಲೆ ಆರಂಭವಾಗುತ್ತದೆ. ಇದು ಆಗ ನಡೆದ ಹರಾಜಿನಲ್ಲಿ 'ಪ್ರಕರಣವಾರು' ಲೈಸೆನ್ಸ್'ನೀಡುವ ಹಗರಣದ ಫಲವಾಗಿತ್ತು.

ಇದರ ನಂತರ ವಾಜಪೇಯಿ ಸರಕಾರದ ಅವಧಿಯಲ್ಲಿ 1998ರಲ್ಲಿ ಪ್ರಮೋದ ಮಹಾಜನ್ ಅವರ ಹಗರಣದ ಸರದಿಯಾಗಿತ್ತು. ಅವರ ಹಗರಣವೇ ಇಂದಿನ ದುಸ್ಥಿತಿಯ ಮೂಲ. ಖಾಸಗಿ ಕಂಪನಿಗಳಿಗೆ ಲೈಸೆನ್ಸ್ ಕೊಡುವಾಗ ಮಾಡಿಕೊಂಡ ಒಪ್ಪಂದದಲ್ಲಿ ಇದ್ದ ಲೈಸೆನ್ಸ್ ಫೀ ಪಾವತಿ ಮಾಡದಿದ್ದ ಕಂಪನಿಗಳ ಮೇಲೆ ಕಾರ್ಯಾಚರಣೆಯ ಬದಲು, ಒಪ್ಪಂದವನ್ನೇ ಬದಲಾಯಿಸಲಾಯಿತು. ಲೈಸೆನ್ಸ್ ಶುಲ್ಕದ ಬದಲು ಸೇವೆಯಿಂದ ಬರುವ ಆದಾಯ (ರೆವಿನ್ಯೂ)ದ ಭಾಗವನ್ನು ಹಂಚಿಕೊಳ್ಳಲು ಒಪ್ಪಂದವಾಯಿತು. ಅವು ಟೆಲಿಕಾಂ ಸೇವೆಯಿಂದ ಬರುವ ಆದಾಯ ಎಷ್ಟು ಯಾವುದು ಎಂಬುದರ ಕುರಿತು ವಿವಾದ ಎಬ್ಬಿಸುತ್ತಾ ಕಾಲಹರಣ ಮಾಡಿದವು. ಅದೇ ಸಮಯದಲ್ಲಿ ಬ್ಯಾಂಕುಗಳಿಂದ ಭಾರಿ ಮೊತ್ತದಲ್ಲಿ ಸಾಲ ಮಾಡಿ ಟೆಲಿಕಾಂ ಜಾಲವನ್ನು ವಿಸ್ತರಿಸಿದವು. ಸರಕಾರಕ್ಕೆ ಆದಾಯದ ಭಾಗವನ್ನು ಮುಂದೆ ಮನ್ನಾ ಮಾಡಿಸಿಕೊಳ್ಳಬಹುದು ಎಂದು ಕಂಪನಿಗಳು ಬಹುಶಃ ಆಗ ಲೆಕ್ಕ ಹಾಕಿದ್ದವು ಅಂತ ಕಾಣುತ್ತದೆ. ಬಹುಶಃ ಸರಕಾರದ ಒಂದು ಭಾಗದೊಂದಿಗೆ ಇಂತಹ ಒಳ–ಒಪ್ಪಂದವೂ ಆಗಿರಬಹುದು.



ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು

ಕಳೆದ 15 ವರ್ಷಗಳಲ್ಲಿ ವಿ.ಐ ನಲ್ಲಿ ವಿಲೀನವಾದ ಹಿಂದಿನ ಕಂಪನಿಗಳು 10–15 ವರ್ಷಗಳ ಕಾಲ ಸರಕಾರಕ್ಕೆ ಪಾವತಿ ಮಾಡಬೇಕಾಗಿದ್ದ ಆದಾಯದ ಭಾಗ ಮತ್ತು ಬಾಕಿಯ ಮೇಲಿನ ಬಡ್ಡಿ ಈಗ ದೊಡ್ಡ ಮೊತ್ತವಾಗಿ ಕೂತಿದೆ. ಇದರಲ್ಲಿ ಮುಕ್ಕಾಲು ಭಾಗ ಬಡ್ಡಿಯೇ. ಈ ಅವಧಿಯಲ್ಲಿ ಕಂಪನಿಗಳು ಆದಾಯದ ಲೆಕ್ಕಾಚಾರದ ವಿಧಾನದ, ಬಾಕಿಯ ಮೊತ್ತದ ಪ್ರಮಾಣದ, ಕಂಪನಿ ಇದನ್ನು ಪಾವತಿ ಮಾಡದ ಸ್ಥಿತಿಯ ಕುರಿತು ಸರಕಾರದೊಡನೆ ವಿವಾದ ಎಬ್ಬಿಸುತ್ತಾ, ಅದನ್ನು ಕೋರ್ಟುಗಳಲ್ಲಿ ಚರ್ಚಿಸುತ್ತಾ ಕಾಲಹರಣ ಮಾಡುತ್ತಿದ್ದವು. ಈ ಖಾಸಗಿ ಕಂಪನಿಗಳ ವಾದಗಳನ್ನು ಸುಪ್ರೀಂ ಕೋರ್ಟು ತಳ್ಳಿ ಹಾಕಿ ಈ ಮೊತ್ತವನ್ನು ಒಪ್ಪಂದದ ಪ್ರಕಾರ ಪಾವತಿ ಮಾಡಬೇಕು ಎಂದು 2019ರಲ್ಲಿ ಅಂತಿಮ ತೀರ್ಪು ಕೊಟ್ಟಿತು. ಇದು ಖಾಸಗಿ ಟೆಲಿಕಾಂ ಕಂಪನಿಗಳನ್ನು, ವಿಶೇಷವಾಗಿ ವಿ.ಐ ಕಂಪನಿಯನ್ನು ಬಿಕ್ಕಟ್ಟಿಗೆ ತಳ್ಳಿದೆ.

ಈ ಪರಿಸ್ಥಿತಿ ಈಗ ಸರಕಾರಕ್ಕೆ ಇಕ್ಕಟ್ಟನ್ನು ತಂದಿದೆ. ಖಾಸಗೀಕರಣದ ಮಂತ್ರ ಹಾಡುತ್ತಾ ಬಂದಿರುವ ಎಲ್ಲರೂ (ಮೋದಿ, ಬಿಜೆಪಿ ಮತ್ತು ಇತರ ಎಲ್ಲ ನವ–ಉದಾರವಾದಿ ನೀತಿಗಳ ಬೆಂಬಲಿಗರು) ಹೇಳುತ್ತಿದ್ದದ್ದು "ಸರಕಾರಿ ಕಂಪನಿಗಳು ಅದಕ್ಷತೆ, ಭ್ರಷ್ಟಾಚಾರದ ಕೂಪಗಳಾಗಿ ಬಿಡುತ್ತವೆ, ಸಂಪನ್ಮೂಲಗಳನ್ನು ಪೋಲು ಮಾಡುತ್ತವೆ; ಖಾಸಗಿ ಹೂಡಿಕೆದಾರರು ಕಂಪನಗಳನ್ನು ದಕ್ಷತೆಯಿಂದ ಭ್ರಷ್ಟ–ಮುಕ್ತವಾಗಿ ನಡೆಸುತ್ತಾರೆ, ಸಂಪತ್ತು ಸೃಷ್ಟಿಸುತ್ತಾರೆ" ಹಾಗಾದರೆ ವಿ.ಐ ಮತ್ತು ಈ ಹಿಂದೆ ಹಲವು ಖಾಸಗಿ ಟೆಲಿಕಾಂ ಕಂಪನಿಗಳು (ಇಂತಹ ಹಲವು ಕಂಪನಿಗಳು ವಿಲೀನವಾಗಿಯೇ ವಿ.ಐ ಆಗಿದ್ದು) ದಿವಾಳಿಯಾಗುವ ಸ್ಥಿತಿಗೆ ಬಂದಿದ್ದು ಯಾಕೆ? ಖಾಸಗಿ ಅದಕ್ಷತೆ, ಭ್ರಷ್ಟಾಚಾರಗಳಿಂದಾಗಿ ದಿವಾಳಿಯಾಗುವ ಸ್ಥಿತಿ ಬಂದರೆ ಅವನ್ನು ದಿವಾಳಿಯಾಗಲು ಯಾಕೆ ಬಿಡಬಾರದು? ಅವುಗಳ ಸಂರಕ್ಷಣೆಗೆ ಧಾವಿಸುವುದು ಯಾಕೆ?

ಈಗಿನ ಸರಕಾರ ಮತ್ತು ಹಿಂದಿನ ಸರಕಾರಗಳಿಗೂ ಉದ್ಯಮ, ಅದರ ಗ್ರಾಹಕರ ಸೇವೆಗಳ ದೇಶದ ಹಿತಕ್ಕಿಂತ ದೈತ್ಯ ಉದ್ಯಮಿಗಳ ಹಿತರಕ್ಷಣೆ ಆದ್ಯತೆಯದ್ದು ಎಂಬುದು ಸ್ಪಷ್ಟ. ಆದರೆ ಟೆಲಿಕಾಂ ಕ್ಷೇತ್ರದಲ್ಲಿ ಇನ್ನೂ ಕೆಲವು ಸಮಸ್ಯೆಗಳು ಇವೆ. ವಿ.ಐ ದಿವಾಳಿ ಆದರೆ 27 ಕೋಟಿ ಗ್ರಾಹಕರು ಅತಂತ್ರವಾಗುತ್ತಾರೆ. ಅವರನ್ನು ಒತ್ತೆಯಿಟ್ಟುಕೊಂಡೇ ವಿ.ಐ ಸರಕಾರದೊಂದಿಗೆ ಜೋರಾಗಿ ಚೌಕಾಸಿ ಮಾಡಿದೆ. 'ಸಾಲ ಮನ್ನಾ ಮಾಡಿ, ಇನ್ನಷ್ಟು ಸಾಲ ಕೊಡಿ; ಇಲ್ಲವೆ ಸಾಲವನ್ನು ಶೇರು ಆಗಿ ಬದಲಾಯಿಸಿ, ಇನ್ನಷ್ಟು ಸಾಲ ಕೊಡಿ, ಕಂಪನಿಯನ್ನು ನಮ್ಮ ನಿಯಂತ್ರಣದಲ್ಲಿಡಲು ಬಿಡಿ' ಎಂಬುದು ಚೌಕಾಸಿಯಾಗಿತ್ತು. ಈ ಒತ್ತಡ, ಚೌಕಾಸಿಗಳಿಗೆ ಮಣಿದು ಸರಕಾರ ಎರಡನೆಯ ಒತ್ತಾಯವನ್ನು ಆಯ್ಕೆ ಮಾಡಿದೆ ಎಂಬುದು ಸ್ಪಷ್ಟ.


ಸರಕಾರಕ್ಕೆ ಇನ್ನೊಂದು ಪೇಚಿನ ಪ್ರಶ್ನೆಯಿದೆ. ಉತ್ಕೃಷ್ಟ ಸಂಪರ್ಕ ಜಾಲ ದೇಶದ ಭದ್ರತೆ, ಡಿಜಿಟಲ್ ಆರ್ಥಿಕತೆಯ ಆಧಾರವಾಗಿರುವ ದೃಷ್ಟಿಯಿಂದ ಟೆಲಿಕಾಂ ಆಯಕಟ್ಟಿನ ಕ್ಷೇತ್ರ. ಈ ಕ್ಷೇತ್ರದಲ್ಲಿ ಎರಡು ಕಂಪನಿಗಳ ಏಕಸ್ವಾಮ್ಯ ಸೇವೆಯ ಗುಣಮಟ್ಟ, ಬೆಲೆಗಳ ದೃಷ್ಟಿಯಿಂದ ಒಳ್ಳೆಯದಲ್ಲ. ಮೂರನೆಯ ಕಂಪನಿಯ ಅಗತ್ಯವಿದೆ. ಸರಿ.. ಇದಕ್ಕೆ ಸರಕಾರದ ಬಳಿ ಮೂರು ದಾರಿಗಳಿವೆ. ಒಂದು: ಆ ಮೂರನೆಯ ಕಂಪನಿಯನ್ನು ಸರಕಾರವೇ ಯಾಕೆ ನಡೆಸಬಾರದು? ಅಥವಾ ಎರಡು: ವಿ.ಐ ದಿವಾಳಿಯಾಗಲು ಬಿಟ್ಟು ಅದರ ಜಾಲವನ್ನು ಬಿ.ಎಸ್.ಎನ್.ಎಲ್ ಗೆ ಕೊಟ್ಟು ಅಗತ್ಯ ಬಂಡವಾಳ ಹೂಡಿ ಯಾಕೆ ಬೆಳೆಸಬಾರದು ಅಥವಾ ಮೂರು: ಸರಕಾರ ನಿಯಂತ್ರಣ ಹೊಂದಿರುವ ವಿ.ಐ ಮತ್ತು ಬಿ.ಎಸ್.ಎನ್.ಎಲ್ ಎರಡೂ ಕಂಪನಿಗಳನ್ನು ವಿಲೀನಗೊಳಿಸಿ ಇನ್ನಷ್ಟು ಬಂಡವಾಳ ಹೂಡಿ ಯಾಕೆ ನಡೆಸಬಾರದು? ಇಲ್ಲಿಯೇ ಈ ಸರಕಾರದ, ಪ್ರಧಾನಿ ಮೋದಿ ಅವರ "The Government has no business to be in businessss"(ಯಾವುದೇ ಉದ್ಯಮ ನಡೆಸುವುದು ಸರಕಾರದ ಉಸಾಬರಿಯಲ್ಲ)" ವೆಂಬ ಪವಿತ್ರ ತತ್ವ ಅಡ್ಡ ಬರುತ್ತಿರುವುದು. ಮೇಲೆ ಹೇಳಿದ ಹಾದಿಯನ್ನು ಹಿಡಿದರೆ ಖಾಸಗೀಕರಣದ ಮಂತ್ರ, ನವ–ಉದಾರವಾದಿ ತತ್ವಗಳೆಲ್ಲ (ಈಗಾಗಲೇ ಹಲವಾರು ಬಾರಿ ಖಾಸಗಿ ಕ್ಷೇತ್ರವೇ ಅದಕ್ಷತೆ, ಭ್ರಷ್ಟಾಚಾರದ, ಸಂಪನ್ಮೂಲ ಪೋಲು ಜಗಜ್ಜಾಹೀರಾಗಿದ್ದರೂ) ಬೊಗಳೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಸರಕಾರದ 'ಚಮಚಾ ಬಂಡವಾಳಶಾಹಿ'ಯ ಜತೆ ಶಾಮೀಲಾಗುವ ಗುಣ ಸಹ ಅಡ್ಡಿಯಾಗಿದೆ. ಈಗಿನ ಟೆಲಿಕಾಂ ಕ್ಷೇತ್ರದ ಬಿಕ್ಕಟ್ಟು ಸೃಷ್ಟಿಯಾಗಲು ಇನ್ನೊಂದು ಕಾರಣ ಅಂಬಾನಿ ಅವರ ಜಿಯೊ ಮಾರುಕಟ್ಟೆಯನ್ನು ಪ್ರವೇಶಿಸಿ ಬೆಲೆಗಳ ಯುದ್ಧ ಆರಂಭಿಸಿದ್ದು ಎಂಬುದನ್ನೂ ಮರೆಯುವಂತಿಲ್ಲ. ಏರ್‌ಟೆಲ್ ಮತ್ತು ಜಿಯೊ ಆರ್ಥಿಕ ಸ್ಥಿತಿ ಸಹ ಅಷ್ಟೇನೂ ಚೆನ್ನಾಗಿಲ್ಲ. ಈ ಸನ್ನಿವೇಶದಲ್ಲಿ ಮೇಲಿನ ಮೂರರಲ್ಲಿ ಒಂದು ಹಾದಿ ಹಿಡಿಯಬೇಕು ಎಂದು ಬಿ.ಎಸ್.ಎನ್.ಎಲ್ ಉದ್ಯೋಗಿಗಳು ಒತ್ತಾಯಿಸುತ್ತಿದ್ದಾರೆ. ಇಡೀ ದೇಶ ಅವರ ಜತೆ ದನಿಗೂಡಿಸಬೇಕಾಗಿದೆ. ಪ್ರಧಾನಿ ಮೋದಿ ಅವರು, ಬೊಗಳೆ ಎಂದು ಸಿದ್ಧವಾಗಿರುವ ತಮ್ಮ ಪವಿತ್ರ ತತ್ವ ಮತ್ತು ಮೂಲಭೂತವಾದಿ ನವ–ಉದಾರವಾದಕ್ಕೆ ತಿಲಾಂಜಲಿ ಕೊಡಬೇಕೆಂದು ಒತ್ತಾಯಿಸಬೇಕಾಗಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಬಂಡವಾಳಶಾಹಿಯ ಅಡಿಯಲ್ಲಿ ಹಣಕಾಸು ಮಾರುಕಟ್ಟೆಗಳು

'ಉದ್ಯಮ', 'ಸಟ್ಟಾಬಾಜಿ' ಮತ್ತು ಬ್ಯಾಂಕ್‌ಗಳ ಒಡೆತನ



ಬ್ಯಾಂಕುಗಳ ಪ್ರಭುತ್ವ–ಒಡೆತನವು, ಕೇವಲ ಸಾಂಸ್ಥಿಕ ಸಾಲಗಳು ವ್ಯಾಪಕವಾಗಿ ತಲುಪುವ ಉದ್ದೇಶಕ್ಕೆ ಮಾತ್ರವಲ್ಲ, ಬಂಡವಾಳಶಾಹಿ ಹಣಕಾಸು ವ್ಯವಸ್ಥೆಯ ಸ್ಥಿರತೆಗೂ ಅನುಕೂಲಕರವಾಗಿದೆ. ಆದರೂ ಸಹ ಬ್ಯಾಂಕುಗಳ ಸರಕಾರೀ ಒಡೆತನವನ್ನು ಬಂಡವಾಳಗಾರರು ವಿರೋಧಿಸುತ್ತಾರೆ. ಏಕೆಂದರೆ, ಹೆಚ್ಚಿನ ಲಾಭಾಪೇಕ್ಷಿಗಳಾಗಿರುವ ಬಂಡವಾಳಗಾರರಿಗೆ ವ್ಯವಸ್ಥೆಯ ಸ್ಥಿರತೆಯ ಬಗ್ಗೆ ತಿಳುವಳಿಕೆಯೂ ಇಲ್ಲ; ಕಾಳಜಿಯೂ ಇಲ್ಲ. ನವ–ಉದಾರವಾದವು ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಸರ್ಕಾರದ ಮನವೊಲಿಸುತ್ತಿದೆ. ಅದನ್ನು ಇಲ್ಲಿಯವರೆಗೂ ಪ್ರತಿರೋಧಿಸಲಾಗಿದೆ. ದೇಶದಲ್ಲಿ ಈಗಿರುವ ಸರ್ಕಾರದ ಆರ್ಥಿಕ ವಿಷಯಗಳ ತಿಳುವಳಿಕೆ ಎಷ್ಟು ಅತ್ಯಲ್ಪವಾಗಿದೆ ಎಂದರೆ, ಅಂತಿಮವಾಗಿ ಅವರು ಹೇಳಿದ್ದನ್ನು ಕೇಳುವಂತೆ ಅದರ ಮನವೊಲಿಸಬಹುದು.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಒಂದೊಂದು ತೆರನಾದ ಆರ್ಥಿಕ ವ್ಯವಹಾರಗಳಿಗೂ ಒಂದೊಂದು ಪ್ರತ್ಯೇಕ ಮಾರುಕಟ್ಟೆಯನ್ನು ಹೊಂದಿರುವ ಹಣಕಾಸು ಮಾರುಕಟ್ಟೆಗಳು (ಅಂದರೆ, ಸ್ಟಾಕ್ ಮಾರ್ಕೆಟ್, ಬಾಂಡ್ ಮಾರ್ಕೆಟ್, ಫಾರೆಕ್ಸ್ ಮಾರ್ಕೆಟ್, ಡೆರಿವೆಟೀವ್ಸ್ ಮಾರ್ಕೆಟ್, ಸರಕು ಮಾರ್ಕೆಟ್ ಮುಂತಾದವು) ಕಾರ್ಯ ವಿಧಾನವು ದೋಷಪೂರಿತವಾಗಿದೆ ಎಂಬುದಾಗಿ ಹೆಸರಾಂತ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಹೇಳಿದ್ದರು. ದೋಷಪೂರಿತವಾಗಿದೆ ಏಕೆಂದರೆ, ಈ ಮಾರುಕಟ್ಟೆಗಳು "ಉದ್ಯಮ" (enterprise) ಮತ್ತು "ಸಟ್ಟಾಬಾಜಿ' (speculation) ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ಮೂಲತಃ ಅಸಮರ್ಥವಾಗಿವೆ. ಉದ್ಯಮದ ವಿಷಯದಲ್ಲಿ ಹೇಳುವುದಾದರೆ, ಒಂದು ಆಸ್ತಿಯ ಒಡೆತನವು ಕಾಲಾನಂತರದಲ್ಲಿ ಸತತ ಆದಾಯವನ್ನು ನೀಡುತ್ತದೆ. ಸಟ್ಟಾ ಉದ್ಯಮದ ಆಸ್ತಿಯ ವಿಷಯಕ್ಕೆ ಬಂದರೆ, ಈ ಪಂಗಡದ ಆಸ್ತಿಯು ನೀಡುವ ಇಳುವರಿಯು ಉದ್ಯಮದ ರೀತಿಯಲ್ಲಿ ಇರುವುದಿಲ್ಲ. ಆದರೆ, ಸಟ್ಟಾ ಉದ್ಯಮದ ಆಸ್ತಿಯನ್ನು ನಾಳೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದು ಎಂಬ ನೆಲೆಯಲ್ಲಿ ಅದನ್ನು (ಷೇರು, ಇತ್ಯಾದಿ) ಕೊಳ್ಳಲಾಗುತ್ತದೆ. ಈ ಆಸ್ತಿಯನ್ನು ಕೊಂಡಾತನು ಅದನ್ನು ಮರುದಿನ ಇನ್ನೂ ಹೆಚ್ಚಿನ ಬೆಲೆಯಲ್ಲಿ ಮತ್ತೊಬ್ಬನಿಗೆ ಮಾರಾಟ ಮಾಡಬಹುದು ಎಂದು ನಂಬುತ್ತಾನೆ.

ಸಟ್ಟಾ ವ್ಯಾಪಾರಿಗಳು (speculators) ಆಸ್ತಿ ಮಾರುಕಟ್ಟೆಗಳಲ್ಲಿ ಈ ರೀತಿಯ ಅಸ್ತಿತ್ವ ಹೊಂದಿರುವವರೆಗೂ ಇಂತಹ ಆಸ್ತಿಯ ಬೆಲೆಯು ಅದರ "ನಿಜವಾದ ಮೌಲ್ಯ"ವನ್ನು ಬಿಂಬಿಸುವುದಿಲ್ಲ. ಅಂದರೆ, ಅದರ ಇಂದಿನ ಬೆಲೆಯು ಅದು ಭವಿಷ್ಯದಲ್ಲಿ ಕೊಡಬಹುದಾದ ಆದಾಯವನ್ನು ಮುಂಗಡವಾಗಿ ಕೊಟ್ಟದ್ದಕ್ಕಾಗಿ ದೊರಕುವ ಒಂದು ರಿಯಾಯ್ತಿಯ ಬೆಲೆಯಾಗುತ್ತದೆ. ಈ ರೀತಿಯ ಗುಣಲಕ್ಷಣಗಳ ವ್ಯತ್ಯಾಸದಿಂದಾಗಿ, ಈ ಸಂಪನ್ಮೂಲಗಳನ್ನು ಹೂಡಿಕೆಗಾಗಿ ಪಡೆಯುವ ಹಣಕಾಸು ಮಾರುಕಟ್ಟೆಗಳು ಈ ಸಂಬಂಧವಾಗಿ ಮಾಡುವ ಲೆಕ್ಕಾಚಾರಗಳು ಯಾವತ್ತೂ ತಪ್ಪಾಗಿಯೇ ಇರುತ್ತವೆ. ಈ ಸಂಪನ್ಮೂಲಗಳನ್ನು ಯಾವ ಯಾವ ಪ್ರಮಾಣದಲ್ಲಿ ವಿತರಿಸಿ ಅವುಗಳನ್ನು ಬೇರೆ ಬೇರೆ ಸ್ವತ್ತುಗಳ ಮೇಲೆ ಹೂಡಿಕೆ ಮಾಡಬಹುದು ಎಂಬ ತರ್ಕದ–ತೀರ್ಮಾನಗಳ ಹೊರತಾಗಿಯೂ, ಒಟ್ಟು ಹೂಡಿಕೆಯಾದ ಸಂಪನ್ಮೂಲಗಳನ್ನು ಹೂಡಿಕೆಗೆ ಲಭ್ಯವಿರುವ ಸಂಪನ್ಮೂಲಗಳಿಗೆ ಹೋಲಿಸಿದರೆ, ಹೂಡಿಕೆಯಾದ ಒಟ್ಟು ಮೊತ್ತವು ಹಲವು ಬಾರಿ ಅತಿ ಕೆಳ ಮಟ್ಟದಲ್ಲಿಯೂ ಮತ್ತು ಕೆಲವೊಮ್ಮೆ ಅತಿ ಹೆಚ್ಚಿನ ಮಟ್ಟದಲ್ಲಿಯೂ ಇರುತ್ತದೆ. ಅತಿ ಹೆಚ್ಚಿನ ಮಟ್ಟದ ಹೂಡಿಕೆ ಸಂಭವಿಸಿದಾಗ ಹಣದುಬ್ಬರದ ಪರಿಸ್ಥಿತಿ ಉಂಟಾಗುತ್ತದೆ ಮತ್ತು ಅತಿ ಕೆಳ ಮಟ್ಟದ ಹೂಡಿಕೆಯಾದಾಗ, ಸಾಮಾನ್ಯವಾಗಿ ಘಟಿಸುವುದು ಇದುವೇ, ನಿರುದ್ಯೋಗದ ಪ್ರಮಾಣ ಹೆಚ್ಚುತ್ತದೆ (ಇದನ್ನು "ಅತಿಉತ್ಪಾದನೆ" ಬಿಕ್ಕಟ್ಟು ಎಂದು ಮಾರ್ಕ್ಸ್ ಕರೆದಿದ್ದರು).

ಹಾಗಾಗಿ, ಸಂಪನ್ಮೂಲಗಳ ಹೂಡಿಕೆಯ ಪ್ರಮಾಣ, ಯಾವ ಯಾವ ರೀತಿಯ ಆಸ್ತಿಗಳ ಮೇಲೆ ಎಷ್ಟೆಷ್ಟು ಹೂಡಿಕೆಯಾಗಬೇಕು ಮತ್ತು ಹೂಡಿಕೆಯಾದ ಹಣ ಯಾವಾಗ "ಕೈಗೂಡುತ್ತದೆ" ಎಂಬ ವಿತರಣೆಯ ಅಂಶಗಳನ್ನು ಹಣಕಾಸು ಮಾರುಕಟ್ಟೆಗಳ ವಿವೇಚನೆಗೆ ಬಿಡಲಾಗದು. ಏಕೆಂದರೆ, ಅದರಿಂದ ಉದ್ಭವವಾಗುವ ನಿರುದ್ಯೋಗದ ಪ್ರಮಾಣವನ್ನು ಜನರು ಸಹಿಸುವುದಿಲ್ಲ. ಆಗ ಈ ಬಂಡವಾಳಶಾಹಿ ವ್ಯವಸ್ಥೆಯ ಉಳಿವಿಗೇ ಸಂಚಕಾರ ಬರುತ್ತದೆ (ವ್ಯವಸ್ಥೆಯ ಉಳಿವನ್ನು ಖಚಿತಪಡಿಸಿಕೊಳ್ಳಲು ಸ್ವತಃ ಕೀನ್ಸ್ ಉತ್ಸುಕರಾಗಿದ್ದರು). ಆದ್ದರಿಂದ, ಈ ವಿವೇಚನಾ ಜವಾಬ್ದಾರಿಯನ್ನು ಪ್ರಭುತ್ವವೇ ವಹಿಸಿಕೊಳ್ಳಬೇಕು ಎಂದು ಕೀನ್ಸ್ ವಾದಿಸಿದರು ಮತ್ತು ಈ ಪ್ರಕ್ರಿಯೆಯನ್ನು ಅವರು "ಹೂಡಿಕೆಯ ಸಮಾಜೀಕರಣ" ಎಂದು ಕರೆದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಶಾಹಿಯು ತನ್ನ ಉಳಿವಿಗಾಗಿ ಹೂಡಿಕೆಯ ಸಮಾಜೀಕರಣದ ಮೊರೆ ಹೊಕ್ಕಿತು. ಅಂದರೆ, ವ್ಯವಸ್ಥೆಯನ್ನು ಯಾವಾಗಲೂ ಪೂರ್ಣ ಉದ್ಯೋಗ ಸ್ಥಿತಿಗೆ ಹತ್ತಿರವಾಗಿರಿಸುವ ನೀತಿಗಳನ್ನು ಪ್ರಭುತ್ವವು ಅನ್ವೇಷಿಸಬೇಕಾಗುತ್ತದೆ.

ಹಾಗಾಗಿ, ನಿರುದ್ಯೋಗ ತಲೆದೋರಿದಾಗ ಮಾತ್ರ ಪ್ರಭುತ್ವವು ಹಣಕಾಸು ಮಾರುಕಟ್ಟೆಗಳಲ್ಲಿ ಕಾಲಿಡಬೇಕು ಎಂದಲ್ಲ. ಸಟ್ಟಾ–ಬಾಜಿ ಸಂವೃದ್ಧಿಯ ಕಾಲದಲ್ಲಿ ವ್ಯವಸ್ಥೆಯು ಉನ್ನತ ಮಟ್ಟದ ಉದ್ಯೋಗ ಪರಿಸ್ಥಿತಿಯನ್ನು ತಲುಪಿದ ಸುಖಭ್ರಾಂತಿಯಲ್ಲಿದ್ದಾಗ ಪ್ರಭುತ್ವವು ಹಣಕಾಸು ಮಾರುಕಟ್ಟೆಗಳಲ್ಲಿ ಕಾಲಿಡಬಾರದು ಮತ್ತು ಅಂತಹ ಸುಖಭ್ರಾಂತಿ ಕುಸಿದಾಗ ಮಾತ್ರ ಹಸ್ತಕ್ಷೇಪದ ಅಗತ್ಯವಿರುತ್ತದೆ ಎನ್ನುವಂತಿಲ್ಲ. ಅಂದರೆ, ಹಣಕಾಸು ಮಾರುಕಟ್ಟೆಗಳಲ್ಲಿ ಪ್ರಭುತ್ವವು ಮಾರುಕಟ್ಟೆಗಳ ಏರಿಳಿತಗಳಿಗೆ ತಕ್ಕಂತೆ ಕುಣಿಯುವುದನ್ನು ಬಿಟ್ಟು, ಪೂರ್ಣ ಉದ್ಯೋಗವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಒಂದು ಶಾಶ್ವತ ಅಥವಾ ತಾಳಿಕೆ–ಬಾಳಿಕೆಯ ಪಾತ್ರವನ್ನು ನಿರ್ವಹಿಸಬೇಕು. ಅಂದರೆ, ಪ್ರಭುತ್ವವು ಹಣಕಾಸು ಮಾರುಕಟ್ಟೆಗಳನ್ನು ನಿಯಂತ್ರಿಸಬೇಕು.

ಹಣಕಾಸು ಮಾರುಕಟ್ಟೆಗಳನ್ನು ನಿಯಂತ್ರಿಸುವ ಅತ್ಯಂತ ಸ್ಪಷ್ಟ ಮಾರ್ಗವೆಂದರೆ ಅದರಲ್ಲಿ ಭಾಗವಹಿಸುವವರ ಕಾರ್ಯ–ವಿಧಾನಗಳ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸುವುದು. ಉದಾಹರಣೆಗೆ, ಹಣಕಾಸು ಸಂಸ್ಥೆಗಳು ಸಟ್ಟಾ–ಬಾಜಿ ವ್ಯವಹಾರಗಳಲ್ಲಿ ಭಾಗವಹಿಸಬಹುದೇ ಅಥವಾ ಇಲ್ಲವೇ, ಅಥವಾ ಹಣಕಾಸು ಸಂಸ್ಥೆಗಳು ಸಟ್ಟಾ–ಬಾಜಿ ವ್ಯವಹಾರಗಳಿಗೆ ಸಾಲ ಕೊಡಬಹುದೇ ಅಥವಾ ಇಲ್ಲವೇ ಎಂಬುದನ್ನು ನಿಯಂತ್ರಿಸುವುದು. ಅಂತೆಯೇ, ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಅವರ 'ನ್ಯೂ ಡೀಲ್' ಯೋಜನೆಯ ಸಮಯದಲ್ಲಿ ಅಮೆರಿಕದಲ್ಲಿ, ಗ್ಲಾಸ್–ಸ್ಟೀಗಲ್ ಕಾಯ್ದೆಯನ್ನು ಅಂಗೀಕರಿಸಲಾಯಿತು. ಈ ಕಾಯ್ದೆಯು ವಾಣಿಜ್ಯ ಬ್ಯಾಂಕಿಂಗ್ ಮತ್ತು ಹೂಡಿಕೆ ಬ್ಯಾಂಕಿಂಗ್ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿತು ಮತ್ತು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುವ ವಾಣಿಜ್ಯ ಬ್ಯಾಂಕುಗಳು ಸಟ್ಟಾ–ಬಾಜಿ ವ್ಯವಹಾರಗಳಲ್ಲಿ ತೊಡಗದಂತೆ ನಿರ್ಬಂಧಿಸಿತು. ಬಿಲ್ ಕ್ಲಿಂಟನ್ ಆಡಳಿತದ ಅವಧಿಯಲ್ಲಿ ಈ ಶಾಸನವನ್ನು ಹಿಂತೆಗೆದುಕೊಳ್ಳಲಾಯಿತು. ವಾಣಿಜ್ಯ ಬ್ಯಾಂಕಿಂಗ್ ಮತ್ತು ಹೂಡಿಕೆ ಬ್ಯಾಂಕಿಂಗ್ ಇವುಗಳ ನಡುವೆ ಇದ್ದ ವ್ಯತ್ಯಾಸವನ್ನು ಮತ್ತೊಮ್ಮೆ ಅಳಿಸಿಹಾಕಲಾಯಿತು. ಈ ಕ್ರಮದ ಮೂಲಕ ಅಮೆರಿಕದಲ್ಲಿ ದೊಡ್ಡ ಆಸ್ತಿ–ಬೆಲೆ ಗುಳ್ಳೆಗಳನ್ನು ಎಬ್ಬಿಸಿ ಅರ್ಥವ್ಯವಸ್ಥೆಯ ಉತ್ಕರ್ಷವನ್ನು ಉಳಿಸಿಕೊಳ್ಳಲಾಯಿತು ಮತ್ತು ಈ ವಿದ್ಯಮಾನವು ವಿಶ್ವದ ಅರ್ಥವ್ಯವಸ್ಥೆಯನ್ನೇ ಆವರಿಸಿತು. ಆದರೆ, ಅದೇ ರೀತಿಯಲ್ಲಿ, ಅಮೆರಿಕದಲ್ಲಿ ವಸತಿ "ಗುಳ್ಳೆ"ಯ ಸಿಡಿತವು ಅಮೆರಿಕದ ಮತ್ತು ವಿಶ್ವದ ಅರ್ಥವ್ಯವಸ್ಥೆಯನ್ನು ಹೆಚ್ಚಿನ ಮಟ್ಟದ ನಿರುದ್ಯೋಗಕ್ಕೆ ತಳ್ಳಿತು. ಈ ವಿದ್ಯಮಾನವೂ ಸಹ, ಕೊರೊನಾ ಸಾಂಕ್ರಾಮಿಕವು ಹರಡುವ ಮೊದಲೇ ಘಟಿಸಿತು.


ಸಟ್ಟಾ–ಬಾಜಿ ಹೂಡಿಕೆ ಉದ್ದೀಪಿತ ಆರ್ಥಿಕ ಉತ್ಕರ್ಷದ ಅಂತ್ಯಕ್ಕೆ ಕಾರಣವಾದ ಸಮಸ್ಯೆಯಿಂದಾಗಿ ಕುಸಿತಕ್ಕೊಳಗಾದದ್ದು ಅಮೆರಿಕದ ನಿಜ ಅರ್ಥವ್ಯವಸ್ಥೆ (ಉತ್ಪಾದನೆ, ಸೇವೆಗಳು ಇತ್ಯಾದಿ) ಮಾತ್ರವಲ್ಲ, ಅದಕ್ಕಿಂತಲೂ ಅಗಾಧವಾಗಿ ಹಣಕಾಸು ಅರ್ಥವ್ಯವಸ್ಥೆಯು ಕುಸಿದು ಬಿತ್ತು. ವಸತಿ ಗುಳ್ಳೆಯ ಅಂತ್ಯದ ನಂತರದ ಕುಸಿತದಿಂದ ಅಮೆರಿಕದ \$13 ಟ್ರಿಲಿಯನ್ ಅರ್ಥವ್ಯವಸ್ಥೆಯನ್ನು ಅಧ್ಯಕ್ಷ ಒಬಾಮಾ ಆಡಳಿತವು ರಕ್ಷಿಸಬೇಕಾಗಿ ಬಂತು. ವಾಸ್ತವವಾಗಿ, ಬಂಡವಾಳಶಾಹಿಯ ಅಡಿಯಲ್ಲಿ ಹಣಕಾಸು ಮಾರುಕಟ್ಟೆಗಳ ದೋಷಗಳಲ್ಲಿ ಒಂದೆಂದರೆ, ಉದ್ಯೋಗದ ಮಟ್ಟವು ಸಟ್ಟಾ–ಬಾಜಿದಾರ ಗುಂಪಿನ ತಿಕ್ಕಲುತನದ ಭಾವನೆಗಳ ಮೇಲೆ ನಿರ್ಧರಿಸಲ್ಪಡುತ್ತದೆ ಮಾತ್ರವಲ್ಲ, ಹಣಕಾಸು ಸಂಸ್ಥೆಗಳ ಬದುಕುಳಿಯುವ ಶಕ್ತಿಯೇ ಅಂತಹ ತಿಕ್ಕಲುತನದ ಭಾವನೆಗಳ ಮೇಲೆ ನಿಂತಿರುತ್ತದೆ. ಹಾಗಾಗಿ, ಪ್ರಭುತ್ವದ ನೇರ ಹಸ್ತಕ್ಷೇಪದ ಮೂಲಕ ಪ್ರಮುಖ ಹಣಕಾಸು ಸಂಸ್ಥೆಗಳು ಸಟ್ಟಾ–ಬಾಜಿ ವ್ಯವಹಾರ/ಚಟುವಟಿಕೆಗಳಲ್ಲಿ ತೊಡಗದಂತೆ ತಡೆಯುವುದು ಅತ್ಯವಶ್ಯವಾಗುತ್ತದೆ.


ಸಟ್ಟಾ–ಬಾಜಿ ಚಟುವಟಿಕೆಗಳಲ್ಲಿ ತೊಡಗದಂತೆ ಖಚಿತಪಡಿಸಿಕೊಳ್ಳುವ ಉತ್ತಮ ಮಾರ್ಗವೆಂದರೆ ಈ ಹಣಕಾಸು ಸಂಸ್ಥೆಗಳನ್ನು ಪ್ರಭುತ್ವದ ಒಡೆತನಕ್ಕೆ ಒಳಪಡಿಸುವುದು. ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ವ್ಯಾಪಕ ಸಟ್ಟಾ–ಬಾಜಿ ವ್ಯವಹಾರಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿಕೊಂಡು ಬಿಕ್ಕಟ್ಟಿಗೆ ಸಿಲುಕಿದ ಹಣಕಾಸು ಸಂಸ್ಥೆಗಳನ್ನು ಮುಂದುವರಿದ ಬಂಡವಾಳಶಾಹಿ ಸರ್ಕಾರಗಳು ಸಾರ್ವಜನಿಕ ಹಣವನ್ನು ಬಳಸಿಕೊಂಡು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ, ಈ ಸಂಸ್ಥೆಗಳನ್ನು ಅವುಗಳ ಹಳೆಯ ಆಡಳಿತ ಮಂಡಳಿಗಳಿಗೆ ಹಿಂತಿರುಗಿಸಬಾರದು ಮತ್ತು ಅವುಗಳನ್ನು ಪ್ರಭುತ್ವದ ಒಡೆತನಕ್ಕೆ ತೆಗೆದುಕೊಳ್ಳಬೇಕು ಎಂಬ ಸಾರ್ವಜನಿಕ ಬೇಡಿಕೆಯು ಬಲವಾಗಿತ್ತು. ಮುಳುಗಲಿದ್ದ ಹಣಕಾಸು ಸಂಸ್ಥೆಗಳಿಗೆ ಅಮೆರಿಕದ ಸರ್ಕಾರವು ಪಾರು–ಯೋಜನೆಯಡಿಯಲ್ಲಿ ನೀಡಿದ ನೆರವಿನ ದೊಡ್ಡ ಭಾಗವನ್ನು ಈ ಸಂಸ್ಥೆಗಳ ವ್ಯವಸ್ಥಾಪಕರುಗಳು ತಮ್ಮ ಸಂಬಳ, ಬೋನಸ್ ಮತ್ತು ಕೆಲವು ಅನುಕೂಲಗಳ ರೂಪದಲ್ಲಿ ನುಂಗಿ ನೀರು ಕುಡಿದರು. ಕಾನೂನಿನ ಅಡೆತಡೆಗಳು ಎಷ್ಟೇ ಪ್ರಬಲವಾಗಿರಲಿ, ಈ ಸಂಸ್ಥೆಗಳು ಒಂದಲ್ಲಾ ಒಂದು ರೀತಿಯ ಸಟ್ಟಾ–ಬಾಜಿ ಚಟುವಟಿಕೆಗಳಲ್ಲಿ ತೊಡಗುತ್ತವೆ. ಹಾಗಾಗಿ, ಪ್ರಭುತ್ವದ ಒಡೆತನವು ಈ ಹಣಕಾಸು ಸಂಸ್ಥೆಗಳ ಕಾರ್ಯಾಚರಣೆಯು ಕೇವಲ ಗರಿಷ್ಠ ಲಾಭ ಗಳಿಕೆಯನ್ನಷ್ಟೇ ಅಲ್ಲ, ಆರ್ಥಿಕ ಸಂಪನ್ಮೂಲಗಳ ವಿವೇಕಯುತ ಮತ್ತು ಸುರಕ್ಷಿತ ಹೂಡಿಕೆಯನ್ನೂ ಖಾತ್ರಿಪಡಿಸುತ್ತದೆ. ಮುಖ್ಯವಾಗಿ ಹೇಳಲೇಬೇಕಾದ ವಿಷಯವೆಂದರೆ, ಅಮೆರಿಕದಲ್ಲಿ ವಸತಿ ಗುಳ್ಳೆ ಒಡೆದಾಗ, ಭಾರತದಂತಹ ದೇಶದ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಯಾವುದೇ ಡೆರಿವೆಟೀವ್‌ಗಳನ್ನು("ನಂಜಿನ" ಸ್ವತ್ತುಗಳನ್ನು) ಕೊಂಡಿರಲಿಲ್ಲ ಎಂಬುದು ಒಂದು ಆಕಸ್ಮಿಕವಲ್ಲ. ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್ ಮಾತ್ರ ಅಲ್ಪ ಪ್ರಮಾಣದ ಈ "ನಂಜಿನ" ಸ್ವತ್ತುಗಳನ್ನು ಹೊಂದಿತ್ತು.

ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ, ನಿಜ ಅರ್ಥವ್ಯವಸ್ಥೆಯ (ಉತ್ಪಾದನೆ, ಸೇವೆಗಳು ಇತ್ಯಾದಿ) ಮತ್ತು ಹಣಕಾಸು ಅರ್ಥವ್ಯವಸ್ಥೆಯ ಕುಸಿತವನ್ನು ತಡೆಯುವುದು ಬ್ಯಾಂಕುಗಳ ಒಡೆತನವು ಪ್ರಭುತ್ವದ ಬಳಿ ಇದ್ದಾಗ ಮಾತ್ರ ಸಾಧ್ಯ ಎಂಬುದು ಗೊತ್ತಿದ್ದರೂ ಸಹ ಬ್ಯಾಂಕುಗಳ ಪ್ರಭುತ್ವ–ಒಡೆತನವನ್ನು ಬಂಡವಾಳಗಾರರು ವಿರೋಧಿಸುತ್ತಾರೆ. ಏಕೆಂದರೆ, ಬಂಡವಾಳಶಾಹಿಯು ಒಂದು ಯೋಜಿತವಲ್ಲದ ವ್ಯವಸ್ಥೆಯಾಗಿದ್ದು, ಸ್ವತಃ ಹೆಚ್ಚಿನ ಲಾಭಾಪೇಕ್ಷಿಗಳಾಗಿರುವ ಬಂಡವಾಳಗಾರರಿಗೆ ವ್ಯವಸ್ಥೆಯ ಸ್ಥಿರತೆಯ ಬಗ್ಗೆ ತಿಳುವಳಿಕೆಯೂ ಇಲ್ಲ; ಕಾಳಜಿಯೂ ಇಲ್ಲ. ಒಂದು ವೇಳೆ ಬಂಡವಾಳಶಾಹಿಯು ಅಂತಹ ಯೋಜಿತವಲ್ಲದ ವ್ಯವಸ್ಥೆಯಾಗದಿದ್ದರೆ, ಅದು ಐತಿಹಾಸಿಕವಾಗಿ ಶಾಶ್ವತವಲ್ಲದ ಸ್ಥಿತಿಯಲ್ಲೇ ಇರುತ್ತಿರಲಿಲ್ಲ. ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಸಹಾನುಭೂತಿ ಹೊಂದಿರುವ ಸರ್ಕಾರವೂ ಸಹ, ಬ್ಯಾಂಕುಗಳ ಪ್ರಭುತ್ವ–ಒಡೆತನಕ್ಕೆ ಬಂಡವಾಳಗಾರರ ಪ್ರತಿರೋಧವನ್ನು ಜಯಿಸಲು ಸಾಧ್ಯವಿಲ್ಲ.

ಆದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗಿ ಬಂಡವಾಳಶಾಹಿಗಳಿಗೆ ಹಸ್ತಾಂತರಿಸಲು ಯೋಜಿಸುತ್ತಿರುವ ಸರ್ಕಾರದ ಬುದ್ಧಿಹೀನತೆಯನ್ನು ಊಹಿಸಿಕೊಳ್ಳಿ. ಇದು ಹಣಕಾಸು ವ್ಯವಸ್ಥೆಯನ್ನು ಕುಸಿತದ ಅಪಾಯಕ್ಕೆ







ಪುಟ 14 ನೋಡಿ

...ಬ್ಯಾಂಕ್‌ಗಳ ಒಡೆತನ

ಪುಟ 13 ರಿಂದ

ಒಡ್ಡುವ ಕ್ರಮವಾಗುತ್ತದೆ. ಅಯ್ಯೋ! ಭಾರತ ಸರ್ಕಾರವೇ! ನಮ್ಮ ಹಣಕಾಸು ವ್ಯವಸ್ಥೆಯ ಸ್ಥಿರತೆಯು ಬಹುತೇಕ ಬ್ಯಾಂಕುಗಳ ಪ್ರಭುತ್ವ–ಒಡೆತನ ಕಾರಣದ ಮೇಲೆ ನಿಂತಿದೆ. ಈ ಬ್ಯಾಂಕುಗಳ ಠೇವಣಿದಾರರು ತಮ್ಮ ಠೇವಣಿಯ ಸುರಕ್ಷತೆಯ ಬಗ್ಗೆ ನಿಶ್ಚಿಂತರಾಗಿದ್ದಾರೆ. ಸರ್ಕಾರಿ ಸ್ವಾಮ್ಯದಲ್ಲಿರುವ ಕಾರಣದಿಂದಾಗಿಯೇ ಈ ಬ್ಯಾಂಕುಗಳು ಮುಳುಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಾಗಿ, ಠೇವಣಿದಾರರು ನಿಶ್ಚಿಂತರಾಗಿದ್ದಾರೆ. ಈ ಪರಿಸ್ಥಿತಿಯು ವಸಾಹತುಶಾಹಿ ಅವಧಿಗೂ ಮತ್ತು ಸ್ವತಂತ್ರ ಭಾರತದ ರಾಷ್ಟ್ರೀಕರಣ–ಪೂರ್ವ ಅವಧಿಗೂ ವ್ಯತಿರಿಕ್ತವಾಗಿದೆ. ಆಗ, ಬ್ಯಾಂಕ್ ವೈಫಲ್ಯದ/ಮುಳುಗಡೆಯ ಭಯ ಎಷ್ಟು ವ್ಯಾಪಕವಾಗಿತ್ತು ಎಂದರೆ ಜನರು ತಮ್ಮ ಹಣವನ್ನು ಕರೆನ್ಸಿ ನೋಟುಗಳ ರೂಪದಲ್ಲಿ ಹಾಸಿಗೆಗಳ ಕೆಳಗೆ ಅಡಗಿಸಿಟ್ಟುಕೊಳ್ಳುತ್ತಿದ್ದರು ಅಥವಾ ಚಿನ್ನದ ಆಭರಣಗಳ ರೂಪದಲ್ಲಿ ಅಥವಾ ಭೂಮಿಯ ರೂಪದಲ್ಲಿ ಹಿಡಿದಿಟ್ಟುಕೊಳ್ಳಲು ಆದ್ಯತೆ ನೀಡುತ್ತಿದ್ದರು. ರಾಷ್ಟ್ರೀಕರಣದ ನಂತರವೇ ಅವರ ಆಸ್ತಿ ಹಿಡಿದಿಟ್ಟುಕೊಳ್ಳುವ ಆದ್ಯತೆಯು ಅಂತಿಮವಾಗಿ ಬ್ಯಾಂಕ್ ಠೇವಣಿಗಳ ಪರವಾಗಿ ಬದಲಾವಣೆಯಾಯ್ತು. ಅಗಾಧ ಪ್ರಮಾಣದ ಈ ಬ್ಯಾಂಕ್ ಠೇವಣಿಗಳು ನೇರ ಅಥವಾ ಪರೋಕ್ಷ ಮಧ್ಯಸ್ಥಿಕೆಯ ಮೂಲಕ ಹೂಡಿಕೆಯ ಸಂಪನ್ಮೂಲಗಳಾಗಿ ದೇಶದ ಅಭಿವೃದ್ಧಿಯಲ್ಲಿ ನೆರವಾಗಿವೆ.

ಭಾರತ ಸರ್ಕಾರವು ಗಡಿಯಾರದ ಮುಳ್ಳನ್ನು ಆ ಹಿಂದಿನ ಕಾಲಕ್ಕೆ ತಳ್ಳಲು ಬಯಸುತ್ತದೆ. ಇಂದಿನ ಹಣಕಾಸು ವ್ಯವಸ್ಥೆಯು ವಸಾಹತುಶಾಹಿ ಅವಧಿಗಿಂತ ಭಿನ್ನವಾಗಿದೆ ಎಂದು ಸೋಗುಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ. “ಉದ್ಯಮ” ಮತ್ತು “ಸಟ್ಟಾ ಬಾಜಿ” ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲು ಕಾನೂನುಬದ್ಧವಾಗಿ ಒತ್ತಾಯಿಸದ ಎಲ್ಲಾ ಲಾಭ–ಅರಸುವ ಹಣಕಾಸು ವ್ಯವಸ್ಥೆಗಳೂ ಸಮಾನವಾಗಿ ಹಾನಿಗೀಡಾಗುತ್ತವೆ. ಅದನ್ನು ತಪ್ಪಿಸಲು ಕಾನೂನು ಬಲವೂ ಸಾಕಾಗುವುದಿಲ್ಲ.

ಭಾರತದಲ್ಲಿ ಬ್ಯಾಂಕ್ ರಾಷ್ಟ್ರೀಕರಣವು ಒಂದು ವಿಭಿನ್ನವಾದ ಮತ್ತು ತಕ್ಷಣದ ಒತ್ತಡವನ್ನು ಎದುರಿಸುವ ಉದ್ದೇಶವನ್ನು ಹೊಂದಿತ್ತು. ಅರ್ಥವ್ಯವಸ್ಥೆಯ ಬೆಳವಣಿಗೆ ಅತ್ಯಗತ್ಯವಾಗಿದ್ದ ವಲಯಗಳಿಗೆ ಮತ್ತು ಅಲ್ಲಿಯವರೆಗೆ ನಿರ್ಲಕ್ಷಿಸಲ್ಪಟ್ಟಿದ್ದ ರೈತ ಕೃಷಿಯಂತಹ ವಲಯಗಳಿಗೆ ಸಾಂಸ್ಥಿಕ ಸಾಲವನ್ನು ಹರಿಸುವುದು ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶವಾಗಿತ್ತು. ಈ ವಲಯಗಳಿಗೆ ಕೊಡುವ ಸಾಲಗಳ ಮೇಲೆ ವಿಧಿಸುವ ಬಡ್ಡಿದರಗಳನ್ನು ಕೆಳ ಮಟ್ಟದಲ್ಲಿ ಇಡಲಾಗಿತ್ತು. ಒಟ್ಟು ಸಾಲದ ಒಂದು ನಿರ್ದಿಷ್ಟ ಪಾಲನ್ನು ಈ ವಲಯಗಳು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು “ಆದ್ಯತಾ ವಲಯದ ನಿಯಮಗಳು” ಇದ್ದವು. ವಿವಿಧ ರೈತ ವರ್ಗಗಳ ನಡುವೆ ಸಾಂಸ್ಥಿಕ ಸಾಲಗಳ ಹಂಚಿಕೆಯು ಅಸಮಾನವಾಗಿದ್ದರೂ ಸಹ, ಬ್ಯಾಂಕ್ ರಾಷ್ಟ್ರೀಕರಣವಿಲ್ಲದೆ ಹಸಿರು ಕ್ರಾಂತಿ ಸಂಭವಿಸುವುದು ಸಾಧ್ಯವಿರಲಿಲ್ಲ. ಹಸಿರು ಕ್ರಾಂತಿಯು ಪರಿಸರದ ಮೇಲೆ ಬೀರಿದ ಪರಿಣಾಮದ ಬಗ್ಗೆ ಎಷ್ಟೇ ವಿಮರ್ಶಾತ್ಮಕವಾಗಿ ನೋಡಿದರೂ ಸಹ, ಅದು ದೇಶವನ್ನು ಮೆಟ್ರೊಪಾಲಿಟನ್ ದೇಶಗಳ “ಆಹಾರ ಸಾಮ್ರಾಜ್ಯಶಾಹಿ”ಯಿಂದ ಮುಕ್ತಗೊಳಿಸಿತು ಎಂಬದನ್ನು ನಿರಾಕರಿಸುವಂತಿಲ್ಲ. ನವ–ಉದಾರವಾದವು ರಾಷ್ಟ್ರೀಕರಣವನ್ನು ರದ್ದುಪಡಿಸುವಂತೆ ಮತ್ತು ಬ್ಯಾಂಕಿಂಗ್ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಸರ್ಕಾರದ ಮನವೊಲಿಸುತ್ತಿದೆ. ಅದನ್ನು ಇಲ್ಲಿಯವರೆಗೂ ಪ್ರತಿರೋಧಿಸಲಾಗಿದೆ. ದೇಶದಲ್ಲಿ ಈಗಿರುವ ಸರ್ಕಾರದ ಆರ್ಥಿಕ ವಿಷಯಗಳ ತಿಳುವಳಿಕೆ ಎಷ್ಟು ಅತ್ಯಲ್ಪವಾಗಿದೆ ಎಂದರೆ, ಅಂತಿಮವಾಗಿ ಅವರು ಹೇಳಿದ್ದನ್ನು ಕೇಳುವಂತೆ ಅದರ ಮನವೊಲಿಸಬಹುದು.

ಆದಾಗ್ಯೂ, ವಿಷಯವೆಂದರೆ: ಬ್ಯಾಂಕುಗಳ ಪ್ರಭುತ್ವ–ಒಡೆತನವು, ಕೇವಲ ಸಾಂಸ್ಥಿಕ ಸಾಲಗಳು ವ್ಯಾಪಕವಾಗಿ ತಲುಪುವ ಉದ್ದೇಶಕ್ಕೆ ಮಾತ್ರವಲ್ಲ, ಬಂಡವಾಳಶಾಹಿ ಹಣಕಾಸು ವ್ಯವಸ್ಥೆಯ ಸ್ಥಿರತೆಗೂ ಅನುಕೂಲಕರವಾಗಿದೆ.

ಜಿಂದಾಲ್ ಕಂಪನಿ ವಿರುದ್ಧ ಪ್ರತಿಭಟಿಸಿದ ರೈತರ ಮೇಲೆ ಪೊಲೀಸ್ ಲಾಠಿಚಾರ್ಜ್

ರೈತರು ತಮ್ಮ ಭೂಮಿ ಮತ್ತು ವೀಳ್ಯದೆಲೆ ತೋಟವನ್ನು ಉಳಿಸಿಕೊಳ್ಳವುದಕ್ಕಾಗಿ ಜಿಂದಾಲ್ ಸ್ಟೀಲ್ ವರ್ಕ್(ಜೆಎಸ್‌ಡಬ್ಲ್ಯು) ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ರೈತರ ಮೇಲೆ ಲಾಠೀಚಾರ್ಜ್ ನಡೆಸಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಒಡಿಶಾದ ಜಗತ್‌ಸಿಂಗ್‌ಪುರ ಜಿಲ್ಲೆಯ ಧಿಂಕಿಯಾ ಗ್ರಾಮದ ಬಳಿ ನಡೆದಿದೆ.

ಧಿಂಕಿಯಾ, ನುಗಾಂವ್ ಮತ್ತು ಗಡಕುಜಾಂಗ್‌ನ ಕಡಲತೀರದ ಗ್ರಾಮ ಪಂಚಾಯತ್‌ಗಳಲ್ಲಿ ಉಕ್ಕಿನ ಸ್ಥಾವರವನ್ನು ಸ್ಥಾಪಿಸಲು ಜೆಎಸ್‌ಡಬ್ಲ್ಯುಗೆ ಭೂಮಿ ಮತ್ತು ವೀಳ್ಯದೆಲೆ ತೋಟಗಳನ್ನು ನೀಡಲು ಒಡಿಶಾ ಸರ್ಕಾರ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ರೈತರು ವ್ಯಾಪಕ ಪ್ರತಿಭಟನೆ ನಡೆಸುತ್ತಿದ್ದರು.

ತಮ್ಮ ಭೂಮಿ ಮತ್ತು ವೀಳ್ಯದೆಲೆ ತೋಟಗಳನ್ನು ಉಳಿಸಿಕೊಳ್ಳಲು ಜೆಎಸ್‌ಡಬ್ಲ್ಯು ಲಿಮಿಟೆಡ್ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರು. ತೋಟಗಳನ್ನು ಕೆಡವದಂತೆ ಪ್ರತಿಭಟನೆ ನಡೆಸುತ್ತಿದ್ದ ಗ್ರಾಮಸ್ಥರ ಮೇಲೆ ಪೊಲೀಸರು ಮಾರಣಾಂತಿಕವಾಗಿ ಲಾಠಿ ಚಾರ್ಜ್ ಮಾಡಿದ್ದು, ಮಹಿಳೆಯರು ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಗ್ರಾಮಸ್ಥರು ತೀವ್ರವಾಗಿ ಗಾಯಗೊಂಡಿದ್ದಾರೆ.

ಧಿಂಕಿಯಾ ಗ್ರಾಮದ ಮಹಿಳೆಯರು ಈ ಹಿಂದೆ ದೇಬೇಂದ್ರ ಸ್ವೈನ್ ಅವರನ್ನು ಬಂಧಿಸುವ ಪೊಲೀಸರ ಪ್ರಯತ್ನವನ್ನು ವಿಫಲಗೊಳಿಸಿದ್ದರು, ನಂತರ ನೂರಾರು ಜನರು ತಕ್ಷಣವೇ ಪೊಲೀಸರನ್ನು ಗ್ರಾಮವನ್ನು ತೊರೆಯುವಂತೆ ಒತ್ತಾಯಿಸಿದರು.



“ಪೊಲೀಸ್ ಅಧಿಕಾರಿಗಳು ನಮ್ಮನ್ನು ನಿರ್ದಯವಾಗಿ ಥಳಿಸಿದ್ದಾರೆ, ಅವರು ಜಿಂದಾಲ್‌ನಿಂದ ಹಣವನ್ನು ತೆಗೆದುಕೊಂಡಿದ್ದಾರೆ” ಎಂದು 7 ನೇ ತರಗತಿಯ ಹುಡುಗಿ ಸುಭಾಸ್ಮಿತಾ ಸತ್ಪತಿ ಆರೋಪಿಸಿದ್ದಾರೆ.

“ನಮ್ಮ ಭೂಮಿ ಮತ್ತು ಮನೆಗಾಗಿ ನಾವು ಹೋರಾಡುತ್ತಿರುವುದು ನಮ್ಮ ಏಕೈಕ ತಪ್ಪು. ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿರುವ ನಮ್ಮ ಸ್ನೇಹಿತರೊಬ್ಬರು ನೆಲದ ಮೇಲೆ ಬಿದ್ದಾಗ ಅವರು ಕೆಟ್ಟದಾಗಿ ಥಳಿಸಿದ್ದಾರೆ” ಎಂದು ಸುಭಾಸ್ಮಿತಾ ಮಾಧ್ಯಮಗಳಿಗೆ ವಿವರಿಸಿದ್ದಾರೆ.

ರಾಜ್ಯ ಸರಕಾರ ಪೊಲೀಸರನ್ನು ಬಳಸಿ ನಮ್ಮ ಮೇಲೆ ದಾಳಿ ನಡೆಸುತ್ತಿದೆ. ನಾವು ಯಾವುದೇ ಕಾರಣಕ್ಕೂ ಭೂಮಿಯನ್ನು ಕೊಡುವುದಿಲ್ಲ ಎಂದು ಪ್ರತಿಭಟನೆಕಾರರು ಎಚ್ಚರಿಸಿದ್ದಾರೆ.

ಜನವರಿ 20ರಂದು ಸಿಪಿಐ(ಎಂ) ಸೇರಿದಂತೆ 13 ರಾಜಕೀಯ ಪಕ್ಷಗಳ ಮುಖಂಡರು ರಾಜ್ಯಪಾಲರನ್ನು ಭೇಟಿಯಾಗಿ ಧಿಂಕಿಯಾದಿಂದ ಪೋಲೀಸ್ ಪಡೆಗಳನ್ನು ತಕ್ಷಣವೇ ಹಿಂದಕ್ಕೆ ಕರೆಸಿಕೊಳ್ಳಬೇಕು, ಮತ್ತು ಆದಿವಾಸಿ ಜನಗಳ ದಮನವನ್ನು ನಿಲ್ಲಿಸಬೇಕು ಎಂದು ಒಂದು ಮನವಿ ಪತ್ರವನ್ನು ಸಲ್ಲಿಸಿವೆ.

ಕೌಟುಂಬಿಕ ಹಿಂಸೆಯಲ್ಲಿ ಹೆಚ್ಚಳ: ಉತ್ತರ ಪ್ರದೇಶದಲ್ಲಿ ಅತೀ ಹೆಚ್ಚು ದೌರ್ಜನ್ಯ

ಮನೆಗಳಲ್ಲಿ ಹಿಂಸೆ ಮತ್ತು ಕಿರುಕುಳವಾಗುತ್ತಿದೆ ಎಂದು ದೂರು ನೀಡಿರುವ ಮಹಿಳೆಯರ ಸಂಖ್ಯೆ 2020ಕ್ಕೆ ಹೋಲಿಸಿದರೆ 2021 ರಲ್ಲಿ ಗಮನಾರ್ಹ ಏರಿಕೆ ಕಂಡಿದೆ. ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯು)ದ ವಾರ್ಷಿಕ ಮಾಹಿತಿಯಲ್ಲಿ ಈ ಅಂಕಿ–ಅಂಶ ಹೊರಬಿದ್ದಿದೆ.

ಅದರಲ್ಲೂ ಕೊರೋನಾ ಸಾಂಕ್ರಾಮಿಕ ಆರಂಭವಾದಾಗಿಂದ ಕೌಟುಂಬಿಕ ಹಿಂಸೆ ಹೆಚ್ಚಾಗುತ್ತಿದೆ ಎಂದು ತಿಳಿದುಬಂದಿದೆ. 2021ರಲ್ಲಿ ಮಹಿಳಾ ಆಯೋಗಕ್ಕೆ 30,865 ದೂರುಗಳನ್ನು ನೀಡಲಾಗಿದೆ. ಅದರಲ್ಲಿ 72.5% (22,379) ದೂರುಗಳನ್ನ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಘನತೆಯಿಂದ ಬದುಕುವ ಹಕ್ಕನ್ನು ಕಸಿದುಕೊಂಡಿರುವುದು 36%, ಕೌಟುಂಬಿಕ ಹಿಂಸೆಯಿಂದ ರಕ್ಷಣೆ 21.6%, ಮತ್ತು ವರದಕ್ಷಿಣೆ ಸೇರಿದಂತೆ ವಿವಾಹಿತ ಮಹಿಳೆಯರ ಕಿರುಕುಳದ ದೂರುಗಳು 15% ಇವೆ ಎಂಬ ಅಂಶ ಆ ವರದಿಯಿಂದ ಬಯಲಾಗಿದೆ.

ಬಿಜೆಪಿ ಸರಕಾರ ಇರುವ ಉತ್ತರಪ್ರದೇಶದಲ್ಲಿ ಮಹಿಳೆಯರ ಮೇಲಿನ ಅಪರಾಧಗಳ ಪ್ರಕರಣಗಳಲ್ಲಿ ಅತಿ ಹೆಚ್ಚು ದೂರುಗಳಿವೆ. ಮಹಿಳೆಯರ ಮೇಲಿನ ಅಪರಾಧಗಳಲ್ಲಿ ಅದು ಅಗ್ರಸ್ಥಾನದಲ್ಲಿದೆ. ಇಲ್ಲಿ 15,828 ದೂರುಗಳು ದಾಖಲಾಗಿವೆ. ದೆಹಲಿ ಎರಡನೇ ಸ್ಥಾನದಲ್ಲಿದೆ. ದೆಹಲಿಯಲ್ಲಿ 3,336 ದೂರುಗಳು ದಾಖಲಾಗಿವೆ. ಮಹಾರಾಷ್ಟ್ರದಲ್ಲಿ 1,504, ಹರಿಯಾಣದಲ್ಲಿ 1,460 ಮತ್ತು ಬಿಹಾರದಲ್ಲಿ 1,456 ದೂರುಗಳು ದಾಖಲಾಗಿವೆ.

ಅಂದರೆ, ಎಲ್ಲಾ ದೂರುಗಳಲ್ಲಿ 51.3% ಉತ್ತರ ಪ್ರದೇಶದಿಂದ ಬಂದಿದ್ದು, ದೆಹಲಿ 10.8% ಮತ್ತು ಮಹಾರಾಷ್ಟ್ರ 4.9%ಮೂಲಕ ಮೂರನೇ ಸ್ಥಾನದಲ್ಲಿದೆ. 2020 ರಲ್ಲಿ ಸ್ವೀಕರಿಸಿದ ಒಟ್ಟು ದೂರುಗಳ ಸಂಖ್ಯೆ 23,722. ಅದೇ 2021 ರಲ್ಲಿ ದೂರುಗಳ ಸಂಖ್ಯೆ 30,865 ಕ್ಕೆ ಏರಿದ್ದು 30% ಹೆಚ್ಚಾಗಿದೆ.


ಮೂರು ಸಾವಿರಕ್ಕೂ ಹೆಚ್ಚು ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು: ಎನ್‌ಸಿಡಬ್ಲ್ಯುಅಂಕಿಅಂಶಗಳ ಪ್ರಕಾರ, ಲೈಂಗಿಕ ದೌರ್ಜನ್ಯ ಅಥವಾ ಮಹಿಳೆಯರ ಕಿರುಕುಳದ ಅಪರಾಧಗಳಿಗೆ ಸಂಬಂಧಿಸಿದಂತೆ 1,819 ದೂರುಗಳು, 1,675 ಅತ್ಯಾಚಾರ ಮತ್ತು ಅತ್ಯಾಚಾರ ಯತ್ನದ ದೂರುಗಳು, 1,537 ದೂರುಗಳು ಮಹಿಳೆಯರ ಬಗ್ಗೆ ಪೊಲೀಸರ ಅಸಡ್ಡೆ ದೂರುಗಳು ಮತ್ತು 858 ಸೈಬರ್ ಅಪರಾಧಗಳ ದೂರುಗಳು ಬಂದಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಾಂಕ್ರಾಮಿಕವು ಪ್ರಪಂಚದಾದ್ಯಂತ ಎಲ್ಲರಿಗೂ ಸವಾಲಾಗಿದೆ, ವಿಶೇಷವಾಗಿ ಮಹಿಳೆಯರಿಗೆ. ಹಿಂಸಾಚಾರದಿಂದ ಪೀಡಿತ ಮಹಿಳೆಯರಿಗಾಗಿ ಕಳೆದ ವರ್ಷ ಆಯೋಗ 24/7 ಸಹಾಯವಾಣಿಯನ್ನು ಪ್ರಾರಂಭಿಸಿತು. ಆಯೋಗವನ್ನು ನಂಬಿ ದೇಶದ ಹಲವು ಮಹಿಳೆಯರು ತಮ್ಮ ಕಷ್ಟಗಳಿಂದ ಮುಕ್ತಿ ಪಡೆಯಲು ಮುಂದೆ ಬರುತ್ತಿದ್ದಾರೆ. ನಮ್ಮ ಸಹಾಯವಾಣಿಗೆ ಪ್ರತಿದಿನ ಸುಮಾರು 400 ಕರೆಗಳು ಬರುತ್ತಿವೆ, ಸಹಾಯವನ್ನು ಕೋರಿ ವಾರಕ್ಕೆ ಸುಮಾರು 10 ತುರ್ತು ಕರೆಗಳು ಬರುತ್ತಿವೆ ಎಂದು ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಹೇಳಿದ್ದಾರೆ.

ಚೆಂಗಲ್ಪೇಟ್ ಸಿಪಿಐ(ಎಂ) ಜಿಲ್ಲಾ ಸಮ್ಮೇಳನದ ದಾಖಲೆ

ತಮಿಳುನಾಡಿನ ಚೆಂಗಲ್ಪೇಟ್ ಜಿಲ್ಲಾ ಸಮ್ಮೇಳನ ಒಂದು ದಾಖಲೆಯನ್ನು ಸೃಷ್ಟಿಸಿದೆ. ಅದು ಬಿ.ಎಸ್. ಭಾರತಿ ಅಣ್ಣ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಚುನಾಯಿಸಿದೆ. ಚುನಾಯಿಸಿದೆ. ವಕೀಲ ಶಿಕ್ಷಣ ಪಡೆದಿರುವ ಭಾರತಿ ಅಣ್ಣ ಎಸ್‌ಎಫ್‌ಐ ಮೂಲಕ ಪಕ್ಷಕ್ಕೆ ಸೇರಿದವರು. ಇವರು ದೃಷ್ಟಿವಂಚಿತರಾಗಿರುವ ಇವರು ತಮಿಳುನಾಡು ಭಿನ್ನ ಚೇತನರು ಮತ್ತು ಪಾಲಕರ ಸಂಘದ ಉಪಾಧ್ಯಕ್ಷರೂ ಆಗಿದ್ದಾರೆ.





ಕಾಶ್ಮೀರ ಪ್ರೆಸ್ ಕ್ಲಬ್‌ನಲ್ಲಿ ಆಡಳಿತದ ಹಸ್ತಕ್ಷೇಪ ಸಲ್ಲದು–ಸಿಪಿಐ(ಎಂ)

ಕಾಶ್ಮೀರ ಪ್ರೆಸ್ ಕ್ಲಬ್‌ನ್ನು ರಾಜ್ಯದ ಆಡಳಿತ ಮುಚ್ಚಿರುವ ಬಗ್ಗೆ ಜಮ್ಮು ಮತ್ತು ಕಾಶ್ಮೀರದದ ಸಿಪಿಐ(ಎಂ) ಘಟಕ ಬಲವಾಧ ಕ್ರೋಧವನ್ನು ವ್ಯಕ್ತಪಡಿಸಿದೆ. ಕ್ಲಬ್‌ನ ಮರು–ನೋಂದಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಯಥಾಸ್ಥಿತಿಯನ್ನು ನೆಲೆಗೊಳಿಸಬೇಕು ಎಂದು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಗುಲಾಬ್ ನಬಿ ನಮಲಿಕ್ ಆಗ್ರಹಿಸಿದ್ದಾರೆ.

ಪ್ರೆಸ್ ಕ್ಲಬ್ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸಲು ಅನುವಾಗುವಂತಹ ವಾತಾವರಣವನ್ನು ಆಡಳಿತ ಕಲ್ಪಿಸಬೇಕು ಎಂದ ಮಲಿಕ್ ಅದನ್ನು ಮುಚ್ಚುವುದು ಪತ್ರಕರ್ತರ ಹಕ್ಕುಗಳ ಮೇಲೆ ಒಂದು ನೇರ ಹಲ್ಲೆ, ಪತ್ರಿಕಾರಂಗ ಜನಗಳ ದನಿಯನ್ನು ವಸ್ತುನಿಷ್ಟವಾಗಿ ಎತ್ತುವಂತೆ ಖಾತ್ರಿಪಡಿಸಬೇಕಾದರೆ ಇಂತಹ ಹಲ್ಲೆಗಳು ನಡೆಯಬಾರದು ಎಂದು ಹೇಳಿದ್ದಾರೆ.

ನಿರಂತರ ಸಾಮೂಹಿಕ ನಿರುದ್ಯೋಗದ ಸ್ಥಿತಿಯತ್ತ ವಿಶ್ವ ಬಂಡವಾಳಶಾಹಿ

ಒಟ್ಟು ಬೇಡಿಕೆಯ ಕೊರತೆಯನ್ನು ನೀಗಿಸುವ ಸಲುವಾಗಿ ರಾಷ್ಟ್ರ–ಪ್ರಭುತ್ವಗಳು ಮಧ್ಯಪ್ರವೇಶ ಮಾಡದಂತೆ ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಅವುಗಳನ್ನು ಸಾಕಷ್ಟು ದುರ್ಬಲಗೊಳಿಸಿದೆ. ಆದರೆ, ಅಮೆರಿಕದ ಪ್ರಭುತ್ವ ಮಾತ್ರ ಈ ಮಧ್ಯಪ್ರವೇಶಿಸುವ ಸಾಮರ್ಥ್ಯವನ್ನು ಇನ್ನೂ ಹೊಂದಿತ್ತು. ಅಥವಾ ಉಳಿಸಿಕೊಂಡಿತ್ತು.. ಏಕೆಂದರೆ, ಅಮೆರಿಕದ ಕರೆನ್ಸಿಯನ್ನು "ಚಿನ್ನಕ್ಕೆ ಸಮಾನ" ಎಂದು ಜಾಗತೀಕರಣಗೊಂಡ ಹಣಕಾಸು ಬಂಡವಾಳವೂ ಒಪ್ಪಿಕೊಂಡಿದೆ. ಹಾಗಾಗಿ, ಅಮೆರಿಕದ ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡಿದರೂ ಸಹ, ಹಣಕಾಸು ಬಂಡವಾಳವು ಅಲ್ಲಿಂದ ಪಲಾಯನಗೈಯುತ್ತಿರಲಿಲ್ಲ. ಆದರೆ, ಇನ್ನು ಮುಂದೆ ಇಂತಹ ಆಟ ನಡೆಯುವುದಿಲ್ಲ ಎಂದು ತೋರುತ್ತದೆ. ವಿಶ್ವ ಬಂಡವಾಳಶಾಹಿಯು ನಿರಂತರ ಸಾಮೂಹಿಕ ನಿರುದ್ಯೋಗದ ಸ್ಥಿತಿಗೆ ತಲುಪುತ್ತದೆ. ಈ ಪರಿಸ್ಥಿತಿಯು ರಾಜಕೀಯ ಸ್ಥಿರತೆಯನ್ನು ದುರ್ಬಲಗೊಳಿಸುತ್ತದೆ. ಭಾರತದಂತಹ ದೇಶಗಳಿಗೆ ಅಂತಹ ಪರಿಸ್ಥಿತಿಯ ಪರಿಣಾಮಗಳು ಅಪಾರವೂ ಮತ್ತು ಗಹನವೂ ಆಗುತ್ತವೆ.

ಪ್ರೊ. ಪ್ರಭಾತ್ ಪಟ್ನಾಯಕ್

ಕೊರೊನಾ ಮೊದಲಿನ ಅಮೆರಿಕದ ಪರಿಸ್ಥಿತಿಗೆ ಹೋಲಿಸಿದರೆ, ಈಗಲೂ ಅಲ್ಲಿ ನಲವತ್ತು ಲಕ್ಷ ಮಂದಿ ನಿರುದ್ಯೋಗಿಗಳಿದ್ದಾರೆ. ಅಮೆರಿಕಾದ ಈ ಪರಿಸ್ಥಿತಿಯಲ್ಲಿ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಬಿಡೆನ್ ಆಡಳಿತದ ಪ್ರಯತ್ನವು ಅಲ್ಲಿ ತಲೆ ಎತ್ತುತ್ತಿರುವ ಹಣದುಬ್ಬರದಿಂದಾಗಿ ಮತ್ತಷ್ಟು ಜಟಿಲಗೊಂಡಿದೆ. ಅಮೆರಿಕದಲ್ಲಿ ಮಾತ್ರವಲ್ಲ, ಬೇರೆ ಬಂಡವಾಳಶಾಹಿ ದೇಶಗಳಲ್ಲೂ ಹಣದುಬ್ಬರ ತಲೆ ಎತ್ತಿದೆ. ಈ ಹಣದುಬ್ಬರದ ಸಮಸ್ಯೆಯನ್ನು ಎದುರಿಸಲು ಅಮೆರಿಕದ ಫೆಡರಲ್ ರಿಸರ್ವ್ ಬೋರ್ಡ್ (ಭಾರತದ ರಿಸರ್ವ್ ಬ್ಯಾಂಕ್‌ಗೆ ಸಮಾನ) ಬಡ್ಡಿ ದರಗಳನ್ನು ಶೀಘ್ರದಲ್ಲೇ ಏರಿಸಲು ಹವಣಿಸುತ್ತಿದೆ. ಪ್ರಸ್ತುತ ಶೂನ್ಯಕ್ಕೆ ಹತ್ತಿರದಲ್ಲಿರುವ ಬಡ್ಡಿ ದರಗಳನ್ನು ಅಮೆರಿಕ ಹಣದುಬ್ಬರದ ಸನ್ನಿವೇಶದಲ್ಲಿ ಉಳಿಸಿಕೊಳ್ಳುವುದು ಮತ್ತು ಅದರ ವಿತ್ತೀಯ ವಿಸ್ತರಣೆಯ ಮುಂದುವರೆಕೆಯೂ ಕಷ್ಟದ ಕೆಲಸವೇ. ಚೇತರಿಸಿಕೊಳ್ಳುತ್ತಿದ್ದ ಈ ಸಮಯದಲ್ಲಿ ಅಮೆರಿಕಾದ ಅರ್ಥವ್ಯವಸ್ಥೆಯು ಹಣದುಬ್ಬರದಿಂದಾಗಿ ಮತ್ತೊಂದು ಆಘಾತಕ್ಕೊಳಗಾಗಿದೆ. ಈ ವಿದ್ಯಮಾನವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, "ಚಿನ್ನಕ್ಕೆ ಸಮಾನ" ಎನಿಸಿದ ಕರೆನ್ಸಿ ಹೊಂದಿರುವ ಮತ್ತು ಬಂಡವಾಳವು ಹೊರ ಹರಿಯುಬಾರದಷ್ಟು ಬಲಶಾಲಿ ಕರೆನ್ಸಿ ಹೊಂದಿರುವ, ವಿಶ್ವದ ಅಗ್ರಮಾನ್ಯ ಬಂಡವಾಳಶಾಹಿ ಅಮೆರಿಕದ ಪ್ರಭುತ್ವದ ಸಾಮರ್ಥ್ಯವು, ತನ್ನದೇ ದೇಶದ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲಾರದಷ್ಟು ಗಂಭೀರ ನಿರ್ಬಂಧಗಳಿಗೆ ಒಳಗಾಗಿದೆ.

ಜಾಗತಿಕ ಬಂಡವಾಳಶಾಹಿಯಲ್ಲಿ ಉದ್ಭವಿಸಿರುವ ಮೂಲ ಸ್ವರೂಪದ ಈ ವಿರೋಧಾಭಾಸದ ಬಗ್ಗೆ ಗಮನ ಹರಿಸುವುದು ಇಂದಿನ ಅವಶ್ಯಕತೆಯಾಗುತ್ತದೆ. ಸ್ವಭಾವತಃ ಬಂಡವಾಳಶಾಹಿಯು ಬೃಹತ್ ಸಂಖ್ಯೆಯ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವ ಒಂದು ದೋಷಪೂರಿತ ವ್ಯವಸ್ಥೆಯಾಗಿದ್ದರೂ ಸಹ, ಪ್ರಭುತ್ವದ ಮಧ್ಯಸ್ತಿಕೆಯ ಮೂಲಕ ಈ ದೋಷವನ್ನು ಸರಿಪಡಿಸಬಹುದು ಎಂಬುದಾಗಿ ಇಪ್ಪತ್ತನೇ ಶತಮಾನದ ಅತ್ಯಂತ ಪ್ರಮುಖ ಬೂರ್ಜ್ವಾ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಕೊಟ್ಟಿದ್ದ ಮುನ್ಸೂಚನೆಯನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಈಗಾಗಲೇ ನಿರರ್ಥಕಗೊಳಿಸಿದೆ. ಒಟ್ಟು ಬೇಡಿಕೆಯ ಕೊರತೆಯನ್ನು ನೀಗಿಸುವ ಸಲುವಾಗಿ ರಾಷ್ಟ್ರ–ಪ್ರಭುತ್ವಗಳು ಮಧ್ಯಪ್ರವೇಶ ಮಾಡದಂತೆ ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಅವುಗಳನ್ನು ಸಾಕಷ್ಟು ದುರ್ಬಲಗೊಳಿಸಿದೆ. ಆದರೆ, ಅಮೆರಿಕದ ಪ್ರಭುತ್ವ ಮಾತ್ರ ಈ ಮಧ್ಯಪ್ರವೇಶಿಸುವ ಸಾಮರ್ಥ್ಯವನ್ನು ಇನ್ನೂ ಹೊಂದಿದೆ. ಅಥವಾ ಉಳಿಸಿಕೊಂಡಿದೆ. ಏಕೆಂದರೆ, ಅಮೆರಿಕದ ಕರೆನ್ಸಿಯನ್ನು "ಚಿನ್ನಕ್ಕೆ ಸಮಾನ" ಎಂದು ಜಾಗತೀಕರಣಗೊಂಡ ಹಣಕಾಸು ಬಂಡವಾಳವೂ ಒಪ್ಪಿಕೊಂಡಿದೆ. ಹಾಗಾಗಿ, ಅಮೆರಿಕದ ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡಿದರೂ ಸಹ, ಹಣಕಾಸು ಬಂಡವಾಳವು ಅಲ್ಲಿಂದ ಪಲಾಯನಗೈಯುತ್ತಿರಲಿಲ್ಲ. ಆದರೆ, ಇನ್ನು ಮುಂದೆ ಇಂತಹ ಆಟ ನಡೆಯುವುದಿಲ್ಲ ಎಂದು ತೋರುತ್ತದೆ. ಏಕೆ ನಡೆಯುವುದಿಲ್ಲ ಎಂಬುದನ್ನು ನೋಡೋಣ.

ಬೇರೆ ದೇಶಗಳ ಸರ್ಕಾರಗಳು ತಮ್ಮ ಅರ್ಥವ್ಯವಸ್ಥೆಯನ್ನು ಸಮರ್ಪಕವಾಗಿ ಉತ್ತೇಜಿಸಲು ಸಾಧ್ಯವಾಗದಿರುವುದಕ್ಕೆ ಕಾರಣವೆಂದರೆ, ಈ ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯ ಮಿತಿಯನ್ನು ತಮ್ಮ ಜಿಡಿಪಿಯ ಗಾತ್ರದ ಒಂದು ನಿರ್ದಿಷ್ಟ ಅನುಪಾತಕ್ಕೆ ಸೀಮಿತಗೊಳಿಸಿಕೊಳ್ಳುವಂತೆ ಹಣಕಾಸು ಬಂಡವಾಳವು ಹೇರಿದ ಷರತ್ತಿನಿಂದ ಈ ಸರ್ಕಾರಗಳ ವಿತ್ತೀಯ ನೀತಿಗಳು ನಿರ್ಬಂಧಿಸಲ್ಪಟ್ಟಿದ್ದವು. ಮತ್ತೊಂದೆಡೆಯಲ್ಲಿ, ಈ ದೇಶಗಳ ಹಣಕಾಸು ನೀತಿಗಳನ್ನು ಅಮೆರಿಕದ ಹಣಕಾಸು ನೀತಿಯೊಂದಿಗೆ ಹೊಂದಿಸಿಕೊಳ್ಳಬೇಕಾಗಿತ್ತು. ಉದಾಹರಣೆಗೆ, ಈ ದೇಶಗಳ ಬಡ್ಡಿ ದರಗಳು ಅಮೆರಿಕದ ಬಡ್ಡಿದರಕ್ಕಿಂತ ಸಾಕಷ್ಟು ಹೆಚ್ಚಿನ ಮಟ್ಟದಲ್ಲಿರಬೇಕಿತ್ತು. ಇಲ್ಲದಿದ್ದರೆ, ಈ ದೇಶಗಳು ಬಂಡವಾಳವು ಹೊರಹರಿಯುವ ಗಂಭೀರ ಸಮಸ್ಯೆಯನ್ನು ಎದುರಿಸಬೇಕಿತ್ತು. ಮುಂದುವರಿದ ಬಂಡವಾಳಶಾಹಿ ದೇಶಗಳೂ ಸೇರಿದಂತೆ ಈ ದೇಶಗಳ ಕೈಗಳನ್ನು ಕಟ್ಟಿಹಾಕಲಾಗಿತ್ತು. ಅಮೆರಿಕ ಮಾತ್ರ ಈ ಬಗ್ಗೆ ಸ್ವಾಯತ್ತತೆ ಹೊಂದಿತ್ತು. ಬೇರೆ ದೇಶಗಳಿಗಿಂತ ಹೆಚ್ಚಿನ ವಿತ್ತೀಯ ಕೊರತೆಯನ್ನು ಅಮೆರಿಕ ಹೊಂದಿದ್ದರೂ ಸಹ ಮತ್ತು ಅಮೆರಿಕದ ಬಡ್ಡಿ ದರಗಳು ಶೂನ್ಯ ಮಟ್ಟದಲ್ಲಿದ್ದರೂ ಸಹ, ಬಂಡವಾಳವು ಹೊರ ಹರಿಯುವ ಪ್ರಚೋದನೆಗೆ ಒಳಗಾಗುತ್ತಿರಲಿಲ್ಲ. ಈ ಒಂದು ಎಣಿಕೆಯ ಮೇಲೆ ಬಿಡೆನ್ ಆಡಳಿತವು ತಯಾರಿಸಿದ ಪಾಯಸದಲ್ಲಿ ನೊಣವಿತ್ತು. ಅದು ಈಗ ಕಾಣಿಸಿಕೊಂಡಿದೆ.

ಬಡ್ಡಿ ದರಗಳು ಕೆಳ ಮಟ್ಟದಲ್ಲಿದ್ದಾಗ ಸಾಲದ ಮೇಲಿನ ಭಾರ ತಗ್ಗುವ ಕಾರಣದಿಂದ ಖಾಸಗಿ ಹೂಡಿಕೆಗೆ ಉತ್ತೇಜನ ದೊರೆಯುತ್ತದೆ ಎಂಬದನ್ನು ಅರ್ಥಶಾಸ್ತ್ರದ ಪಠ್ಯಪುಸ್ತಕಗಳು ತಿಳಿಸುತ್ತವೆ. ಇದು ನಿಜವೇ. ಆದರೆ, ಅತಿ ಕೆಳಮಟ್ಟದ ಬಡ್ಡಿ ದರಗಳು ಇನ್ನೂ ಒಂದು ಮಾರ್ಗದ ಮೂಲಕ ಆಸ್ತಿ ಬೆಲೆ ಗುಳ್ಳೆಗಳನ್ನು ಉತ್ತೇಜಿಸುವ ಒಂದು ವಿದ್ಯಮಾನವೂ ಇತ್ತೀಚೆಗೆ ನಡೆದಿದೆ. ಈ ಶತಮಾನದ ಆರಂಭದಲ್ಲಿ ಅಮೆರಿಕದಲ್ಲಿ "ಡಾಟ್–ಕಾಮ್ ಗುಳ್ಳೆ" ಒಡೆದಾಗ, ಫೆಡರಲ್ ರಿಸರ್ವ್ ಬೋರ್ಡ್‌ನ ಅಂದಿನ ಅಧ್ಯಕ್ಷ ಅಲನ್ ಗ್ರೀನ್ ಸ್ಪಾನ್ ಅವರು ಬಡ್ಡಿ ದರಗಳನ್ನು ಇಳಿಸಿದರು. ಬಡ್ಡಿ ದರಗಳನ್ನು ಇಳಿಸಿದ ಈ ಕ್ರಮವು ಅಲ್ಲಿ ವಸತಿ ಗುಳ್ಳೆ ಎಂಬ ಹೊಸ ಗುಳ್ಳೆಯನ್ನು ಎಬ್ಬಿಸಿತು. ಈ ವಸತಿ ಗುಳ್ಳೆಯು, ಅನೇಕ ವ್ಯಕ್ತಿಗಳ ಸಂಪತ್ತನ್ನು ಕೃತಕವಾಗಿ ಹೆಚ್ಚಿಸುವ ಮೂಲಕ, ಅವರ ಬಳಕೆ ವೆಚ್ಚಗಳನ್ನು ಹೆಚ್ಚಿಸಿತು ಮತ್ತು ಅದರ ಜೊತೆಯಲ್ಲಿ ವಸತಿ ಮತ್ತು ಇತರ ಯೋಜನೆಗಳಲ್ಲಿ ಹೆಚ್ಚು ಹೂಡಿಕೆಯನ್ನು ಪ್ರೋತ್ಸಾಹಿಸಿ ಅಮೆರಿಕದ ಅರ್ಥವ್ಯವಸ್ಥೆಯನ್ನು ಒಂದು ಹೊಸ ಭರಾಟೆಯತ್ತ ಕೊಂಡೊಯ್ಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಫೆಡರಲ್ ರಿಸರ್ವ್ ಬೋರ್ಡ್ ಕೆಳ ಮಟ್ಟದ ಬಡ್ಡಿ ದರ ನೀತಿಯು, ಸಾಲದ ಮೇಲಿನ ಬಡ್ಡಿಯನ್ನು ತಗ್ಗಿಸುವ ನೇರ ಪರಿಣಾಮದ ಮೂಲಕ ಮಾತ್ರವಲ್ಲದೆ, ಗಮನಾರ್ಹವಾಗಿ, ಆಸ್ತಿಯ ಬೆಲೆಯನ್ನು ಅದರ "ನಿಜವಾದ ಮೌಲ್ಯ"ಕ್ಕಿಂತ ಅನೇಕ ಪಟ್ಟು ಹೆಚ್ಚಿಸುವ (ಅಂದರೆ, ಆಸ್ತಿಯ ಜೀವಿತಾವಧಿಯ ಗಳಿಕೆಯನ್ನು ರಿಯಾಯ್ತಿಯೊಂದಿಗೆ ಕೊಡುವ ಮುಂಗಡವನ್ನು) ಒಂದು ಸಟ್ಟಾಕೋರ ಆಸ್ತಿ–ಬೆಲೆ ಗುಳ್ಳೆಯನ್ನು ಉತ್ತೇಜಿಸುವ ಮೂಲಕವೂ ಕಾರ್ಯನಿರ್ವಹಿಸಿತು. ಈ ವಿದ್ಯಮಾನವು ಸಾಗುತ್ತಾ ಹೋಗುತ್ತದೆ, ಏಕೆಂದರೆ, ಈ ರೀತಿಯ ಆಸ್ತಿ ಬೆಲೆಗಳು ಅಂತಿಮವಾಗಿ ಕುಸಿಯುತ್ತವೆ ಎಂದು ಎಲ್ಲರೂ ಭಾವಿಸುತ್ತಿರುವಾಗ, ಆಸ್ತಿಯನ್ನು ಹೊಂದಿರುವವರು ಮಾತ್ರ ಬೆಲೆಗಳು ಇನ್ನೂ ಕೆಲ ದಿನಗಳ ಮಟ್ಟಿಗಾದರೂ ಹೆಚ್ಚುತ್ತಾ ಹೋಗುತ್ತವೆ ಎಂದು ನಂಬುತ್ತಾರೆ. ಈ ಏರಿಕೆಯ ಅವಧಿ ಕೊನೆಗೊಳ್ಳುವುದರೊಳಗೆ ಅವರು ತಮ್ಮ ಆಸ್ತಿಗಳನ್ನು(ಷೇರುಗಳನ್ನು) ಮಾರಾಟ ಮಾಡಿ ಲಾಭವನ್ನು ಜೇಬಿಗಿಳಿಸುತ್ತಾರೆ. ಬಡ್ಡಿ ದರಗಳನ್ನು ಕೆಳ ಮಟ್ಟದಲ್ಲಿ ಇರಿಸುವ ಮೂಲಕ ಇಂತಹ ಸಟ್ಟಾಕೋರ ಬೇಡಿಕೆಗಳು ನಿರಂತರವಾಗಿ ಉಳಿಯುವಂತೆ ನೋಡಿಕೊಳ್ಳಲಾಗುತ್ತದೆ.

ಆದರೆ, ಕೆಳ ಮಟ್ಟದ ಬಡ್ಡಿ ದರಗಳು ಆಸ್ತಿ ಮಾರುಕಟ್ಟೆಗಳಲ್ಲಿ ಮಾತ್ರವಲ್ಲದೆ ಸರಕು ಮಾರುಕಟ್ಟೆಗಳಲ್ಲಿಯೂ ಸಹ ಸಟ್ಟಾಕೋರತನವನ್ನು ಪ್ರೋತ್ಸಾಹಿಸಬಹುದು. ಈ ತೆರನಾದ ವಿದ್ಯಮಾನಗಳು ಅಮೆರಿಕದಲ್ಲಿ ನಿಜಕ್ಕೂ ನಡೆಯುತ್ತಿವೆ. ಏಕೆಂದರೆ, ವಸತಿ ಗುಳ್ಳೆ ಕುಸಿತದ ನಂತರ ಸಟ್ಟಾ ಕೋರರು ವಿಶೇಷವಾಗಿ ಆಸ್ತಿ–ಮಾರುಕಟ್ಟೆಗಳ ಬಗ್ಗೆ ಹುಷಾರಾಗಿದ್ದಾರೆ. ಹಾಗಾಗಿ, ಒಂದಲ್ಲ ಒಂದು ಕಾರಣದಿಂದಾಗಿ ತಾತ್ಕಾಲಿಕ ಕೊರತೆ ಉಂಟಾಗಬಹುದಾದ ಅಥವಾ ಪೂರೈಕೆಯಲ್ಲಿ ತಾತ್ಕಾಲಿಕ ಅಡಚಣೆಗಳಿರುವ ಮತ್ತು ಬೆಲೆಗಳು ಶೀಘ್ರದಲ್ಲೇ ಏರುವ ಸಾಧ್ಯತೆಯಿರುವ ಸರಕುಗಳ ಮೇಲೆ ಹೂಡಿಕೆ ಮಾಡಲಾರಂಭಿಸಿದ್ದಾರೆ. ಮಾತ್ರವಲ್ಲ, ಬೇಡಿಕೆ ಸ್ಥಿತಿ–ಸ್ಥಾಪಕತ್ವವಿಲ್ಲದ(ಅಂದರೆ, ಬೆಲೆಗಳು ಹೆಚ್ಚಿದ ಕಾರಣದಿಂದ ಬೇಡಿಕೆ ಹೆಚ್ಚು ಕುಸಿಯದ) ಸರಕುಗಳ ಮೇಲೆಯೂ ಹೂಡಿಕೆ ಮಾಡುತ್ತಾರೆ. ಒಂದು ವೇಳೆ ಪೂರೈಕೆಯ ಅಡಚಣೆಗಳಿಲ್ಲದಿದ್ದರೂ, ಕೃತಕ ಕೊರತೆಯನ್ನು ಸೃಷ್ಟಿಸಿ ಲಾಭ ಮಾಡಿಕೊಳ್ಳಬಹುದು. ಮುಖ್ಯವಾದ ಅಂಶವೆಂದರೆ, ಸಾಲಗಳು ಸುಲಭವಾಗಿ ಲಭ್ಯವಿದ್ದಾಗ ಬೇಡಿಕೆಯು ಸ್ಥಿತಿಸ್ಥಾಪಕತ್ವ ರಹಿತವಾಗುತ್ತದೆ. ಆಗ ಜನರು ತಮ್ಮ ಬೇಡಿಕೆಯ ವಸ್ತುಗಳನ್ನು ಪಡೆಯಲು ಸಾಲದ ಮೊರೆ ಹೋಗುತ್ತಾರೆ.

ಈ ರೀತಿಯಲ್ಲಿ ಬೆಲೆಗಳು ಏರಿದ ನಂತರ, ಈ ಬೆಲೆ ಏರಿಕೆಯಿಂದಾಗಿ ಉಂಟಾದ ನಷ್ಟವನ್ನು ಸರಿದೂಗಿಸಲು ಕಾರ್ಮಿಕರು ವೇತನ ಹೆಚ್ಚಳದ ಬೇಡಿಕೆಯನ್ನು ಮುಂಡಿಸುತ್ತಾರೆ. ಕಾರ್ಮಿಕರ ವೇತನದ ಹೆಚ್ಚಳವನ್ನು ಬೆಲೆ ಏರಿಕೆ ಅನುಸರಿಸುತ್ತದೆ. ಹೀಗೆ, ಒಂದು ಸಂಪೂರ್ಣ ಬೆಲೆ–ವೇತನ ಸುರುಳಿ ಪ್ರಾರಂಭವಾಗಬಹುದು. ಈಗ ಅಮೆರಿಕದಲ್ಲಿ ಇದು ಘಟಿಸುತ್ತಿದೆ. ಇಂತಹ ಒಂದು ಹಣದುಬ್ಬರದ ಸುರುಳಿ ಪ್ರಾರಂಭವಾದ ನಂತರ, ಅರ್ಥವ್ಯವಸ್ಥೆಗೆ ಒದಗಿಸುವ ಉತ್ತೇಜನವನ್ನು, ಗತ್ಯಂತರವಿಲ್ಲದೆ, ನಿಲ್ಲಿಸಲೇ ಬೇಕಾಗುತ್ತದೆ.

ಬೆಲೆಗಳನ್ನು ಕೃತಕವಾಗಿ ಏರಿಸಲೇಬೇಕು ಎಂದಾದರೆ, ಅದಕ್ಕಾಗಿಯೇ ಹೇಳಿ ಮಾಡಿಸಿದಂತಹ ಯಾವುದಾದರೂ ಒಂದು ವಸ್ತು ಇದೆ ಎಂದಾದರೆ ಅದು ಪೆಟ್ರೋಲ್ ಮಾತ್ರ. ನವೆಂಬರ್ 2021 ರಲ್ಲಿ ಅಮೆರಿಕದಲ್ಲಿ ಪೆಟ್ರೋಲ್ ಬೆಲೆಗಳು ನವೆಂಬರ್ 2020ರ ಪೆಟ್ರೋಲ್ ಬೆಲೆಗಳಿಗೆ ಹೋಲಿಸಿದರೆ ಶೇಕಡಾ 58ರಷ್ಟು ಹೆಚ್ಚಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. 1980ರ ನಂತರ ಯಾವುದೇ ಒಂದು ತಿಂಗಳಿನಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಪೆಟ್ರೋಲ್ ಬೆಲೆಗಳು ಏರಿಕೆಯಾದದ್ದಿಲ್ಲ. 1980ರಲ್ಲಿ ಒಪೆಕ್ ದೇಶಗಳು ಕಚ್ಚಾ ತೈಲದ ಬೆಲೆಗಳನ್ನು ಕಾರಣಾಂತರಗಳಿಂದ ತೀವ್ರವಾಗಿ ಏರಿಸಿದ ಎರಡನೇ ತೈಲ ಆಘಾತದ ಸಂದರ್ಭದಲ್ಲಿ ಪೆಟ್ರೋಲ್ ಬೆಲೆಗಳು ತೀಕ್ಷ್ಣವಾಗಿ ಏರಿದ್ದವು. ಹೇಳಿಕೊಳ್ಳಲಿಕ್ಕಾದರೂ ಅಂತಹ ಯಾವ ಕಾರಣವೂ ಇಲ್ಲದಿದ್ದರೂ ಈಗ ಅಮೆರಿಕದಲ್ಲಿ ಪೆಟ್ರೋಲ್ ಬೆಲೆಗಳು ಶೇಕಡಾ 58ರಷ್ಟು ಏರಿವೆ. ವಾಸ್ತವವಾಗಿ, ಅಮೆರಿಕದ ಆಡಳಿತವು ತೈಲ ಬೆಲೆಗಳನ್ನು ಇಳಿಸುವ ಉದ್ದೇಶದಿಂದ ತಾನು ಹೊಂದಿರುವ ತೈಲ ದಾಸ್ತಾನನ್ನು ಬಳಕೆ ಮಾಡಿಕೊಳ್ಳುವ ಸನ್ನಾಹದಲ್ಲಿದೆ.

ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಆರ್ಥಿಕ ನೀತಿಗಳನ್ನು ರೂಪಿಸುವ ಸಮಯದಲ್ಲಿ ಸರಕುಗಳ ಸಟ್ಟಾ ಬಾಜಿತನವು, ಸಾಮಾನ್ಯವಾಗಿ, ಒಂದು ಅಂಶವಾಗಿ ಪರಿಗಣಿತವಾಗಿಲ್ಲ. ಕೆಳಮಟ್ಟದ ಬಡ್ಡಿ ದರಗಳು ಆಸ್ತಿ ಬೆಲೆ ಗುಳ್ಳೆಗಳನ್ನು ಉತ್ತೇಜಿಸುವ ಮೂಲಕ ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸುತ್ತವೆ ಮತ್ತು ಬಹುಶಃ ಸಾಲದ ಮೇಲಿನ ಬಡ್ಡಿಯನ್ನು ಇಳಿಸುವುದರಿಂದ ಹೂಡಿಕೆಯನ್ನು ಹೆಚ್ಚಿಸುತ್ತವೆ ಎಂಬುದನ್ನು ಯಥಾಕ್ರಮದಲ್ಲಿ ಆಗತಕ್ಕ ಒಂದು ಕ್ರಿಯೆ ಎಂದು ತಿಳಿಯಲಾಗಿದೆ. ಆದರೆ, ಕೆಳಮಟ್ಟದ ಬಡ್ಡಿ ದರಗಳು ಸರಕುಗಳ ಸಟ್ಟಾ ಬಾಜಿತನವನ್ನೂ ಪ್ರೋತ್ಸಾಹಿಸಬಹುದು ಮತ್ತು ಅದರ ಪರಿಣಾಮವಾಗಿ ಉಂಟಾಗುವ ಬೆಲೆ ಏರಿಕೆಯು ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಬದಲು ಅದರ ಇಳಿಕೆಗೂ ಕಾರಣವಾಗಬಹುದು ಎಂಬ ಅಂಶವನ್ನು ಇನ್ನೂ ಗುರುತಿಸಿಲ್ಲ. ಕೆಳ–ಬಡ್ಡಿ ದರ ನೀತಿಯ ಪರಿಣಾಮವಾಗಿ ಒಟ್ಟಾರೆ ಬೇಡಿಕೆಯು ಇಳಿಯುವ ಅಂಶವಂತೂ ಈಗ ನಿಚ್ಚಳವಾಗಿದೆ. ಆದಾಗ್ಯೂ, ಒಟ್ಟು ಬೇಡಿಕೆಯ ಮಟ್ಟವನ್ನು ಹೆಚ್ಚಿಸಲು ಮಧ್ಯಪ್ರವೇಶಿಸುವ ಪ್ರಭುತ್ವದ ಪ್ರಯತ್ನವು ಹೆಚ್ಚು ಕಷ್ಟಕರವಾಗಿ ಪರಿಣಮಿಸಿದೆ.

ಬೇಡಿಕೆಯನ್ನು ಉತ್ತೇಜಿಸುವ ಸಲುವಾಗಿ ವಿತ್ತೀಯ ಕ್ರಮಗಳ ಮೂಲಕ ಸರ್ಕಾರದ ಮಧ್ಯಪ್ರವೇಶವನ್ನು ಅಂತರರಾಷ್ಟ್ರೀಯ ಹಣಕಾಸು ಬಂಡವಾಳವು ಆಕ್ಷೇಪಿಸುತ್ತದೆ. ಆದರೆ, ಹಣಕಾಸು ನೀತಿಯ ಮೂಲಕ ಮಧ್ಯಪ್ರವೇಶ ಮಾಡುವುದನ್ನು ಅದು ಆಕ್ಷೇಪಿಸುವುದಿಲ್ಲ. ಏಕೆಂದರೆ, ಹಣಕಾಸು ನೀತಿಯು ಬಂಡವಾಳಶಾಹಿಗಳ ಮೂಲಕವೇ ಜಾರಿಯಾಗುತ್ತದೆ. ಹಾಗಾಗಿ, ಬಂಡವಾಳಶಾಹಿಗಳು ಪ್ರಸನ್ನರಾಗುತ್ತಾರೆ. ಆದರೆ, ಪೂರೈಕೆ–ಬದಿಯ ಯಾವುದೇ ಪ್ರಮುಖ ಅಡಚಣೆ ಕಾಣಿಸಿಕೊಳ್ಳುವ ಮೊದಲೇ ಹಣದುಬ್ಬರವು ಉದ್ಭವವಾಗುವ ಕಾರಣದಿಂದ ಅಮೆರಿಕದಂತಹ ದೇಶದಲ್ಲೂ ಹಣಕಾಸು ನೀತಿಯು ನಿಷ್ಫಲವಾದರೆ, ಆಗ, ಸಾಮೂಹಿಕ ನಿರುದ್ಯೋಗವನ್ನು ನಿವಾರಿಸಲು ಮತ್ತು ಆರ್ಥಿಕ ಚಟುವಟಿಕೆಯನ್ನು ಪುನರುಜ್ಜೀವನಗೊಳಿಸಲು ವ್ಯವಸ್ಥೆಯಲ್ಲಿ ಯಾವ ಸಾಧನವೂ ಉಳಿಯುವುದಿಲ್ಲ.

ಹಣಕಾಸು ನೀತಿಯನ್ನು ಒಂದು ಕೆಟ್ಟ ಪರಿಸ್ಥಿತಿಯಲ್ಲೂ ಉಪಯೋಗಿಸಬಹುದಾದ ಮತ್ತು ಕನಿಷ್ಟ ಪಕ್ಷ ಒಂದು ಮೊಂಡು ಸಾಧನವೆಂದು ಇಲ್ಲಿಯವರೆಗೂ ಪರಿಗಣಿಸಲಾಗಿತ್ತು. ಹತ್ತಿರ ಹತ್ತಿರ ಶೂನ್ಯ ಮಟ್ಟದ ಬಡ್ಡಿ ದರವಿದ್ದರೂ ಸಹ ಹೂಡಿಕೆಯ ಚೇತರಗೊಳ್ಳದಿರುವಾಗ, ಬಡ್ಡಿ ದರವನ್ನು ಋಣಾತ್ಮಕ ವಲಯಕ್ಕೆ ತಳ್ಳಬೇಕು ಎಂದು ಅನೇಕರು ವಾದಿಸಿದ್ದರು. ಋಣಾತ್ಮಕ ಬಡ್ಡಿ ದರಗಳ ಪರಿಸ್ಥಿತಿಯನ್ನು ಸಹಿಸಿಕೊಳ್ಳುವುದು ಕಷ್ಟದ ಕೆಲಸವೇ. ಏಕೆಂದರೆ, ಹೂಡಿಕೆದಾರರಿಗೆ ಋಣಾತ್ಮಕ ಬಡ್ಡಿ ದರಗಳನ್ನು ವಿಧಿಸುವ ಯಾವುದೇ ಹಣಕಾಸು ವ್ಯವಸ್ಥೆಯು ಠೇವಣಿದಾರರಿಗೆ ಧನಾತ್ಮಕ ಬಡ್ಡಿ ದರಗಳನ್ನು ಪಾವತಿಸುವುದು ಸಾಧ್ಯವಿಲ್ಲ. ಠೇವಣಿದಾರರಿಗೆ ಕೊಡುವ ಬಡ್ಡಿ ದರಗಳೂ ಸಹ ಋಣಾತ್ಮಕವಾಗಿಯೇ ಇರಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ಯಾರಾದರೂ ಹಣವನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವ ಬದಲು ಹಣಕಾಸು ಸಂಸ್ಥೆಯಲ್ಲಿ ಠೇವಣಿ ಮಾಡಲು ಯಾವ ಕಾರಣವೂ ಇಲ್ಲ.

ಶೂನ್ಯ ಮಟ್ಟದ ಹತ್ತಿರದಲ್ಲಿರುವ ಬಡ್ಡಿ ದರವು ಹೂಡಿಕೆಯನ್ನು ಚೇತರಗೊಳಿಸದಿರುವುದರ ಹೊರತಾಗಿಯೂ, ಅದು(ಈ ಶೂನ್ಯ ಮಟ್ಟದ ಬಡ್ಡಿ ದರವು) ಸರಕು ಸಟ್ಟಾಕೋರತನದ ಮೂಲಕ ಹಣದುಬ್ಬರಕ್ಕೂ ಕಾರಣವಾಗುವ ಪರಿಣಾಮವನ್ನೂ ಸಹ ಹೊಂದಿದೆ. ಹಾಗಾಗಿ, ಒಟ್ಟು ಬೇಡಿಕೆಯನ್ನು ಉತ್ತೇಜಿಸುವ ಯಾವ ಸಾಧನವೂ ಇಲ್ಲದ ಪ್ರಮುಖ ಬಂಡವಾಳಶಾಹಿ ದೇಶವು, ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಧಾನವಾಗಿ ಜಾಗತಿಕ ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ಬಿಟ್ಟುಕೊಡುತ್ತದೆ.

ನಿರುದ್ಯೋಗವು ನಿರಂತರವಾಗಿ ಮುಂದುವ 'ರೆಯುತ್ತಿರುವುದರಿಂದಾಗಿ ವಿಶ್ವದ ಎಲ್ಲೆಡೆಯೂ ನಿಜ ವೇತನಗಳು ಬಹುತೇಕ ಸ್ಥಗಿತವಾಗಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಏರುತ್ತಿರುವ ಕಾರ್ಮಿಕ ಉತ್ಪಾದಕತೆಯು ವಿಶ್ವ ಉತ್ಪಾದನೆಯಲ್ಲಿ ಆರ್ಥಿಕ ಹೆಚ್ಚುವರಿಯ ಪಾಲನ್ನು ವೃದ್ಧಿಸಿದೆ ಮತ್ತು ಈ ಮೂಲಕ ಅತಿಯಾದ ಉತ್ಪಾದನೆಯು ಜಾಗತಿಕ ಅರ್ಥವ್ಯವಸ್ಥೆಯನ್ನು ಇನ್ನಷ್ಟು ಆಳವಾದ ಬಿಕ್ಕಟ್ಟಿಗೆ ತಳ್ಳುತ್ತದೆ. ಅದೇ ಸಮಯದಲ್ಲಿ, ಒಟ್ಟು ಬೇಡಿಕೆಯ ಮಟ್ಟವನ್ನು ಹೆಚ್ಚಿಸಲು ಯಾವ ಸಾಧನವೂ ಲಭ್ಯವಿಲ್ಲದಿದ್ದರೆ, ಅಂದರೆ, ಅತಿಯಾದ ಉತ್ಪಾದನೆಯ ಬಿಕ್ಕಟ್ಟನ್ನು ಎದುರಿಸಲು, ವಿಶ್ವ ಬಂಡವಾಳಶಾಹಿಯು ನಿರಂತರ ಸಾಮೂಹಿಕ ನಿರುದ್ಯೋಗದ ಸ್ಥಿತಿಗೆ ತಲುಪುತ್ತದೆ. ಈ ಪರಿಸ್ಥಿತಿಯು ರಾಜಕೀಯ ಸ್ಥಿರತೆಯನ್ನು ದುರ್ಬಲಗೊಳಿಸುತ್ತದೆ. ಭಾರತದಂತಹ ದೇಶಗಳಿಗೆ ಅಂತಹ ಪರಿಸ್ಥಿತಿಯ ಪರಿಣಾಮಗಳು ಅಪಾರವೂ ಮತ್ತು ಗಹನವೂ ಆಗುತ್ತವೆ.

ಅನು: ಕೆ.ಎಂ. ನಾಗರಾಜ್

JANASHAKTHI KANNADA VARA PATRIKE JANUARY 24-30, 2022 Price: Rs. 10/- Date of Publication: 21 JANUARY 2022 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate**


ರಾಜಾಜಿನಗರ, ಬೆಂಗಳೂರು





ಕರ್ನಾಟಕದ ಸಂವಿಧಾನ-ವಿರೋಧಿ ಮತಾಂತರ ನಿಷೇಧ ಕಾಯ್ದೆಯ ವಾಪಾಸ್ಸಾತಿಗಾಗಿ ರಾಜ್ಯವ್ಯಾಪಿ ಸಿಪಿಐ(ಎಂ) ಪ್ರತಿಭಟನೆ


ಕೆ.ಆರ್.ಪುರಂ, ಬೆಂಗಳೂರು



ಶಿವಮೊಗ್ಗ


ರಾಯಚೂರು


ಕಮಲನಗರ, ಬೆಂಗಳೂರು



ಯಾದಗಿರಿ


ಮಂಡ್ಯ



ತುಮಕೂರು



ಧಾರವಾಡ



ಉತ್ತರ ಕನ್ನಡ



ಯಾದಗಿರಿ

ರೈತ ಕಾರ್ಮಿಕರ ಸಖ್ಯತೆಯ ದೇಶದ ಪ್ರಪ್ರಥಮ ಸಾರ್ವತ್ರಿಕ ಮುಷ್ಕರಕ್ಕೆ 40 ವರ್ಷಗಳು



ಬೆಂಗಳೂರು



ಉಡುಪಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**